

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಡಿಸೆಂಬರ್ 6 ಮಂಗಳವಾರ 2022

ಸಂಪುಟ: 43 | ಸಂಚಿಕೆ: 229 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ವಿಧಾನಸಭಾ ಚುನಾವಣಾ ರಾಜಕೀಯ ಪ್ರಕ್ರಿಯೆ ಆರಂಭ
ಟಿಕೆಟ್ ಹಂಚಿಕೆ ಮುನ್ನವೇ ಬಂಡಾಯ ಶಮನಕ್ಕೆ

ಕಾಂಗ್ರೆಸ್ ಕಾರ್ಯತಂತ್ರ






ಬೆಂಗಳೂರು, ಡಿ.5 (ಕೆಎಂಶಿ)–ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಅಧಿಕೃತ ಅಭ್ಯರ್ಥಿಗಳಿಗೆ ಟಿಕೆಟ್ ನೀಡುವ ಮುನ್ನ ಆಯಾ ಕ್ಷೇತ್ರಗಳ ಬಂಡಾಯವನ್ನು ಶಮನಗೊಳಿಸಲು ಕಾಂಗ್ರೆಸ್ ಮುಂದಾಗಿದೆ. ಚುನಾವಣೆಯಲ್ಲಿ ಸ್ಪರ್ಧಿಸಲು ಬಯಸಿ ಆಕಾಂಕ್ಷಿಗಳು ಸಲ್ಲಿಸಿರುವ ಅರ್ಜಿಗಳಿಂದ ರಾಜ್ಯ ನಾಯಕರು ಹೌಹಾರಿದ್ದಾರೆ.

ಕೆಲವು ಕ್ಷೇತ್ರಗಳಲ್ಲಿ ಕನಿಷ್ಠ 3 ರಿಂದ 24 ಆಕಾಂಕ್ಷಿಗಳು ಇದ್ದಾರೆ. ಚುನಾವಣೆ ಸಂದರ್ಭದಲ್ಲಿ ಬಂಡಾಯ ಏಳಬಾರದೆಂಬ ಉದ್ದೇಶದಿಂದ ಇದೇ 15 ರಿಂದ ಪ್ರತಿ ಕ್ಷೇತ್ರದ ಆಕಾಂಕ್ಷಿಗಳ ಸಭೆ ಕರೆಯಲಾಗಿದೆ. ಪ್ರತಿ ಕ್ಷೇತ್ರದಲ್ಲಿ ಆಕಾಂಕ್ಷಿಗಳ ದಂಡೇ ಇರುವುದರಿಂದ ಎಲ್ಲರಿಗೂ ಟಿಕೆಟ್ ನೀಡಲು ಸಾಧ್ಯವಿಲ್ಲ. ಅಧಿಕೃತ ಅಭ್ಯರ್ಥಿಗಳ ವಿರುದ್ಧ ಟಿಕೆಟ್ ದೊರೆಯದವರು ಬಂಡಾಯ ಏಳಬಾರದೆಂಬ ಕಾರಣಕ್ಕೆ ಪ್ರತಿ ಕ್ಷೇತ್ರದ ಆಕಾಂಕ್ಷಿಗಳ ಸಭೆಯನ್ನು ರಾಜ್ಯ ನಾಯಕರು ಕರೆದಿದ್ದಾರೆ.

ರಾಜ್ಯದ 224 ವಿಧಾನಸಭಾ ಕ್ಷೇತ್ರಗಳಲ್ಲೂ ಪಕ್ಷ 3 ರಿಂದ ಐದು ಚುನಾವಣಾ ಪೂರ್ವ ಸಮೀಕ್ಷೆ ನಡೆಸಿದೆ. ತದನಂತರ ಅಲ್ಪಾವಧಿಯಲ್ಲಿ ಆಕಾಂಕ್ಷಿಗಳು ಅರ್ಜಿ ಸಲ್ಲಿಸಿದ ನಂತರವೂ ಒಂದು ಸಮೀಕ್ಷೆ ನಡೆದಿದೆ. ಈ ಸಮೀಕ್ಷೆಗಳನ್ನು ಮುಂದಿಟ್ಟುಕೊಂಡೇ ▶ 8ನೇ ಪುಟಕ್ಕೆ

> “ಪ್ರತಿ ದಿನ ಒಂದರಿಂದ ಮೂರು ಜಿಲ್ಲೆಗಳ ವ್ಯಾಪ್ತಿಯಲ್ಲಿ ಬರುವ ಪ್ರತಿ ವಿಧಾನಸಭಾ ಕ್ಷೇತ್ರದ ಆಕಾಂಕ್ಷಿಗಳ ಜೊತೆ ನಾಯಕರು ಸಮಾಲೋಚನೆ ನಡೆಸಲಿದ್ದಾರೆ. ಪೂರ್ವ ಸಮೀಕ್ಷೆ ವರದಿಯ ಆಧಾರದ ಮೇಲೆ ಹಾಲಿ ಶಾಸಕರನ್ನು ಹೊರತುಪಡಿಸಿ ಉಳಿದ ನೂರೈವತ್ತಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಯಾರಿಗೆ ಟಿಕೆಟ್ ಕೊಡಬೇಕು ಎಂಬ ಕುರಿತು ಕೆಪಿಸಿಸಿ ಪ್ರಾಥಮಿಕ ಚರ್ಚೆ ನಡೆಸಿದೆ. ಆದರೆ ಚುನಾವಣಾ ಕಣದಲ್ಲಿ ಮುಂದಿರುವವರು ಯಾರು ಎಂಬುದರ ಆಧಾರದ ಮೇಲೆ ಟಿಕೆಟ್ ಹಂಚಿಕೆ ಕಾರ್ಯವನ್ನು ಪೂರ್ಣಗೊಳಿಸಿದರೆ, ಸ್ಪರ್ಧಿಸಲು ಪಕ್ಷದ ಟಿಕೆಟ್ ಸಿಗದವರು ಅಸಮಾಧಾನಗೊಳ್ಳುತ್ತಾರೆ. ಈ ಪೈಕಿ ಹಲವರು ಬೇರೆ ಪಕ್ಷಗಳಿಗೆ ಹೋಗುವ ಇಲ್ಲವೇ ಬಂಡಾಯ ಅಭ್ಯರ್ಥಿಯಾಗಿ ಕಣಕ್ಕಿಳಿಯುವ ಸಾಧ್ಯತೆಗಳು ಸ್ಪಷ್ಟವಾಗಿವೆ.

ಜಿ.ಟಿ.ದೇವೇಗೌಡರಿಗೆ ಪೂರ್ಣ ಬೆಂಬಲ ಘೋಷಿಸಿದ ಬೆಳವಾಡಿ ಶಿವಮೂರ್ತಿ

- ಐವರು ಬಂಡಾಯಗಾರರಲ್ಲಿ ಇವರು ಒಬ್ಬರಾಗಿದ್ದರು
- ಜಿಟಿಡಿಯವರಿಗೆ ಹ್ಯಾಟ್ರಿಕ್ ಗೆಲುವು ತಂದುಕೊಡುವ ವಿಶ್ವಾಸ




ಮೈಸೂರು, ಡಿ. 5– ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇ ಗೌಡರ ವಿರುದ್ಧ ಬಂಡಾಯ ವೆದ್ದಿದ್ದ ಜೆಡಿಎಸ್‌ನ ಪಂಚ ಮುಖಂಡರ ಪೈಕಿ ಓರ್ವರು ಇಂದು ಜಿ.ಟಿ. ದೇವೇಗೌಡರಿಗೆ ಬೆಂಬಲ ಸೂಚಿಸುವ ಮೂಲಕ ಉಳಿದ ಬಂಡಾಯಗಾರರಿಗೆ ಶಾಕ್ ನೀಡಿದ್ದಾರೆ.

ಐವರು ಮುಖಂಡರ ಪೈಕಿ ಬೆಳವಾಡಿ ಶಿವಮೂರ್ತಿಯವರು ಇಂದು ಶಾಸಕ ಜಿ.ಟಿ. ದೇವೇಗೌಡರನ್ನು ಭೇಟಿ ಮಾಡಿ, ತಮ್ಮ ಪೂರ್ಣ ಬೆಂಬಲವನ್ನು ಘೋಷಿಸಿದರು. ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಶಿವಮೂರ್ತಿ ನಾನು ಅಪ್ಪಟ ಜೆಡಿಎಸ್ ಕಾರ್ಯಕರ್ತ. ಜಿ.ಟಿ.ದೇವೇಗೌಡರು ಕಾಂಗ್ರೆಸ್ ಅಥವಾ ಬಿಜೆಪಿಗೆ ಹೋಗುತ್ತಾರೆ ಎಂಬ ಸಂಶಯ ಬಂದಾಗ ನಾವು ಪಕ್ಷವನ್ನು ಕಟ್ಟಲೇಬೇಕು ಎಂದು ನಿರ್ಧರಿಸಿದ್ದೆವು. ನನ್ನನ್ನು ಸೇರುವಂತೆ ಮಾವಿನಹಳ್ಳಿ ಸಿದ್ದೇಗೌಡ, ಬೀರಿಹುಂಡಿ ಬಸವಣ್ಣ, ಮಾದೇಗೌಡ ಮತ್ತು ಕೆಂಪನಾಯಕ ಅವರನ್ನು ಕರೆಸಿಕೊಂಡ ಹೆಚ್.ಡಿ. ಕುಮಾರಸ್ವಾಮಿಯವರು, ಈಗ ಜಿ.ಟಿ. ದೇವೇಗೌಡರು ತಟಸ್ಥವಾಗಿದ್ದಾರೆ. ಅವರು ಪಕ್ಷದಲ್ಲಿ ಉಳಿಯುವುದು ಕೂಡ ಅನುಮಾನ. ಹೀಗಾಗಿ ನೀವು ಪಕ್ಷ ಸಂಘಟನೆ ಮಾಡಿ ನಿಮ್ಮ ಐವರಲ್ಲಿ ಯಾರಾದರೂ ಚುನಾವಣೆಯಲ್ಲಿ ಸ್ಪರ್ಧಿಸಿ ಎಂದು ಹೇಳಿದ್ದರು. ಆಗ ನಾವು ಸಂಘಟನೆಯಲ್ಲಿ ತೊಡಗಿಕೊಂಡಿದ್ದೆವು ಎಂದರು.

ಮತ್ತೆ ಜಿಟಿಡಿ ಪಕ್ಷಕ್ಕೆ ಬಂದಾಗಲೂ ಕೂಡ ನಮ್ಮ ಐವರಲ್ಲಿ ಯಾರಾದರೂ ಪಕ್ಷೇತರರಾಗಿ ಸ್ಪರ್ಧಿಸುವ ಬಗ್ಗೆ ಮಾತುಕತೆ ನಡೆದಿತ್ತು. ಆದರೆ, ಪಕ್ಷ ಜಿಟಿಡಿ ಅವರನ್ನು ಅಭ್ಯರ್ಥಿ ಎಂದು ತೀರ್ಮಾನಿಸಿದರೆ, ನಾವು ▶ 7ನೇ ಪುಟಕ್ಕೆ

ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಯ ವೇಳಾಪಟ್ಟಿ

ಬೆಂಗಳೂರು: ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು 2023ನೇ ಸಾಲಿನ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಯ ಅಂತಿಮ ವೇಳಾಪಟ್ಟಿಯನ್ನು ಸೋಮವಾರ ಪ್ರಕಟಿಸಿದೆ.

ಮಾರ್ಚ್ 31ರಿಂದ ಏಪ್ರಿಲ್ 15ರವರೆಗೆ 10ನೇ ತರಗತಿಯ ಪರೀಕ್ಷೆಗಳು ನಡೆಯಲಿದ್ದು, ಅಂತಿಮ ವೇಳಾಪಟ್ಟಿಯನ್ನು ಮಂಡಳಿಯ ಅಧಿಕೃತ ವೆಬ್‌ತಾಣದಲ್ಲಿ ಪರಿಶೀಲಿಸಬಹುದಾಗಿದೆ.

ಪರೀಕ್ಷಾ ವೇಳಾಪಟ್ಟಿ: ಮಾ.31 ಮೊದಲ ಭಾಷೆ: ಕನ್ನಡ, ತೆಲುಗು, ಹಿಂದಿ, ಮರಾಠಿ, ತಮಿಳು, ಉರ್ದು, ಇಂಗ್ಲಿಷ್, ಸಂಸ್ಕೃತ ಪರೀಕ್ಷೆಗಳು ನಡೆಯಲಿವೆ, ಏ.4 ಗಣಿತ, ಸಮಾಜ ಶಾಸ್ತ್ರ, ಏ. 6 ದ್ವಿತೀಯ ಭಾಷೆ ಇಂಗ್ಲಿಷ್, ಕನ್ನಡ, ಏ.8 ಅರ್ಥಶಾಸ್ತ್ರ ಏ.10 ವಿಜ್ಞಾನ, ರಾಜ್ಯಶಾಸ್ತ್ರ, ಏ.12 ತೃತೀಯ ಭಾಷೆ ಹಿಂದಿ, ಕನ್ನಡ, ಇಂಗ್ಲಿಷ್, ಏ.15 ಸಮಾಜ ವಿಜ್ಞಾನ.



ಬಂಗಾಳಕೊಲ್ಲಿಯಲ್ಲಿ ವಾಯುಭಾರ ಕುಸಿತ: ರಾಜ್ಯದೆಲ್ಲೆಡೆ ಮತ್ತೆ ಮಳೆ ಸಾಧ್ಯತೆ



ಬೆಂಗಳೂರು: ಬಂಗಾಳಕೊಲ್ಲಿಯಲ್ಲಿ ವಾಯುಭಾರ ಕುಸಿತವಾಗಿದ್ದು ಬೆಂಗಳೂರು ಸೇರಿದಂತೆ ರಾಜ್ಯದೆಲ್ಲೆಡೆ ಮತ್ತೆ ಮಳೆಯಾಗುವ ಸಾಧ್ಯತೆ ಇದೆ ಎಂದು ಇಲಾಖೆ ತಿಳಿಸಿದೆ.

ದಕ್ಷಿಣ ಅಂಡಮಾನ್ ಸಮುದ್ರದಲ್ಲಿ 5.8 ಕಿಲೋ ಮೀಟರ್ ಎತ್ತರದಷ್ಟು ಮೇಲ್ಮೈ ಸುಳಿಗಾಳಿ ಎದ್ದಿದೆ ಇದರ ಪ್ರಭಾವದಿಂದಾಗಿ ಬಂಗಾಳಕೊಲ್ಲಿಯಲ್ಲಿ ವಾಯುಭಾರ ಕುಸಿತ ಸೃಷ್ಟಿಯಾಗಲಿದೆ. ಡಿಸೆಂಬರ್ 8 ರವರೆಗೆ ದಕ್ಷಿಣ ಒಳನಾಡಿನ ಜಿಲ್ಲೆಯ ಕೆಲವೆಡೆಗಳಲ್ಲಿ ಹಗುರ ಮಳೆಯಾಗಲಿದೆ. ಡಿಸೆಂಬರ್ 8, 9 ಮತ್ತು 10ರಂದು ಗುಡುಗು ಸಹಿತ ವ್ಯಾಪಕ ಮಳೆ ಬೀಳುವ ನಿರೀಕ್ಷೆ ಇದೆ ಎಂದು ಹೇಳಿದೆ.

ಬೆಂಗಳೂರಿನಲ್ಲಿ ಮಳೆ ಸಾಧ್ಯತೆ: ಬೆಂಗಳೂರಿನಲ್ಲಿ ಸದ್ಯ ವಾತಾವರಣ ಸಹಜ ಸ್ಥಿತಿಯಲ್ಲಿದೆ. ಡಿ.7ರವರೆಗೆ ಚಳಿ ಮುಂದುವರಿಯಲಿದೆ. ಬೆಳಗ್ಗೆ ದಟ್ಟ ಮಂಜು ಇರಲಿದೆ. ಡಿ.7ರಿಂದ 10ರವರೆಗೆ ಬೆಂಗಳೂರು ನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಗುಡುಗು ಮಿಂಚು ಸಹಿತ ಹಗುರ ಮಳೆ ಸುರಿಯುವ ಸಾಧ್ಯತೆ ಇದೆ.

ಚುನಾವಣೋತ್ತರ ಸಮೀಕ್ಷೆ: ಗುಜರಾತ್‌ನಲ್ಲಿ ಮತ್ತೆ ಬಿಜೆಪಿಗೆ ಅಧಿಕಾರ ಸಾಧ್ಯತೆ; ಹಿಮಾಚಲದಲ್ಲಿ ಜಿದ್ದಾಜಿದ್ದಿ ಹೋರಾಟ



ನವದೆಹಲಿ, ಡಿ.5– ಪ್ರಧಾನಿ ನರೇಂದ್ರ ಮೋದಿ ಅವರ ತವರು ರಾಜ್ಯ ಗುಜರಾತ್ ಚುನಾವಣೆಯ ಎರಡನೇ ಹಾಗೂ ಕೊನೆಯ ಹಂತದ ಮತದಾನ ಸೋಮವಾರ ಸಂಜೆ ಮುಕ್ತಾಯವಾಗಿದ್ದು, ಇದರೊಂದಿಗೆ ದೇಶಾದ್ಯಂತ ತೀವ್ರ ಕುತೂಹಲಕ್ಕೆ ಕಾರಣವಾಗಿದ್ದ ಎರಡು ರಾಜ್ಯಗಳ ವಿಧಾನಸಭೆ ಚುನಾವಣೆಗೆ ತೆರೆಬಿದ್ದಿದೆ. ಈಗ ಚುನಾವಣೋತ್ತರ ಸಮೀಕ್ಷೆಗಳ ಭರಾಟೆ ಆರಂಭವಾಗಿದೆ.

ಗುಜರಾತ್‌ನಲ್ಲಿ ಮತದಾರ ಈ ಬಾರಿಯೂ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ನೇತೃತ್ವದ ಬಿಜೆಪಿ ಸರ್ಕಾರದ ಕೈಹಿಡಿಯುವ ಸಾಧ್ಯತೆ ಇದ್ದು, ಮತ್ತೊಮ್ಮೆ ಕಮಲ ಅರಳಲಿದೆ. ಹಿಮಾಚಲದಲ್ಲಿ ಆಡಳಿತರೂಢ ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ಅಧಿಕಾರಕ್ಕಾಗಿ ಜಿದ್ದಾಜಿದ್ದಿನ ಹೋರಾಟ ನಡೆಯಲಿದೆ. ಜನ್ ಕಿ ಬಾತ್ ಎಕ್ಸಿಟ್ ಪೋಲ್ ಪ್ರಕಾರ ಗುಜರಾತ್‌ನಲ್ಲಿ ಬಿಜೆಪಿ 117–140 ಸ್ಥಾನ ಪಡೆದರೆ, ಕಾಂಗ್ರೆಸ್ 34–51 ಸ್ಥಾನ, ಎಎಪಿ 6–13 ಹಾಗೂ ಇತರರು 1–2 ಸ್ಥಾನ ಪಡೆಯಲಿದ್ದಾರೆ.

ಪಿ–ಮಾರ್ಕ್ ಪ್ರಕಾರ, ಬಿಜೆಪಿ 128–148, ಕಾಂಗ್ರೆಸ್ 30–42, ಎಎಪಿ 2–10, ಇತರರು 0–3, ಟಿವಿ9 ಗುಜರಾತ್ ಸಮೀಕ್ಷೆ ಪ್ರಕಾರ, ಬಿಜೆಪಿ 125–130, ಕಾಂಗ್ರೆಸ್ 40–50, ಎಎಪಿ 3–5.

2017ರಲ್ಲಿ ನಡೆದ ಗುಜರಾತ್ ಚುನಾವಣೆಯಲ್ಲಿ ಬಿಜೆಪಿ 99 ಸ್ಥಾನಗಳನ್ನು ಪಡೆದಿತ್ತು. ಅದರ ಪ್ರಮುಖ ಪ್ರತಿಸ್ಪರ್ಧಿಯಾಗಿದ್ದ ಕಾಂಗ್ರೆಸ್ 77 ಸ್ಥಾನಗಳನ್ನು ಪಡೆದುಕೊಂಡಿತ್ತು. ಪ್ರಸ್ತುತ 182 ಸದಸ್ಯ ಬಲದ ಗುಜರಾತ್ ವಿಧಾನಸಭೆಯಲ್ಲಿ ಬಿಜೆಪಿಯ ಬಲವು 111 ಆಗಿದೆ.

ಹಿಮಾಚಲ ಪ್ರದೇಶ ಎಕ್ಸಿಟ್ ಪೋಲ್

ಟೈಮ್ಸ್ ನೌ–ಇಟಿಜಿ ಪ್ರಕಾರ: ಬಿಜೆಪಿ 38, ಕಾಂಗ್ರೆಸ್ 28, ಎಎಪಿ 0, ಇತರೆ 1

ಜನ್ ಕಿ ಬಾತ್ ಪ್ರಕಾರ

ಬಿಜೆಪಿ 32–40 ಸ್ಥಾನ, ಕಾಂಗ್ರೆಸ್ 27–34, ಎಎಪಿ 0, ಇತರರು 1–2

ಪಿ–ಮಾರ್ಕ್

ಬಿಜೆಪಿ 34–39 ಸ್ಥಾನ, ಕಾಂಗ್ರೆಸ್ 28–33, ಎಎಪಿ 0–1, ಇತರರು 1–4

ಹಿಮಾಚಲ ಪ್ರದೇಶದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲಿದೆ ಎಂದು ಆಕ್ಸಿಸ್–ಮೈ ಇಂಡಿಯಾ ಸಮೀಕ್ಷೆ ಹೇಳಿದೆ, ಬಿಜೆಪಿ 24–34 ಸ್ಥಾನ ಪಡೆದರೆ, ಕಾಂಗ್ರೆಸ್ 30–40 ಸ್ಥಾನ, ಎಎಪಿ 0, ಇತರರು 4–8 ಸ್ಥಾನ ಗಳಿಸಲಿದ್ದಾರೆ.





ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಕಲ್ಪಿಸಲು ಆಗ್ರಹಿಸಿ

ಈ ಮಾಸಾಂತ್ಯಕ್ಕೆ ಹಿಂದುಳಿದ ಸಮುದಾಯಗಳ ವಿಶೇಷ ಅಧಿವೇಶನ

- ಹಿಂದುಳಿದ ವರ್ಗದ ಹಿತಕಾಯುವ ‘ರಾಜಕೀಯ ಶಕ್ತಿ’ ಬೆಂಬಲಿಸಲು ನಿರ್ಧಾರ
- ಈ ಸಂಬಂಧ ಹಿಂದುಳಿದ ವರ್ಗ ದುಂಡುಮೇಜಿನ ಸಭೆಯಲ್ಲಿ ನಿರ್ಣಯ
- ಹಿಂದುಳಿದ ವರ್ಗದ ಸಮರ್ಥ ನಾಯಕ ಸಿದ್ದರಾಮಯ್ಯರ ಅಣಿಯುವ ಸಂಚಿಗೆ ಉಗ್ರ ಖಂಡನೆ



ಮೈಸೂರು,ಡಿ.5(ಎಂಟಿವೈ)– ಹಿಂದುಳಿದ ವರ್ಗಗಳಿಗೆ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಹೆಚ್ಚಳಕ್ಕೆ ಆಗ್ರಹಿಸಿ ಡಿಸೆಂಬರ್ ಅಂತ್ಯದ ವೇಳೆಗೆ ಹಿಂದುಳಿದ ಸಮುದಾಯಗಳ ವಿಶೇಷ ಅಧಿವೇಶನ ನಡೆಸಲು ಹಾಗೂ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಶೋಷಿತ ಸಮುದಾಯಗಳ ಹಿತಕಾಯಲು ಶ್ರಮಿಸುತ್ತಿರುವ ‘ರಾಜಕೀಯ ಶಕ್ತಿ’ ಬೆಂಬಲಿಸಲು ಹಿಂದುಳಿದ ಸಮುದಾಯಗಳ ದುಂಡು ಮೇಜಿನ ಸಭೆಯಲ್ಲಿ ನಿರ್ಣಯ ಅಂಗೀಕರಿಸಲಾಯಿತು.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಹಾಗೂ ಕರ್ನಾಟಕ ರಾಜ್ಯ ಅತೀ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಸಂಯುಕ್ತಾಶ್ರಯದಲ್ಲಿ ಸೋಮವಾರ ಆಯೋಜಿಸಿದ್ದ ‘ಹಿಂದುಳಿದ ವರ್ಗಗಳ ದುಂಡು ಮೇಜಿನ ಸಭೆ’ ಪ್ರಮುಖ ಮೂರು ನಿರ್ಣಯಗಳನ್ನು ಕೈಗೊಂಡಿತು.

ಸಭೆಯಲ್ಲಿ ಕರ್ನಾಟಕ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮು ಮಾತನಾಡಿ, ಮೇಲ್ವರ್ಗದ ದಬ್ಬಾಳಿಕೆಯಿಂದಾಗಿ ಶೋಷಿತ ಸಮುದಾಯಗಳು ಶತಮಾನಗಳಿಂದಲೂ ದೌರ್ಜನ್ಯಕ್ಕೆ ತುತ್ತಾಗಿವೆ. ಸಮಾಜದ ಎಲ್ಲಾ ಕ್ಷೇತ್ರಗಳಲ್ಲೂ ಶೋಷಿತ ಸಮುದಾಯಗಳು ತೊಂದರೆ ಅನುಭವಿಸಿವೆ. ಇದನ್ನು ಮನಗಂಡು ರಾಜ್ಯದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ 1925ರಲ್ಲೇ ಶೋಷಿತ ಸಮುದಾಯಕ್ಕೆ ಶೇ.75ರಷ್ಟು ಮೀಸಲಾತಿ ಸೌಲಭ್ಯ ಕಲ್ಪಿಸಿದರು. ನಂತರ ಮಾಜಿ ಸಿಎಂ ದೇವರಾಜ ಅರಸ್ ಅವರ ಕಾಲದಲ್ಲಿ ಶೋಷಿತ ಸಮುದಾಯಕ್ಕೆ ಮೀಸಲಾತಿ ಸೌಲಭ್ಯ ಮುಂದುವರೆಸಲಾಯಿತು. ದೇವರಾಜ ಅರಸ್ ಅವರ ಕಾಲದಲ್ಲಿ ನಿಗದಿಯಾಗಿದ್ದ ಮೀಸಲಾತಿ ಪ್ರಮಾಣ ಇಂದಿಗೂ ಅಷ್ಟೇ ಇದೆ. ಅಂದಿನಿಂದ ಇಂದಿನವರೆಗೂ ಜನಸಂಖ್ಯೆ ಹೆಚ್ಚಾಗಿದೆ. ಈ ಹಿನ್ನೆಲೆಯಲ್ಲಿ ಹಿಂದುಳಿದ ವರ್ಗಗಳ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ನೀಡಲು ಕ್ರಮ ಕೈಗೊಳ್ಳಬೇಕು ▶ 8ನೇ ಪುಟಕ್ಕೆ

■ ನಿರ್ಣಯಗಳು....

- ಹಿಂದುಳಿದ ವರ್ಗಗಳಿಗೆ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ನಿಗದಿಗೊಳಿಸುವಂತೆ ಆಗ್ರಹಿಸಿ, ಪರಿಶಿಷ್ಟ ಜಾತಿ, ಪಂಗಡ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ವಿದ್ಯಾರ್ಥಿ ವೇತನ ರದ್ದುಗೊಳಿಸಿರುವುದನ್ನು ವಿರೋಧಿಸಿ ಡಿ. 9 ರಂದು ಬೆಳಗ್ಗೆ 11 ಗಂಟೆಗೆ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು.
- ಹಿಂದುಳಿದ ವರ್ಗಗಳ ಮೇಲಿನ ಸಾಮಾಜಿಕ ಮತ್ತು ರಾಜಕೀಯ ದೌರ್ಜನ್ಯವನ್ನು ಖಂಡಿಸಿ ಮತ್ತು ಹಿಂದುಳಿದ ಸಮುದಾಯಗಳಲ್ಲಿ ಜಾಗೃತಿ ಮೂಡಿಸಲು ಡಿಸೆಂಬರ್ ಅಂತ್ಯದಲ್ಲಿ ವಿಶೇಷ ಅಧಿವೇಶನ ನಡೆಸುವುದು
- 2023ರ ಚುನಾವಣೆ ದೃಷ್ಟಿಯಿಂದ ಹಿಂದುಳಿದವರು–ದಲಿತರು ಮತ್ತು ಅಲ್ಪಸಂಖ್ಯಾತರ ಹಿತರಕ್ಷಣೆಗೆ ಶ್ರಮಿಸುತ್ತಿರುವ ರಾಜಕೀಯ ಶಕ್ತಿಯನ್ನು ಬೆಂಬಲಿಸಿ ವಿವಿಧ ಕಾರ್ಯಕ್ರಮಗಳ ಆಯೋಜಿಸುವುದು





ಒಮ್ಮೆಗೆ ನೀರಿನ ಬಿಲ್ ಪಾವತಿಗೆ ನೀರಸ ಪ್ರತಿಕ್ರಿಯೆ

ಕೇವಲ 1674 ಮಂದಿ ಮಾತ್ರ ಯೋಜನೆಯಡಿ 4.6 ಕೋಟಿ ಪಾವತಿ; ಸರ್ಕಾರದ ಹಂತದಲ್ಲಿ ಬಡ್ಡಿ ಮನ್ನಾ ಪ್ರಸ್ತಾವನೆ

ಮೈಸೂರು, ಡಿ.5(ಆರ್‌ಕೆ)– ಬಾಕಿ ಉಳಿಸಿಕೊಂಡಿರುವ ನೀರಿನ ತೆರಿಗೆಯನ್ನು ಒಂದೇ ಬಾರಿ ಪಾವತಿಸಲು ಮೈಸೂರು ನಾಗರಿಕರು ಹಿಂದೇಟು ಹಾಕುತ್ತಿದ್ದು, ಈ ಮೂಲಕ ನೀರಿನ ಬಾಕಿ ತೆರಿಗೆ ಸಂಗ್ರಹಕ್ಕೆ ಮೈಸೂರು ಮಹಾನಗರ ಪಾಲಿಕೆ ರೂಪಿಸಿರುವ ಯೋಜನೆಗೆ ಹಿನ್ನಡೆಯಾದಂತಾಗಿದೆ.

ನಗರ ಪಾಲಿಕೆ ವ್ಯಾಪ್ತಿಯಲ್ಲಿ 200 ಕೋಟಿ ರೂ.ಗೂ ಹೆಚ್ಚು ನೀರಿನ ತೆರಿಗೆ ಬಾಕಿ ಉಳಿದಿದೆ. ಇದನ್ನು ಹೇಗಾದರೂ ಸಂಗ್ರಹಿಸಬೇಕೆಂಬ ನಿಟ್ಟಿನಲ್ಲಿ ಗ್ರಾಹಕರಿಗೊಂದು ವಿಶೇಷ ಆಫರ್ ನೀಡಲಾಗಿತ್ತು. ನೀರಿನ ತೆರಿಗೆ ಒಟ್ಟು ಮೊತ್ತದಲ್ಲಿ ಅಸಲನ್ನು ಸಂಪೂರ್ಣವಾಗಿ ಪಾವತಿಸಿದರೆ ಕಠಿಣ ಕ್ರಮದಿಂದ ಪಾರಾಗಬಹುದು ಎಂಬ ಸೂಚನೆಯೊಂದಿಗೆ ‘ಒಂದೇ ಬಾರಿ ನೀರಿನ ತೆರಿಗೆ ಪಾವತಿ’ಗೆ ಅವಕಾಶ ನೀಡಲಾಗಿತ್ತು. ಆದರೆ ಇದಕ್ಕೆ ಬಳಕೆದಾರರಿಂದ ನೀರಸ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ನಿರೀಕ್ಷೆಯಷ್ಟು ತೆರಿಗೆ ಸಂಗ್ರಹವಾಗಿಲ್ಲ.

ಮೈಸೂರು ನಗರದಲ್ಲಿ ಕುಡಿಯುವ ನೀರಿನ ತೆರಿಗೆ ಸುಮಾರು 220 ಕೋಟಿ ರೂ. ಬಾಕಿ ಉಳಿದಿದ್ದರೂ ಅದರಲ್ಲಿನ ಬಡ್ಡಿ ಸ್ಥಿರೀಕರಣಗೊಳಿಸಿ (Abeyance Scheme) ಕೇವಲ ಬಾಕಿ ಅಸಲು ಪಾವತಿಗೆ ▶ 7ನೇ ಪುಟಕ್ಕೆ



> “ನೀರಿನ ಬಾಕಿ ತೆರಿಗೆಯ ಬಡ್ಡಿ ಹಣ ಹೊರತುಪಡಿಸಿ ಕೇವಲ ಅಸಲನ್ನು ಒಂದೇ ಬಾರಿ ಪಾವತಿಸಲು ಅವಕಾಶ ನೀಡಲಾಗಿದೆ. ಆದರೆ ಒಂದೇ ಬಾರಿ ಸಂಪೂರ್ಣ ಪಾವತಿಗೆ ಕಷ್ಟವಾಗುವುದರಿಂದ ಕಂತುಗಳಲ್ಲಿ ಪಾವತಿಸಲು ಅವಕಾಶ ಮಾಡಿಕೊಡುವಂತೆ ನೀರು ಬಳಕೆದಾರರು ಮನವಿ ಮಾಡಿದ್ದಾರೆ. ಈ ಬಗ್ಗೆ ಡಿ.8ರಂದು ನಡೆಯುವ ಪಾಲಿಕೆ ಕೌನ್ಸಿಲ್ ಸಭೆಯಲ್ಲಿ ಚರ್ಚಿಸಲಾಗುವುದು.
>
> –ಮೇಯರ್ ಶಿವಕುಮಾರ್



■ ಕೆಲವು ಗೃಹ ಬಳಕೆಗೆ ಅಸಾಧಾರಣ ನೀರಿನ ಬಿಲ್!

ಮೈಸೂರು, ಡಿ.5(ಆರ್‌ಕೆ)– ನೀರಿನ ಮೀಟರ್ ಸುಸ್ಥಿತಿಯಲ್ಲಿದ್ದು, ಸಮಯಕ್ಕೆ ಸರಿಯಾಗಿ ತೆರಿಗೆ ಪಾವತಿಸಿದ್ದರೂ ಹೆಚ್ಚು ಮೊತ್ತದ ಅಸಾಧಾರಣ ಬಿಲ್ ನೀಡಲಾಗುತ್ತಿದೆ ಎಂದು ಹಲವು ಗ್ರಾಹಕರು ದೂರಿದ್ದಾರೆ.

ಮಾಹೆಯಾನ 150 ರಿಂದ 165 ರೂ. ನೀರಿನ ಬಿಲ್ ಬರುತ್ತಿತ್ತು. ಆದರೆ ಈಗ ಒಂದೇ ತಿಂಗಳಿಗೆ ಬಡ್ಡಿ ಸೇರಿ 4,505 ರೂ. ಬಿಲ್ ನೀಡಲಾಗಿದೆ. ಈ ಬಗ್ಗೆ ವಾಣಿವಿಲಾಸ ವಾಟರ್ ವರ್ಕ್ಸ್ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗೆ ಲಿಖಿತ ದೂರು ನೀಡಿದರೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಜೆಪಿ ನಗರದ ಗ್ರಾಹಕರೊಬ್ಬರು ‘ಮೈಸೂರು ಮಿತ್ರ’ನಿಗೆ ಮಾಹಿತಿ ನೀಡಿದ್ದಾರೆ. ಕಳೆದ ನವೆಂಬರ್ ತಿಂಗಳಲ್ಲಿ 5,784 ರೂ. ನೀರಿನ ಬಿಲ್ ಬಂದಿದೆ ಅದರಲ್ಲಿ ಒಂದು ಬಾರಿ ಪಾವತಿ ಯೋಜನೆಯಲ್ಲಿ ಬಿಲ್ ಪಾವತಿಸಲು ▶ 7ನೇ ಪುಟಕ್ಕೆ



ಬಹುರೂಪಿ ರಾಷ್ಟ್ರೀಯ ರಂಗೋತ್ಸವಕ್ಕೆ ರಂಗಾಯಣದಿಂದ ಮಹಾಪೌರರಿಗೆ ಆಹ್ವಾನ



ಮೈಸೂರು, ಡಿ.5 (ಆರ್‌ಕೆ)–ಡಿಸೆಂಬರ್ 8ರಿಂದ 15ರವರೆಗೆ ಮೈಸೂರಲ್ಲಿ ನಡೆಯಲಿರುವ ಬಹುರೂಪಿ ರಾಷ್ಟ್ರೀಯ ರಂಗೋತ್ಸವಕ್ಕೆ ಸಾಂಸ್ಕೃತಿಕ ನಗರಿ ಮೈಸೂರಿನ ಪ್ರಥಮ ಪ್ರಜೆ, ಮಹಾಪೌರ ಶಿವಕುಮಾರ್ ಅವರನ್ನು ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಸೋಮವಾರ ಆಹ್ವಾನಿಸಿದರು.

ನಾಡಿನ ಕಲೆ, ಸಂಸ್ಕೃತಿ ಬಿಂಬಿಸುವ ಜಾನಪದ ಕಲಾ ತಂಡದೊಂದಿಗೆ ಮೈಸೂರಿನ ಕುವೆಂಪುನಗರದಲ್ಲಿರುವ ಮೇಯರ್ ಶಿವಕುಮಾರ್ ನಿವಾಸಕ್ಕೆ ರಂಗಾಯಣ ಉಪ ನಿರ್ದೇಶಕಿ ನಿರ್ಮಲ ಮಠಪತಿ ಹಾಗೂ ಕಲಾವಿದರೊಂದಿಗೆ ಭೇಟಿ ನೀಡಿ, ಆಮಂತ್ರಣ ಪತ್ರಿಕೆ ನೀಡುವ ಮೂಲಕ ವಿನೂತನ ರೀತಿಯಲ್ಲಿ ಬಹುರೂಪಿಗೆ ಆಹ್ವಾನಿಸಿದರು.

ಆಹ್ವಾನ ಸ್ವೀಕರಿಸಿ ಪ್ರತಿಕ್ರಿಯಿಸಿದ ಮೇಯರ್ ಶಿವಕುಮಾರ್, ಮೈಸೂರು ಕಲೆ, ಸಂಸ್ಕೃತಿ ತವರೂರಾಗಿದ್ದು, ಇಲ್ಲಿ ನಡೆಯುವ ರಾಷ್ಟ್ರೀಯ ರಂಗೋತ್ಸವವನ್ನು ಯಶಸ್ವಿಗೊಳಿಸುವುದು ನಮ್ಮ ಜವಾಬ್ದಾರಿಯಾಗಿದೆ. ಕಾರ್ಯಕ್ರಮಕ್ಕೆ ಮೈಸೂರಿನ ಜನತೆ ಪರವಾಗಿ ಪಾಲಿಕೆಯಿಂದ ಸರ್ವ ರೀತಿಯ ಸಹಕಾರ ನೀಡುವುದಾಗಿ ನುಡಿದರು.



ಮೈಸೂರಿನಲ್ಲಿ ಇಂಡಿಯನ್ ಬ್ಯಾಂಕ್ ವಲಯ ಕಚೇರಿಯ ಹೊಸ ಶಾಖೆಯನ್ನು ಸಂಸದ ಪ್ರತಾಪ್ ಸಿಂಹ ಉದ್ಘಾಟಿಸಿದರು. ಬೆಂಗಳೂರಿನ ಫೀಲ್ಡ್ ಜನರಲ್ ಮ್ಯಾನೇಜರ್ ಸುಧೀರ್‌ಕುಮಾರ್ ಗುಪ್ತ, ಮೈಸೂರು ನಗರದ ಮ್ಯಾನೇಜರ್ ಕೆ.ಜಗನ್ನಾಥ್ ಹಾಗೂ ಸಿಬ್ಬಂದಿ ವರ್ಗ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ನಾಳೆ ಬೃಹತ್ ರಕ್ತದಾನ ಶಿಬಿರ, ಉಚಿತ ಆರೋಗ್ಯ ತಪಾಸಣೆ



ಮೈಸೂರು,ಡಿ.5(ಪಿಎಂ)–ರೋಟರಿ ಕ್ಲಬ್ ಆಫ್ ಮೈಸೂರು ಸೌತ್ ಈಸ್ಟ್ (ಜಿಲ್ಲೆ 3181) ವತಿಯಿಂದ ಡಿ.7ರಂದು ಬೃಹತ್ ರಕ್ತದಾನ ಶಿಬಿರ ಮತ್ತು ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿದೆ ಎಂದು ರೋಟರಿ ಮೈಸೂರು ಸೌತ್ ಈಸ್ಟ್‌ನ ಅಧ್ಯಕ್ಷ ಎಂ.ಮೋಹನ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕುವೆಂಪುನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ಅಂದು ಬೆಳಗ್ಗೆ 8ರಿಂದ ಮಧ್ಯಾಹ್ನ 3ರವರೆಗೆ ಎರಡೂ ಶಿಬಿರಗಳು ನಡೆಯಲಿವೆ. ಬೆಳಗ್ಗೆ 9ಕ್ಕೆ ರೋಟರಿ ಚುನಾಯಿತ ಜಿಲ್ಲಾ ಗವರ್ನರ್ (3181) ಶಿಬಿರಗಳಿಗೆ ಚಾಲನೆ ನೀಡಲಿದ್ದಾರೆ. ಕಾಲೇಜಿನ ಪ್ರಾಂಶುಪಾಲರಾದ ಡಾ.ಎನ್.ರಾಗಿಣಿ, ಆರ್‌ಸಿಹೆಚ್‌ಓ ಡಾ.ಜಯಂತ್, ಮಾಜಿ ಮೇಯರ್ ಸುನಂದಾ ಪಾಲನೇತ್ರ ಮತ್ತಿತರರು ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದರು. ರೋಟರಿ ಮೈಸೂರು ಸೌತ್ ಈಸ್ಟ್‌ನ ಕಾರ್ಯದರ್ಶಿ ಕೆ.ಎನ್.ಮುರಳೀಧರ್, ರೋಟರಿ ಕ್ಲಬ್‌ನ ರಕ್ತನಿಧಿ ಬ್ಯಾಂಕ್‌ನ ಕಾರ್ಯದರ್ಶಿ ಸಮೀರ್ ಕಶ್ಯಪ್, ರೋಟ್ರಾಕ್ಟ್ ಎಂಐಟಿ ಎಫ್‌ಜಿಸಿ ಅಧ್ಯಕ್ಷ ಮನೋಜ್ ಕುಮಾರ್ ಸಿಂಗ್ ಮತ್ತಿತರರು ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಇಂದು ಟ್ರೋಫಿ ಅನಾವರಣ ಕಾರ್ಯಕ್ರಮ

ಮೈಸೂರು,ಡಿ.5(ಪಿಎಂ)–ಡಾ.ಸೂರಜ್ ರೇವಣ್ಣ ಕ್ರೀಡಾ ಮತ್ತು ಸಾಂಸ್ಕೃತಿಕ ಸಂಘದ ವತಿಯಿಂದ ಜ.3 ಮತ್ತು 4ರಂದು ಚನ್ನರಾಯಪಟ್ಟಣದಲ್ಲಿ ಕುಸ್ತಿ ಮತ್ತು ಕಬಡ್ಡಿ ಪಂದ್ಯಾವಳಿ ಆಯೋಜಿಸಿದ್ದು, ಡಿ.6ರಂದು ಮೈಸೂರಿನ ಲಲಿತಮಹಲ್ ಹೋಟೆಲ್ ಆವರಣದಲ್ಲಿ ಸಂಜೆ 7ಕ್ಕೆ ಪಂದ್ಯಾವಳಿಯ ಟ್ರೋಫಿ ಅನಾವರಣ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ನಿರ್ದೇಶಕ ರೋಹಿತ್ ತಿಳಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಧಾನಪರಿಷತ್ ಸದಸ್ಯ ಡಾ.ಸೂರಜ್ ರೇವಣ್ಣ ಉಪಸ್ಥಿತಿಯಲ್ಲಿ ಕಾರ್ಯಕ್ರಮ ನಡೆಯಲಿದೆ. ಮಾಜಿ ಸಚಿವರೂ ಆದ ಶಾಸಕ ಹೆಚ್.ಡಿ.ರೇವಣ್ಣ, ಹಾಸನ ಜಿಪಂ ಮಾಜಿ ಸದಸ್ಯೆ ಭವಾನಿರೇವಣ್ಣ, ಜೆಡಿಎಸ್ ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ, ಶಾಸಕರಾದ ಜಿ.ಟಿ.ದೇವೇಗೌಡ, ಸಿ.ಎಸ್.ಪುಟ್ಟರಾಜು, ಸಾ.ರಾ.ಮಹೇಶ್ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ. ಇದೇ ಸಂದರ್ಭದಲ್ಲಿ ರಾಜ್ಯ ಸರ್ಕಾರದ ಪರಿಸರ ರಾಯಭಾರಿ ಡಾ.ಸಾಲುಮರದ ತಿಮ್ಮಕ್ಕ ಅವರಿಗೆ ವಿಶೇಷ ಸನ್ಮಾನ ಹಮ್ಮಿಕೊಳ್ಳಲಾಗಿದೆ ಎಂದರು. ಸಂಘದ ಉಪಾಧ್ಯಕ್ಷ ಮಹದೇವನ್, ಕಾರ್ಯದರ್ಶಿ ಅಭಿ, ನಿರ್ದೇಶಕ ವಿನಯ್ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.



ಮೈಸೂರಿನ ಕುವೆಂಪುನಗರದಲ್ಲಿರುವ ಹಿಂದುಳಿದ ವರ್ಗಗಳ ಬಾಲಕರ ವಿದ್ಯಾರ್ಥಿನಿಲಯದಲ್ಲಿ ಸೋಮವಾರ ನಡೆದ ಪ್ರಥಮ ವರ್ಷದ ವಿದ್ಯಾರ್ಥಿಗಳ ಸ್ವಾಗತ ಸಮಾರಂಭವನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಜಿ.ಆರ್.ಮಹೇಶ್ ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಜಗದೀಶ್, ಪರಶುರಾಂ, ಅಭಿಶೇಕ್, ರಿಷಿ, ಪ್ರಜ್ವಲ್ ಇತರರು ಉಪಸ್ಥಿತರಿದ್ದರು.

ನಿಧನ

ಬಿ.ಎಸ್.ಸತ್ಯನಾರಾಯಣ ರಾವ್



ಮೈಸೂರು, ಡಿ. 5– ನಟ ದಿವಂಗತ ಚೇತನ್ ರಾಮರಾವ್ ಅವರ ಭಾವ ಬಿ.ಎಸ್.ಸತ್ಯನಾರಾಯಣ ರಾವ್ (91) ಶನಿವಾರ ತಡರಾತ್ರಿ ನಿಧನರಾದರು. ಮೂವರು ಗಂಡು ಮಕ್ಕಳನ್ನು ಅಗಲಿರುವ ಶ್ರೀಯುತರು, ಲೋಕೋಪಯೋಗಿ ಇಲಾಖೆಯ ಶೀಘ್ರಲಿಪಿಗಾರರಾಗಿ ನಿವೃತ್ತಿ ಹೊಂದಿದ್ದರು. ಹಾಗೂ ನಗರದ ಮಧುವನ ಬಡಾವಣೆಯ ಮೂರನೇ ಕ್ರಾಸಿನ ನಿವಾಸಿಗಳಾಗಿದ್ದರು.

ಮೃತರ ಅಂತ್ಯಸಂಸ್ಕಾರ ಚಾಮುಂಡಿಬೆಟ್ಟದ ಪಾದದಲ್ಲಿರುವ ಹರಿಶ್ಚಂದ್ರ ಘಾಟ್‌ನಲ್ಲಿ ಸೋಮವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ತಾಯಮ್ಮ



ಮೈಸೂರಿನ ನೇತಾಜಿನಗರ ನಿವಾಸಿ ನಿವೃತ್ತ ಸಬ್ ಇನ್ಸ್‌ಪೆಕ್ಟರ್ ಎಂ.ಪುಟ್ಟಸ್ವಾಮಿಯವರ ಪತ್ನಿ ಶ್ರೀಮತಿ ತಾಯಮ್ಮ(72) ಸೋಮವಾರ ಬೆಳಗ್ಗೆ ನಿಧನರಾದರು. ಮೃತರು ಪತಿ, ಇಬ್ಬರು ಪುತ್ರರು, ಪುತ್ರಿ ಹಾಗೂ ಅಪಾರ ಬಂಧುವರ್ಗವನ್ನು ಅಗಲಿದ್ದಾರೆ. ಇವರ ಪುತ್ರ ಪಿ. ಶಿವಮಲ್ಲು ಕೆನಡಾದಲ್ಲಿ ಸಾಫ್ಟ್‌ವೇರ್ ಇಂಜಿನಿಯರ್ ಆಗಿದ್ದು, ಅವರು ಆಗಮಿಸಿದ ನಂತರ ಡಿಸೆಂಬರ್ 7ರಂದು ಬೆಳಗ್ಗೆ 11 ಗಂಟೆಗೆ ಲಲಿತಾದ್ರಿಪುರ ರಸ್ತೆಯಲ್ಲಿರುವ ವೀರಶೈವ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬೆಂಗಳೂರಲ್ಲಿ 14 ದಿನದಿಂದ ಪ್ರತಿಭಟನೆ; ಸರ್ಕಾರದ ನಿರ್ಲಕ್ಷ್ಯ ಖಂಡಿಸಿ

ಮೈಸೂರಲ್ಲಿ ಸಂಸದರು, ಶಾಸಕರ ಕಚೇರಿಗೆ ಕಬ್ಬು ಬೆಳೆಗಾರರ ಮುತ್ತಿಗೆ

ಮೈಸೂರು,ಡಿ.5(ಎಂಟಿವೈ)– ಕಬ್ಬಿಗೆ ಸೂಕ್ತ ಎಫ್‌ಆರ್‌ಪಿ ದರ ನಿಗದಿ ಮಾಡುವಂತೆ ಒತ್ತಾಯಿಸಿ ಕಬ್ಬು ಬೆಳೆಗಾರರು ಕಳೆದ 14 ದಿನಗಳಿಂದ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಧರಣಿ ನಡೆಸುತ್ತಿದ್ದರೂ ಸರ್ಕಾರ ಸೂಕ್ತವಾಗಿ ಸ್ಪಂದಿಸದೆ ನಿರ್ಲಕ್ಷ್ಯ ವಹಿಸುತ್ತಿದೆ ಎಂದು ಆರೋಪಿಸಿ ಕಬ್ಬು ಬೆಳೆಗಾರರ ಸಂಘದ ಕಾರ್ಯಕರ್ತರು ಸಂಸದ, ಶಾಸಕರ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟಿಸಿದರು.

ಮೈಸೂರಿನ ಜಲದರ್ಶಿನಿಯಲ್ಲಿರುವ ಸಂಸದ ಪ್ರತಾಪ್‌ಸಿಂಹ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದ ಪ್ರತಿಭಟನಾಕಾರರನ್ನು ಪೊಲೀಸರು ತಡೆದರು. ಬಳಿಕ ಸಂಸದ ಶ್ರೀನಿವಾಸಪ್ರಸಾದ್ ನಿವಾಸ, ಶಾಸಕ ಎಲ್. ನಾಗೇಂದ್ರ, ಎಸ್.ಎ.ರಾಮದಾಸ್ ಕಚೇರಿಗೆ ತೆರಳಿ ಮನವಿ ಪತ್ರ ಸಲ್ಲಿಸಿದರು. 14 ದಿನಗಳಿಂದ ಕಬ್ಬು ಬೆಳೆಗಾರರು ಅಹೋರಾತ್ರಿ ಧರಣಿ ನಡೆಸುತ್ತಿದ್ದರೂ ರಾಜ್ಯ ಸರ್ಕಾರ ಯಾವುದೇ ತೀರ್ಮಾನ ಪ್ರಕಟಿಸದೆ ನಿರ್ಲಕ್ಷ್ಯ ಮಾಡಿದೆ. ಆಡಳಿತ ಪಕ್ಷದ ಸಂಸದರಾಗಿ, ಶಾಸಕರಾಗಿ ನಮ್ಮೆಲ್ಲರ ಪ್ರತಿನಿಧಿಯಾಗಿರುವುದರಿಂದ ನಮ್ಮ ಒತ್ತಾಯಗಳ ಬಗ್ಗೆ ಕೂಡಲೇ ಸರ್ಕಾರದ ಗಮನ ಸೆಳೆದು ನ್ಯಾಯ ಕೊಡಿಸಬೇಕೆಂದು ಒತ್ತಾಯಿಸಿದರು.



ಶಾಸಕ ಎಲ್.ನಾಗೇಂದ್ರ ಅವರಿಗೆ ಮನವಿ ಸಲ್ಲಿಸುತ್ತಿರುವ ಕಬ್ಬು ಬೆಳೆಗಾರರ ಸಂಘದ ಸದಸ್ಯರು.

ರಾಜ್ಯಕ್ಕಿಂತ ಸಕ್ಕರೆ ಇಳುವರಿ ಕಡಿಮೆ ಬರುವ ಪಂಜಾಬ್‌ನಲ್ಲಿ 3800, ಉತ್ತರಪ್ರದೇಶದಲ್ಲಿ 3500, ಗುಜರಾತ್‌ನಲ್ಲಿ 4400 ರೂ. ದರ ನಿಗದಿ ಮಾಡಿದ್ದಾರೆ. ಇದನ್ನು ಗಮನಿಸಿ ಎಫ್‌ಆರ್‌ಪಿ ಬೆಲೆಯನ್ನು ಕನಿಷ್ಠ ಇಳುವರಿಗೆ ಟನ್ 3500 ರೂ. ನಿಗದಿ ಮಾಡಬೇಕು. ಕಬ್ಬಿನ ಕಟಾವು ಸಾಗಾಣಿಕೆ ವೆಚ್ಚದಲ್ಲಿ ಕಾರ್ಖಾನೆಯವರು ರೈತರನ್ನು ಸುಲಿಗೆ ಮಾಡುತ್ತಿದ್ದಾರೆ. ಕಬ್ಬು ಕಟಾವು 16 ತಿಂಗಳಾಗುತ್ತಿದೆ. ಸರ್ಕಾರದ ಮಾರ್ಗಸೂಚಿಯಂತೆ ರೈತನ ಜಮೀನಿನಿಂದ ಕಾರ್ಖಾನೆ ನಡುವೆ ಇರುವ ಕಿಲೋ ಮೀಟರ್ ಆಧಾರದ ದರ ಕಡಿತ ಮಾಡಬೇಕು. ಕಾನೂನುಬಾಹಿರವಾಗಿ ಹೆಚ್ಚುವರಿ ಮಾಡಿದರೆ ಆಯಾ ಡಿಸಿಗಳು ಕಾರ್ಖಾನೆಗಳ ಮೇಲೆ ಕ್ರಿಮಿನಲ್ ಮೊಕದ್ದಮೆ ದಾಖಲಿಸಬೇಕು ಎಂದು ಆಗ್ರಹಿಸಿದರು.

ಕಬ್ಬು ಕಟಾವು 16–18 ತಿಂಗಳು ವಿಳಂಬವಾಗುತ್ತಿದೆ. ಈ ರೀತಿ ಕಟಾವು ಮಾಡಿದರೆ ಕಬ್ಬಿಗೆ ವಿಳಂಬದ ಬಡ್ಡಿ ಸೇರಿಸಿ ಹೆಚ್ಚುವರಿ ದರ ಕೊಡಬೇಕು. ಕಬ್ಬು ಕಟಾವು ಸಾಗಾಣಿಕೆ ವೆಚ್ಚ ಕಡಿತಗೊಳಿಸಬೇಕು. ಸಕ್ಕರೆ ಕಾರ್ಖಾನೆ ಫೀಲ್ಡ್‌ಮನ್‌ಗಳು ಬಿಲ್‌ನಲ್ಲಿ ನೋಂದಾಯಿಸದೆ ರೈತರಿಂದ ಹೆಚ್ಚುವರಿ ಹಣ ವಸೂಲಿ ಮಾಡುವುದು ನಿಲ್ಲಬೇಕು. ರೈತ ಮತ್ತು ಕಾರ್ಖಾನೆ ನಡುವೆ ಸರ್ಕಾರ ಜಾರಿಗೆ ತಂದಿರುವ ದ್ವಿಪಕ್ಷೀಯ ಒಪ್ಪಂದ ಪತ್ರ ಜಾರಿ ಮಾಡಬೇಕು, ಒಪ್ಪಂದದ ಪತ್ರ ರೈತರಿಗೂ ಕೊಡಬೇಕು. ವಿದ್ಯುತ್ ಖಾಸಗೀಕರಣ ಕೈಬಿಡಬೇಕು, ಕೃಷಿ ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಸುವುದನ್ನು ಕೈಬಿಡಬೇಕು. ಬ್ಯಾಂಕುಗಳು ರೈತರಿಗೆ ಸಾಲ ನೀಡುವಾಗ ಸಿಬಿಲ್ ಸ್ಕೋರ್ ಪದ್ಧತಿಯನ್ನು ಪರಿಗಣಿಸಿ ಸಾಲ ನೀಡುವ ಪದ್ಧತಿ ಕೈಬಿಡಬೇಕು. ಸರ್ಕಾರ ನೀಡುವ ಪರಿಹಾರ, ಪ್ರೋತ್ಸಾಹ ಧನ, ವಿಧವಾ ವೇತನ, ವೃದ್ಧಾಪ್ಯ ವೇತನದ ಹಣವನ್ನು ಸಾಲದ ಖಾತೆಗಳಿಗೆ ಜಮಾ ಮಾಡಬಾರದು.

ಬಗರ್‌ಹುಕುಂ ಸಾಗುವಳಿ ಹತ್ತಾರು ವರ್ಷಗಳಿಂದ ಕೃಷಿ ಮಾಡುತ್ತಿರುವ ರೈತರಿಗೆ ಸಾಗುವಳಿ ಪತ್ರ, ಅರಣ್ಯ ಭೂಮಿಯನ್ನು ವ್ಯವಸಾಯ ಮಾಡುತ್ತಿರುವ ರೈತರಿಗೆ ಸಾಗುವಳಿ ಪಟ್ಟಾವನ್ನು ನೀಡಬೇಕು. ಕಾಡಂಚಿನಲ್ಲಿ ಪ್ರಾಣಿಗಳ ಹಾವಳಿ ತಪ್ಪಿಸಿ, ಕಾಡುಪ್ರಾಣಿಗಳಿಂದ ಆಗುವ ಬೆಳೆ ಹಾನಿ ಪರಿಹಾರ ವೈಜ್ಞಾನಿಕವಾಗಿ ನಷ್ಟ ಭರಿಸಬೇಕೆಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬರಡನಪುರ ನಾಗರಾಜು, ಮುಖಂಡರಾದ ಹಾಡ್ಯ ರವಿ, ಕೋಟಿ ಮಾದಪ್ಪ, ವೆಂಕಟೇಶ್, ಮಹದೇವಪ್ಪ, ಮಂಜುನಾಥ್, ಶಂಕರ್ ಸೇರಿದಂತೆ ಹಲವರು ಭಾಗವಹಿಸಿದ್ದರು.

ಕೃಷಿ ವಿರೋಧಿ ಕಾಯ್ದೆಗಳ ಹಿಂಪಡೆಯುವುದು ಸೇರಿದಂತೆ

ನಾನಾ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ರೈತರ ಪ್ರತಿಭಟನೆ

ಮೈಸೂರು,ಡಿ.5(ಎಂಟಿವೈ)–ತಿದ್ದುಪಡಿ ಮಾಡಿರುವ 3 ಕೃಷಿ ವಿರೋಧಿ ಕಾಯ್ದೆಗಳನ್ನು ಕೇಂದ್ರ ಸರ್ಕಾರ ಹಿಂಪಡೆದಿರುವಂತೆ ರಾಜ್ಯ ಸರ್ಕಾರವೂ ಹಿಂಪಡೆಯುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.



ಮೈಸೂರಿನ ಡಿಸಿ ಕಚೇರಿ ಬಳಿ ಪ್ರತಿಭಟನೆ ನಡೆಸಿದ ರೈತ ಸಂಘದ ಕಾರ್ಯಕರ್ತರು, ಕೇಂದ್ರ ಸರ್ಕಾರ ಜಾರಿಗೆ ತರಲು ಹೊರಟಿರುವ ವಿದ್ಯುತ್ ಖಾಸಗೀಕರಣ ನೀತಿ ಹಿಂಪಡೆಯಬೇಕು. ರೈತರ ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಸುವ ಕಾರ್ಯ ನಿಲ್ಲಿಸಬೇಕು. ರಾಜ್ಯ ಸರ್ಕಾರ ರೈತರ ಬೆಳೆಗಳಿಗೆ ಕಾನೂನಾತ್ಮಕವಾಗಿ ಬೆಲೆ ನಿಗದಿಪಡಿಸಬೇಕು. ತರಕಾರಿ ಬೆಳೆಗೆ ಕೇರಳ ಮಾದರಿಯಲ್ಲಿ ಬೆಲೆ ನಿಗದಿಯಾಗಬೇಕು. ಕೃಷ್ಣಾ ನದಿಗೆ ಆಲಮಟ್ಟಿ ಜಲಾಶಯದ ಅಣೆಕಟ್ಟೆಯ ಎತ್ತರವನ್ನು 518ರಿಂದ 524ಕ್ಕೆ ಹೆಚ್ಚಿಸಬೇಕು. ತುಂಗಭದ್ರಾ ನದಿಗೆ ನವಲಿ ಹತ್ತಿರ ನಿರ್ಮಿಸಲು ಹೊರಟಿರುವ ಸಮಾನಾಂತರ ಜಲಾಶಯಕ್ಕೆ ಡಿಪಿಆರ್‌ಗೆ ಕಳೆದ ಅಧಿವೇಶನದಲ್ಲಿ ಬಿಡುಗಡೆಗೊಳಿಸಿದ 3000 ಕೋಟಿ ಹಣವನ್ನು ತ್ವರಿತವಾಗಿ ಡಿಪಿಆರ್ ವರದಿ ಸರ್ಕಾರಕ್ಕೆ ಸಲ್ಲಿಸಬೇಕು. ಯೋಜನೆಗೆ ಇದೇ ಅಧಿವೇಶನದಲ್ಲಿ 10 ಸಾವಿರ ಕೋಟಿ ರೂ ನಿಗದಿಪಡಿಸಬೇಕು ಎಂದು ಒತ್ತಾಯಿಸಿದರು. ಸತತವಾಗಿ ರಾಜ್ಯದಲ್ಲಿ 2009ರಿಂದ 2018ರವರೆಗೆ ಅತಿವೃಷ್ಟಿ, ಅನಾವೃಷ್ಟಿ ಹಾಗೂ 2018ರಿಂದ 2022ರವರೆಗೆ ಅತಿವೃಷ್ಟಿಯಾಗಿ ಬೆಳೆ ಸಂಪೂರ್ಣ ಹಾಳಾಗಿದ್ದು ರೈತರು ಸಂಕಷ್ಟದಲ್ಲಿ ಬದುಕು ಸಾಗಿಸುವಂತಾಗಿದೆ. ಸಂತ್ರಸ್ತರಿಗೆ ಬೆಳೆ ವಿಮೆ ಹಾಗೂ ಬೆಳೆ ಪರಿಹಾರವನ್ನು ಕೂಡಲೇ ನೀಡಬೇಕು. ರೈತರು ಪಡೆದ ಟ್ರ್ಯಾಕ್ಟರ್, ಬೆಳೆ, ಭೂ ಅಭಿವೃದ್ಧಿ, ಹಸಿರು ಮನೆ ಸೇರಿದಂತೆ ಸಂಪೂರ್ಣ ಸಾಲ ಮನ್ನಾ ಮಾಡಬೇಕು ಎಂದು ಒತ್ತಾಯಿಸಿದರು. ಬಗರ್‌ಹುಕುಂ ಸಾಗುವಳಿದಾರರಿಗೆ ಪಟ್ಟಾ ನೀಡಬೇಕು. 99 ವರ್ಷಕ್ಕೆ ಲೀಸ್ ನೀಡಲು ಹೊರಟಿರುವ ಕಾಯಿದೆಯನ್ನು ರಾಜ್ಯ ಸರ್ಕಾರ ತಕ್ಷಣ ಕೈಬಿಡಬೇಕು. ಗೋಮಾಳದ ಜಮೀನನ್ನು ಉದ್ದಿಮೆಗಳಿಗೆ ಹಾಗೂ ಸಂಘ ಸಂಸ್ಥೆಗಳಿಗೆ ಹಂಚಿಕೆ ಮಾಡುವ ಕೆಲಸವನ್ನು ತಕ್ಷಣ ಕೈಬಿಡಬೇಕು. ಕಬ್ಬು ಬೆಳೆಗೆ ಎಲ್ಲಾ ಜಿಲ್ಲೆಗಳ ಶುಗರ್ ಫ್ಯಾಕ್ಟರಿಗಳಿಗೆ ಒಂದೇ ದರ ನಿಗದಿಪಡಿಸಬೇಕು ಎಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಸಂಘದ ಜಿಲ್ಲಾಧ್ಯಕ್ಷ ಜಿ.ಲೋಕೇಶ್, ಕಾರ್ಯಾಧ್ಯಕ್ಷ ಮೋಹನ್‌ರಾಜ್, ಮುಖಂಡರಾದ ಜಯದೇವ್, ಬಿ.ಬಿ.ದಿನೇಶ್, ಮಾದೇಗೌಡ, ವೀರಭದ್ರ, ನಾಗರಾಜೇಗೌಡ, ಮಂಜು, ಅಜಯ್, ಸಂಜು ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಗೆಳತಿಯರಿಂದ ಕತೆಗಳ ಆಹ್ವಾನ

ಮೈಸೂರು,ಡಿ.5–ಮುಂಬರುವ ಮಹಿಳಾ ದಿನಾಚರಣೆ ಅಂಗವಾಗಿ ಸಖೀ ಬಳಗದಿಂದ 'ಸಖೀಕಥಾ' ಕಥಾಸಂಕಲನಕ್ಕಾಗಿ ಗೆಳತಿಯರಿಂದ 'ಕನ್ನಡ' ಕತೆಗಳನ್ನು ಆಹ್ವಾನಿಸಲಾಗಿದೆ. ಕತೆಗಳು 2 ಸಾವಿರ ಪದ ಮಿತಿಯೊಳಗಿರಬೇಕು ಹಾಗೂ ಸ್ವತಂತ್ರವಾಗಿದ್ದು, ಈವರೆಗೆ ಎಲ್ಲಿಯೂ ಪ್ರಕಟವಾಗಿರಬಾರದು, ಪ್ರಸಾರವಾಗಿರಬಾರದು. ಕಡ್ಡಾಯವಾಗಿ 18 ವರುಷಕ್ಕಿಂತ ಮೇಲ್ಪಟ್ಟ ಮಹಿಳೆಯರು ಮಾತ್ರ ಯಾವುದೇ ಪ್ರಕಾರದ ಕತೆಗಳನ್ನಾದರೂ ಕಳುಹಿಸಬಹುದಾಗಿದೆ. ಆಸಕ್ತರು ತಮ್ಮ ಕತೆಗಳನ್ನು ನುಡಿ ತಂತ್ರಾಂಶದಲ್ಲಿ ಟೈಪಿಸಿ ಭಾವಚಿತ್ರ ಹಾಗೂ ತಮ್ಮ ಸ್ವವಿವರದೊಂದಿಗೆ ಡಿ.30ರೊಳಗೆ sakhikatha2223 @gmail.com ಮೇಲ್‌ಗೆ ಕಳುಹಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೊ.ಸಂಖ್ಯೆ 8310306882, 9964790442 ಸಂಪರ್ಕಿಸಿ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಶ್ರದ್ಧೆಯ ಶಿಲ್ಪ–ಮೈಸೂರು ಸುತ್ತಲಿನ ದೇಗುಲಗಳ ಪರಿಚಯ, ಪ್ರಸ್ತುತಿ– ಡಾ.ಟಿ.ಎಸ್.ಗೋಪಾಲ್, 6.40 ಅರಿವಿನ ಶಿಖರ– ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ–ಅಂಬಯ್ಯ ನುಲಿ, ನಿತಿನ್ ರಾಜಾರಾಂ ಶಾಸ್ತ್ರಿ, ಪಿ.ಎಸ್.ರಂಜಿನಿ, ವ್ಯಾಖ್ಯಾನ–ಮೊರಬದ ಮಲ್ಲಿಕಾರ್ಜುನ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ–ದೂರ ಸರಿದರು ಕಾದಂಬರಿಯ ಪ್ರಸ್ತುತಿ–ಉಮೇಶ್, 8.30 "ಉಲಿ ಉಯ್ಯಾಲೆ" ಸರಣಿಯ 6ನೇ ಕಾರ್ಯಕ್ರಮ "ಶಾಸನಗಳಲ್ಲಿ ಬದುಕು", ಲೇಖನ–ಡಾ.ಮಂಜುನಾಥ್ ಪ್ರಸ್ತುತಿ–ಪ್ರಭುಸ್ವಾಮಿ ಮಳಿಮಠ **ಮಧ್ಯಾಹ್ನ:** 12.30 ದೇವರನಾಮ–ನರಸಿಂಹನಾಯಕ್ ಮತ್ತು ಬಿ.ಆರ್.ಛಾಯಾ, 12.45 ದಿವ್ಯಾಂಗರ ಕ್ಷೇಮಕ್ಕಾಗಿ ಸರಕಾರಿ ಯತ್ನ–ಮಾಲಿನಿ ಅವರೊಂದಿಗೆ ಸಂದರ್ಶನ, ಸಂದರ್ಶಕರು–ದಿವಾಕರ ಹೆಗಡೆ, 1.20 ಭಾವಗೀತೆಗಳು–ಅಕ್ಷತಾ ಅದ್ದೋಣಿ, 3.00 ಡಾ.ಬಾಲಮುರಳಿ ಕೃಷ್ಣ–ಗಾಯನ, 4.00 ಕಥಾ ಕಲಾಕ್ಷೇಪ "ಲವಕುಶ", ಪ್ರಸ್ತುತಿ–ವಿದ್ವಾನ್ ಆರ್.ಗುರುರಾಜುಲು ನಾಯ್ಡು, 6.50 ಕೃಷಿರಂಗ–ಕಿಸಾನ್‌ವಾಣಿ, ತರಕಾರಿ ಹಾಗೂ ಹೂವಿನ ಕೃಷಿಯಲ್ಲಿನ ಅನುಭವ ಕುರಿತು ಎ.ಎಸ್.ಶ್ರೀಧರ್ ಮತ್ತು ಅಶ್ವಿನಿ ಅವರೊಡನೆ ಸಂದರ್ಶನ, 9.30 ಚಿಟ್ಟಿಬಾಬು–ವೀಣಾವಾದನ, 10.00 ಗಮಕ ವ್ಯಾಖ್ಯಾನ, ವಾಚನ–ಎಂ.ವಿ.ಶುಭ ವ್ಯಾಖ್ಯಾನ–ಕೃಪಾಮಂಜುನಾಥ್, 10.30 ಸವಿನೆನಪು

ಇಂದಿನ ಪಂಚಾಂಗ

6.12.2022 ಮಂಗಳವಾರ, ಮಳೆ ನಕ್ಷತ್ರ: ಜ್ಯೇಷ್ಠ, 03.12.2022ರಿಂದ 15.12.2022
ಶ್ರೀ ಶುಭಕೃತ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಶುಕ್ಲ ಪಕ್ಷ, ತಿಥಿ: ಚತುರ್ದಶಿ, ನಕ್ಷತ್ರ: ಭರಣಿ, ರಾಹುಕಾಲ: ಮಧ್ಯಾಹ್ನ 3ರಿಂದ 4.30ರವರೆಗೆ

■ **ಶ್ರೀ ಪಂಚಮುಖಿ ಆಂಜನೇಯಸ್ವಾಮಿ ದೇವಸ್ಥಾನ :** 22ನೇ ವರ್ಷದ ಹನುಮ ಜಯಂತಿ ಮಹೋತ್ಸವ, ಶ್ರೀ ಪಂಚಮುಖಿ ಆಂಜನೇಯ ಸ್ವಾಮಿಯವರಿಗೆ ನಿತ್ಯಾರಾಧನೆ, ವಿಶೇಷ ಚಂದನ ಅಲಂಕಾರ, ವಿಶೇಷ ಪೂಜೆ, ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಆವರಣ, ಬೆಳಗ್ಗೆಯಿಂದ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಹನುಮ ಜಯಂತಿ ಹಾಗೂ ದತ್ತ ಜಯಂತಿ ಪ್ರಯುಕ್ತ ಬೆಳಗ್ಗೆ 9ಕ್ಕೆ ಶ್ರೀ ಚಕ್ರ ಪೂಜಾ. ದತ್ತಾತ್ರೇಯ ಸ್ವಾಮಿ ಮಂಟಪೋತ್ಸವ, ಪಂಚಾಮೃತ ಅಭಿಷೇಕ, ಪುಣ್ಯ ಸ್ಮರಣ, 11ಗಂಟೆಗೆ ಅನಘ ವ್ರತ. ಸಂಜೆ 7ಕ್ಕೆ ಅನಘಾಷ್ಟಮಿ ವ್ರತ ವೈಭವಂ–ನಾದ ಮಂಟಪದಲ್ಲಿ ಶ್ರೀ ದತ್ತ ನಾಟ್ಯಾಲಯದಿಂದ ಕಲಾವಿದರಿಂದ ನೃತ್ಯ ನಾಟಕ, ಸ್ಥಳ: ಗಣಪತಿ ಸಚ್ಚಿದಾನಂದ ಆಶ್ರಮ, ಊಟಿ ರಸ್ತೆ.

■ **ಎಟಿಎಂಇ ಇಂಜಿನಿಯರಿಂಗ್ ಕಾಲೇಜು:** ವಿಟಿಯು ಅಂತರ ಕಾಲೇಜು ಮಹಿಳಾ ಬಾಸ್ಕೆಟ್ ಬಾಲ್ ಪಂದ್ಯಾವಳಿ, ಮುಖ್ಯ ಅತಿಥಿಗಳು: ಟೇಬಲ್ ಟೆನ್ನಿಸ್ ಆಟಗಾರ ಹೆಚ್.ಎನ್.ಶಂಕರನಾರಾಯಣ, ಅಧ್ಯಕ್ಷತೆ: ಎಟಿಎಂಇ ಕಾಲೇಜು ಅಧ್ಯಕ್ಷ ಎಲ್.ಅರುಣ್‌ಕುಮಾರ್, ಸ್ಥಳ: ಎಟಿಎಂಇ ಕಾಲೇಜು ಆವರಣ, ಬೆಳಗ್ಗೆ 9.30ಕ್ಕೆ.

■ **ಅಶೋಕಪುರಂ ಕ್ಷೇಮಾಭಿವೃದ್ಧಿ ಸಮಿತಿ:** ಡಾ.ಅಂಬೇಡ್ಕರ್ ಪರಿನಿರ್ವಾಣ ದಿನದ ಅಂಗವಾಗಿ ಉಚಿತ ಆರೋಗ್ಯ ತಪಾಸಣಾ ಶಿಬಿರ, ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಉಚಿತ ನೋಟ್‌ಬುಕ್, ಪೆನ್ನು, ಬ್ಯಾಗ್ ವಿತರಣೆ, ಅಧ್ಯಕ್ಷತೆ: ಸಂಸದ ವಿ.ಶ್ರೀನಿವಾಸಪ್ರಸಾದ್, ಮುಖ್ಯ ಅತಿಥಿಗಳು: ಸಚಿವ ಎಸ್.ಟಿ.ಸೋಮಶೇಖರ್, ಶಾಸಕರಾದ ಮರಿತಿಬ್ಬೇಗೌಡ, ಎಸ್.ಎ.ರಾಮದಾಸ್, ಸ್ಥಳ: ಪ್ರಾರ್ಥನಾ ಮಂದಿರ, ಅಶೋಕಪುರಂ, ಬೆಳಗ್ಗೆ 10ಕ್ಕೆ.

■ **ಕರ್ನಾಟಕ ರಾಜ್ಯ ಮುಕ್ತ ವಿವಿ:** ಡಾ.ಅಂಬೇಡ್ಕರ್ 66ನೇ ಪರಿನಿರ್ವಾಣ ದಿನಾಚರಣೆ, ಅಧ್ಯಕ್ಷತೆ: ಕರಾಮುವಿವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ, ಸ್ಥಳ: ನಳ ಸಭಾಂಗಣ, ಕರಾಮುವಿವಿ, ಬೆಳಗ್ಗೆ 10ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ:** ಭಾರತ ಭಾಗ್ಯ ವಿಧಾತ ರೂಪಕ ಪ್ರದರ್ಶನ ಹಾಗೂ ಸಂವಾದ, ಅಂಬೇಡ್ಕರ್ ಪ್ರತಿಮೆಗೆ ಪುಷ್ಪಾರ್ಚನೆ: ಮೈಸೂರು ವಿವಿ ಪ್ರಭಾರ ಕುಲಪತಿ ಪ್ರೊ.ಹೆಚ್.ರಾಜಶೇಖರ್, ಭಾರತ ಭಾಗ್ಯ ವಿದಾತ ರೂಪಕಕ್ಕೆ ಚಾಲನೆ: ಮೈಸೂರು ವಿವಿ ಕುಲಸಚಿವೆ ವಿ.ಆರ್.ಶೈಲಜಾ, ಮುಖ್ಯ ಅತಿಥಿಗಳು: ಮಾತೃ ಮಂಡಳಿ ವಿದ್ಯಾಸಂಸ್ಥೆ ಅಧ್ಯಕ್ಷೆ ವಿಜಯಲಕ್ಷ್ಮಿ ಅರಸ್, ಹೆಚ್.ಎ.ವಾಣಿ, ಸಂವಾದದಲ್ಲಿ: ಪ್ರೊ.ಆರ್.ಇಂದಿರಾ, ಪ್ರೊ. ಜೆ. ಸೋಮಶೇಖರ್, ಸುರೇಶ್, ಸ್ಥಳ: ಮಾತೃ ಮಂಡಳಿ ವಿದ್ಯಾಸಂಸ್ಥೆ, ಬೆಳಗ್ಗೆ 10.30ಕ್ಕೆ.

■ **ಶ್ರೀ ಗೀತಾ ಪ್ರಚಾರಿಣೀ ಸಭಾ ಟ್ರಸ್ಟ್ :** 88ನೇ ವರ್ಷದ ಶ್ರೀ ಗೀತಾ ಜಯಂತಿ ಮಹೋತ್ಸವ, ಬೆಳಗ್ಗೆ 7.30ಕ್ಕೆ ಸಾಮೂಹಿಕ ಭಗವದ್ಗೀತೆ ಪಾರಾಯಣ, ಬೆಳಗ್ಗೆ 8.30ಕ್ಕೆ ಮಹಾಮಂಗಳಾರತಿ ಮತ್ತು ಪ್ರಸಾದ ವಿನಿಯೋಗ, ಸಂಜೆ 5.30ಕ್ಕೆ ಶ್ರೀ ವಿದ್ಯಾ ವಿಷ್ಣುಸಭಾ ಟ್ರಸ್ಟ್ ಅವರಿಂದ ವಿಷ್ಣು ಸಹಸ್ರನಾಮ ಪಾರಾಯಣ, ಸಂಜೆ 6.30 ರಿಂದ ಡಾ. ಬೆ.ನಾ. ವಿಜಯೇಂದ್ರಾಚಾರ್ಯ ಅವರಿಂದ ಶ್ರೀಮತ್ ಭಾಗವತ ಸಪ್ತಾಹ, ಪ್ರವಚನ, ಸ್ಥಳ: ಟ್ರಸ್ಟ್ ಆವರಣ, ಶ್ರೀ ಗೀತಾ ಮಂದಿರ ರಸ್ತೆ, ಅಶೋಕ ರಸ್ತೆ.

■ **ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ:** ಡಾ. ಬಿ.ಆರ್. ಅಂಬೇಡ್ಕರ್ ಅವರ ಪರಿನಿಬ್ಬಾಣ ದಿನದ ಅಂಗವಾಗಿ ವಿಮರ್ಶಕ ಪ್ರೊ.ಮಹೇಶ್‌ಚಂದ್ರ ಗುರು ಅವರಿಂದ 'ಭಾರತದ ಸಂವಿಧಾನ ಮತ್ತು ರಾಜಕೀಯ ಪಕ್ಷಗಳು' ಕುರಿತು ಒಂದು ಅವಲೋಕನ, ಸ್ಥಳ: ಕಾಂಗ್ರೆಸ್ ಭವನ, ಬೆಳಗ್ಗೆ 11ಕ್ಕೆ.

■ **ಶ್ರೀ ವೀರಾಂಜನೇಯಸ್ವಾಮಿ ದೇವಸ್ಥಾನ ಟ್ರಸ್ಟ್:** ಶ್ರೀ ಹನುಮ ಜಯಂತಿ, ಶ್ರೀ ಸ್ವಾಮಿಯವರಿಗೆ ವಿಶೇಷ ಅಲಂಕಾರ, ಪೂಜೆ, ಸಂಜೆ 6ಕ್ಕೆ ವಿದ್ವಾನ್ ಎ.ಡಿ. ದತ್ತಾತ್ರೇಯ ಮತ್ತು ಶಿಷ್ಯ ವೃಂದದವರಿಂದ ಮ್ಯಾಂಡೋಲಿನ್ ವಾದನ, ಸ್ಥಳ: ಹನುಮಂತನಗರ, ಬನ್ನಿಮಂಟಪ ಬಡಾವಣೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಗ್ಯಾಸ್ಟ್ರಿಕ್ ತೊಂದರೆ ಹಾಗೂ ಮಹಿಳೆಯರಲ್ಲಿ ಅತಿ ಋತುಸ್ರಾವದ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ಗಂಟೆಗೆ.

■ **ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್ :** ಜಗದ್ಗುರು ಡಾ.ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಸಂಸ್ಮರಣದ ಅಂಗವಾಗಿ 27ನೇ ಸಂಗೀತ ಸಮ್ಮೇಳನ–2022, ಸಂಜೆ 5 ಗಂಟೆಗೆ ಪ್ರಜ್ವಲ್ ರಂಗರಾಜನ್ ತಂಡದಿಂದ ವೀಣಾವಾದನ, ಸಂಜೆ 6ಕ್ಕೆ ಸಮಾರೋಪ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಮಾರೋಪ ಭಾಷಣ: ಸಂಗೀತ ವಿದ್ವಾಂಸ ವಿದ್ವಾನ್ ಎಚ್.ಕೆ.ವೆಂಕಟರಾಮ್, ಸಂಗೀತ ವಿದ್ಯಾನಿಧಿ ಪ್ರಶಸ್ತಿ ಪ್ರದಾನ: ಸಮ್ಮೇಳನಾಧ್ಯಕ್ಷ ವಿದ್ವಾನ್ ವಿ.ನಂಜುಂಡಸ್ವಾಮಿ, ಅಧ್ಯಕ್ಷತೆ: ಸಂಗೀತ ವಿದ್ಯಾನಿಧಿ ಮೈಸೂರು ಎಂ.ನಾಗರಾಜ್, ಸಂಜೆ 7ಕ್ಕೆ ಎಂ.ಬಿ.ಹರಿಹರನ್ ಮತ್ತು ಎಸ್.ಅಶೋಕ್ ಅವರಿಂದ ಯುಗಳ ಗಾಯನ, ನಳಿನ ಮೋಹನ್–ವಯೋಲಿನ್, ಪಾರುಪಲ್ಲಿ ಫಲ್ಗುಣ್–ಮೃದಂಗ, ರಂಗನಾಥ ಚಕ್ರವರ್ತಿ–ಘಟಂ, ಸ್ಥಳ: ನವಜ್ಯೋತಿ ಸಭಾಂಗಣ, ಜೆಎಸ್‌ಎಸ್ ಮಹಿಳಾ ಕಾಲೇಜು, ಸರಸ್ವತಿಪುರಂ.

■ **ಶ್ರೀ ಸದ್ಗುರು ಸೇವಾ ಮಂಡಲ :** 5ನೇ ವರ್ಷದ ಶ್ರೀ ದತ್ತಾತ್ರೇಯ ಜಯಂತಿ ಸಪ್ತಾಹ, ಬೆಳಗ್ಗೆ 7 ಗಂಟೆಗೆ ಶ್ರೀಯವರಿಗೆ ರುದ್ರಾಭಿಷೇಕ, ಸರ್ವಾಲಂಕಾರ, ಶ್ರೀ ಗುರುಚರಿತ್ರೆ ಪಾರಾಯಣ, ಬೆಳಗ್ಗೆ 11ಕ್ಕೆ ಮಹಾ ಮಂಗಳಾರತಿ, ಪ್ರಸಾದ ವಿನಿಯೋಗ, ಸಂಜೆ ಉಪನ್ಯಾಸ, ದತ್ತ ಭಜನೆ ಮತ್ತು ಪ್ರಸಾದ ವಿನಿಯೋಗ, ಸ್ಥಳ: ಶ್ರೀ ಮನ್ಮಹಾರಾಜ ಸಂಸ್ಕೃತ ಪಾಠಶಾಲೆಯ ಪಕ್ಕ, ಹೊಸ ಸಯ್ಯಾಜಿರಾವ್ ರಸ್ತೆ.

■ **ಶ್ರೀ ಉತ್ತರಾದಿ ಮಠ ಶ್ರೀ ಆಂಜನೇಯಸ್ವಾಮಿ ದೇವಸ್ಥಾನ :** ಶ್ರೀ ಹನುಮದ್‌ವ್ರತ, ಬೆಳಗ್ಗೆ 6ಕ್ಕೆ ನಿರ್ಮಾಲ್ಯ ವಿಸರ್ಜನೆ, 7ಕ್ಕೆ ಪಂಚಾಮೃತ ಅಭಿಷೇಕ, 8ಕ್ಕೆ ಮಧು ಅಭಿಷೇಕ, 9ಕ್ಕೆ ಪವಮಾನ ಹೋಮ, ನವಗ್ರಹ ಹೋಮ, 11.30ಕ್ಕೆ ಪಲ್ಲಕ್ಕಿ ಉತ್ಸವ, ಮ. 12ಕ್ಕೆ ಮಹಾಮಂಗಳಾರತಿ, ಮಧ್ಯಾಹ್ನ 12.30ಕ್ಕೆ ಅನ್ನಸಂತರ್ಪಣೆ, ಸಂಜೆ 5ಕ್ಕೆ ಬಾಗಲಕೋಟೆಯ ವಿದ್ವಾನ್ ಅನಂತ ಕುಲಕರ್ಣಿ ಅವರಿಂದ ಗಾನಲಹರಿ ಸಂಗೀತ ಕಾರ್ಯಕ್ರಮ, ಸಂಜೆ 6ಕ್ಕೆ ಸಾಧಕರುಗಳಿಗೆ ಸನ್ಮಾನ ಸಮಾರಂಭ, ಅಧ್ಯಕ್ಷತೆ : ಶ್ರೀ ಉತ್ತರಾದಿ ಮಠದ ಶ್ರೀ ಅನಿರುದ್ಧಾಚಾರ್ಯ ಪಾಂಡುರಂಗಿ, ಮುಖ್ಯ ಅತಿಥಿಗಳು : ಮೇಯರ್ ಶಿವಕುಮಾರ್, ಶಾಸಕ ಎಲ್. ನಾಗೇಂದ್ರ, ಮಾಜಿ ಮುಡಾ ಅಧ್ಯಕ್ಷ ಹೆಚ್.ವಿ. ರಾಜೀವ್, ಮೈಸೂರು ನಗರ ಹಾಗೂ ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್, ಸ್ಥಳ: ದೇವಸ್ಥಾನದ ಆವರಣ, ಕೆ.ಆರ್.ಎಸ್. ರಸ್ತೆ, ಯಾದವಗಿರಿ.

■ **ದಲಿತ ಸಂಘರ್ಷ ಸಮಿತಿ :** ಡಾ.ಬಾಬಾ ಸಾಹೇಬ್ ಅಂಬೇಡ್ಕರ್‌ರ 66ನೇ ಪರಿನಿಬ್ಬಾಣ ದಿನದ ಅಂಗವಾಗಿ ಶೋಷಿತ ಸಮುದಾಯಗಳ ಸ್ವತಂತ್ರ ರಾಜ್ಯಾಧಿಕಾರಕ್ಕಾಗಿ ಪರ್ಯಾಯ ರಾಜಕಾರಣಕ್ಕಾಗಿ ರಾಜ್ಯ ಮಟ್ಟದ ದಲಿತ ಸಂಘರ್ಷ ಸಮಿತಿಗಳ ಜನಜಾಗೃತಿ ಸಮಾವೇಶ, ಸ್ಥಳ: ಮಹಾರಾಜ ಕಾಲೇಜು ಶತಮಾನೋತ್ಸವ ಭವನ, ಮಧ್ಯಾಹ್ನ 12ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯದ ಲಲಿತ ಕಲೆಗಳ ಕಾಲೇಜು :** ಸ್ವಿಟ್ಜರ್‌ಲ್ಯಾಂಡ್‌ನ ಹೆಸರಾಂತ ಪಿಯಾನೋ ವಾದಕ ಗಿಲ್ಲೆಸ್ ಗ್ರಿಮೈತ್ರೆ ಅವರಿಂದ ವಿಶೇಷ ಉಪನ್ಯಾಸ ಮತ್ತು ಪ್ರಾತ್ಯಕ್ಷಿಕೆ, ಅಧ್ಯಕ್ಷತೆ : ಅನಿತಾ ವಿಮಲಾ ಬ್ರಾಗ್ಸ್, ಸ್ಥಳ: ಅಲಲಿತ ಕಲೆಗಳ ಕಾಲೇಜು, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ.

■ **ಮಂಚೇಗೌಡನಕೊಪ್ಪಲು ಕ್ಷೇಮಾಭಿವೃದ್ಧಿ ಸಂಘ:** ಶ್ರೀ ವರಸಿದ್ದಿ ವಿನಾಯಕ ಸ್ವಾಮಿ, ನವಗ್ರಹ ಪ್ರತಿಷ್ಠಾಪನಾ ಮಹೋತ್ಸವ, ಶ್ರೀರಾಮ ಮಂದಿರ ಉದ್ಘಾಟನೆ, ವಿನಾಯಕ ಗೋಪುರ ಕಳಶ ಸ್ಥಾಪನಾ ಮಹೋತ್ಸವ, ಉದ್ಘಾಟನೆ : ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಅಧ್ಯಕ್ಷತೆ : ಶಾಸಕ ಎಲ್.ನಾಗೇಂದ್ರ, ಮುಖ್ಯ ಅತಿಥಿಗಳು: ಶಾಸಕರಾದ ಜಿ.ಟಿ. ದೇವೇಗೌಡ, ಡಿ. ಮಾದೇಗೌಡ, ಮರಿತಿಬ್ಬೇಗೌಡ, ಡಾ. ಯತೀಂದ್ರ ಸಿದ್ದರಾಮಯ್ಯ, ಮಾಜಿ ಶಾಸಕ ವಾಸು, ಮುಡಾ ಮಾಜಿ ಅಧ್ಯಕ್ಷ ಡಿ.ಧ್ರುವಕುಮಾರ್, ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ, ಕೆ.ಹರೀಶ್‌ಗೌಡ, ಪಾಲಿಕೆ ಸದಸ್ಯ ಕೆ.ವಿ. ಶ್ರೀಧರ್, ಪಾಲಿಕೆ ಸದಸ್ಯರಾದ ಪ್ರೇಮ ಶಂಕರೇಗೌಡ ಮತ್ತು ಲಕ್ಷ್ಮಿ ಶಿವಣ್ಣ, ಸ್ಥಳ: ಮಂಚೇಗೌಡನಕೊಪ್ಪಲು ಅರಳಿಮರದ ವೃತ್ತ, ಬೆಳಗ್ಗೆ 9ಕ್ಕೆ.

■ **ಶ್ರೀ ಸುಬ್ರಹ್ಮಣ್ಯಸ್ವಾಮಿ ಟೆಂಪಲ್ ಟ್ರಸ್ಟ್ :** 22ನೇ ವರ್ಷದ ಕಾರ್ತಿಕ ಲಕ್ಷ ದೀಪೋತ್ಸವ, ಪೂಜಾ ಕಾರ್ಯಕ್ರಮ, ಕ್ಷೀರಾಭಿಷೇಕ, ಪಂಚಾಮೃತ ಅಭಿಷೇಕ, ಮಹಾಪೂಜೆ, ಸಂಜೆ 6ಕ್ಕೆ ಶ್ರೀ ಸುಬ್ರಹ್ಮಣ್ಯಸಾಮಿಯವರ ಉತ್ಸವ, ಪ್ರಸಾದ ವಿನಿಯೋಗ, ಸ್ಥಳ: ಟ್ರಸ್ಟ್ ಆವರಣ, ವಿಶ್ವೇಶ್ವರನಗರ.

■ **ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ :** ಗೀತಾ ಜಯಂತಿ ಹಾಗೂ ನಾಡಿನ ಹೆಸರಾಂತ ಪ್ರವಚನಕಾರರಾದ ಪಂ. ರಘೋತ್ತಮಾಚಾರ್ಯ ನಾಗಸಂಪಿಗೆ ಅವರಿಗೆ ಅಭಿನಂದನೆ, ಮುಖ್ಯ ಅತಿಥಿಗಳು: ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ಉತ್ತರಾದಿ ಮಠದ ಆಡಳಿತಾಧಿಕಾರಿ ಪಂಡಿತ್ ಅನಿರುದ್ಧ ಆಚಾರ್ಯ, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಸ್ಥಳ: ಶ್ರೀ ಉತ್ತರಾದಿ ಮಠ ಆವರಣ, ಅಗ್ರಹಾರ, ಸಂಜೆ 6.30ಕ್ಕೆ.

■ **ರಂಗಾಯಣ :** ರಂಗಾಯಣದ ಭಾರತೀಯ ರಂಗ ವಿದ್ಯಾಲಯದ ವಿದ್ಯಾರ್ಥಿಗಳಿಂದ ಧರ್ಮವೀರ ಭಾರತಿ ಅವರ ಅಂಧಯುಗ ನಾಟಕ ಪ್ರದರ್ಶನ, ನಿರ್ದೇಶನ : ಜಗದೀಶ್ ಮನೆವಾರ್ತೆ, ಸ್ಥಳ: ರಂಗಾಯಣದ ವನರಂಗ, ಸಂಜೆ 6.30ಕ್ಕೆ.

■ **ಡಾ. ಬಿ.ಆರ್. ಅಂಬೇಡ್ಕರ್ ದಲಿತ ಮಹಾಸಭಾ :** ಡಾ. ಬಿ.ಆರ್. ಅಂಬೇಡ್ಕರ್‌ರವರ ಮಹಾನಿಬ್ಬಾಣದ ಅಂಗವಾಗಿ ಜ್ಞಾನಸೂರ್ಯರಿಗೆ ದೀಪಗಳ ನಮನ, ಉಪಸ್ಥಿತರು : ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ, ಶ್ರೀ ಬೋಧಿದತ್ತ ಬಂತೇಜಿ, ಸ್ಥಳ: ಅಂಬೇಡ್ಕರ್ ಸರ್ಕಲ್‌ನಿಂದ ಟೌನ್‌ಹಾಲ್‌ವರೆಗೆ, ಸಂಜೆ 7ಕ್ಕೆ.

ಸುತ್ತೂರಿನಲ್ಲಿಂದು, ನಂಜನಗೂಡು ತಾಲೂಕು

■ **ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ :** ಶಿವದೀಪೋತ್ಸವ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಂಜೆ 6ಕ್ಕೆ ಸಾಮೂಹಿಕ ಪ್ರಾರ್ಥನೆ, 6.35ಕ್ಕೆ ಜಾತ್ರಾ ಮಹೋತ್ಸವ ಪ್ರಸಾರ ರಥಕ್ಕೆ ಚಾಲನೆ, ರಾತ್ರಿ 7ಕ್ಕೆ ಪ್ರೊ. ಎಂ. ಕೃಷ್ಣೇಗೌಡ ಅವರಿಂದ ಬೆಳಕಿನ ಉತ್ಸವ ಕುರಿತು ಉಪನ್ಯಾಸ, ರಾ. 8ಕ್ಕೆ ಮಹಾಮಂಗಳಾರತಿ, ಪ್ರಾಕಾರೋತ್ಸವ, ಪ್ರಸಾದ ವಿನಿಯೋಗ.

ಮೈಸೂರು ಜಿಪಂ ಮಾಜಿ ಸದಸ್ಯ ಮಾದೇಗೌಡರ ಅದ್ಧೂರಿ ಹುಟ್ಟುಹಬ್ಬ

ಸಾವಿರಾರು ಅಭಿಮಾನಿಗಳಿಂದ ಅಭಿನಂದನೆ: ಸಿಹಿ ಹಂಚಿ ಸಂಭ್ರಮ





ಮೈಸೂರು, ಡಿ.5(ಎಂಕೆ)– ಮೈಸೂರು ಜಿಲ್ಲಾ ಪಂಚಾಯತಿ ಮಾಜಿ ಸದಸ್ಯ ಎಸ್.ಮಾದೇಗೌಡರ ಹುಟ್ಟುಹಬ್ಬವನ್ನು ಅದ್ಧೂರಿಯಾಗಿ ಆಚರಿಸಲಾಯಿತು.

ಮೈಸೂರು–ಬನ್ನೂರು ಮುಖ್ಯ ರಸ್ತೆಯಲ್ಲಿರುವ ಹೆಚ್.ಡಿ.ದೇವೇಗೌಡ ವೃತ್ತದಲ್ಲಿ ಜಮಾವಣೆಗೊಂಡ ಎಸ್.ಮಾದೇಗೌಡರ ಸಾವಿರಾರು ಅಭಿಮಾನಿಗಳು ಪಟಾಕಿ ಸಿಡಿಸಿ, ಸಂಭ್ರಮಿಸಿದರು. ಈ ವೇಳೆ ಬೃಹತ್ ಕೇಕ್ ಕತ್ತರಿಸಿದ ಮಾದೇಗೌಡರು, ತಮ್ಮ 56ನೇ ವರ್ಷದ ಹುಟ್ಟುಹಬ್ಬ ಆಚರಿಸಿಕೊಂಡರು. ಬಳಿಕ ಅಭಿಮಾನಿಗಳಿಗೆ ಸಿಹಿ ಹಂಚಲಾಯಿತು. ಇದಕ್ಕೂ ಮುನ್ನ ರಿಂಗ್ ರಸ್ತೆಯಲ್ಲಿರುವ ವಿಟಿಯು ಕಾಲೇಜಿನಿಂದ ವೇದಿಕೆವರೆಗೆ ಬೆಳ್ಳಿ ರಥದಲ್ಲಿ ಮೆರವಣಿಗೆ ಮೂಲಕ ಸ್ವಾಗತಿಸಲಾಯಿತು.

ಈ ವೇಳೆ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಮುಖಂಡ ಬೀರಿಹುಂಡಿ ಬಸವಣ್ಣ, ಮಾದೇಗೌಡರ ಸಾವಿರಾರು ಅಭಿಮಾನಿಗಳು ಅವರ ಹುಟ್ಟುಹಬ್ಬವನ್ನು ಅದ್ಧೂರಿಯಾಗಿ ಆಚರಿಸಿದ್ದಾರೆ. ಪಕ್ಷಾತೀತವಾಗಿ ಚಾಮುಂಡೇಶ್ವರಿ ಕ್ಷೇತ್ರದ ಮುಖಂಡರು, ಹಿತೈಷಿಗಳು ಶುಭ ಕೋರಿದ್ದಾರೆ ಎಂದು ಸಂತಸ ವ್ಯಕ್ತಪಡಿಸಿದರು.

ಮೈಮುಲ್ ಮಾಜಿ ಅಧ್ಯಕ್ಷ ಮಾವಿನಹಳ್ಳಿ ಸಿದ್ದೇಗೌಡ, ಮಾಜಿ ಮೇಯರ್ ಸಂದೇಶ್‌ಸ್ವಾಮಿ, ಮುಖಂಡರಾದ ಹಿನಕಲ್ ಕೆಂಪನಾಯಕ, ರಮೇಶ್‌ಗೌಡ, ಎಂಪ್ರೊ ಕಾಂತರಾಜು, ಸಾಲುಂಡಿ ಮಹದೇವಣ್ಣ, ಸಾಲುಂಡಿ ಬಸವರಾಜು, ಗೋಪಾಲಪುರ ಬಸವರಾಜು, ಶಂಕರ್, ವಾಲ್ಮೀಕಿ ಸಮಾಜದ ಮುಖಂಡ ಕಾಟೂರ್ ದೇವರಾಜು, ಕಾಮನಕೆರೆಹುಂಡಿ ಕೃಷ್ಣ, ರಮ್ಮನಹಳ್ಳಿ ಸೋಮಣ್ಣ, ವೆಂಕಟೇಶ್, ಹಂಚ್ಯಾ ಚೆನ್ನಪ್ಪ, ಶಂಕರ್‌ಗೌಡ, ಅರುಣ್‌ಕುಮಾರ್, ಸುರೇಶ್‌ಗೌಡ, ಗ್ರಾಪಂ ಮಾಜಿ ಉಪಾಧ್ಯಕ್ಷ ಸಂದೀಪ್, 36ನೇ ವಾರ್ಡ್ ಅಧ್ಯಕ್ಷ ಸಿ.ಮಹೇಶ್ ಮತ್ತಿತರರು ಉಪಸ್ಥಿತರಿದ್ದರು.

ಚುನಾವಣೆಗೆ ಸ್ಪರ್ಧಿಸುವುದು ಖಚಿತ...

ಮುಂಬರುವ 2023ರ ವಿಧಾನಸಭಾ ಚುನಾವಣೆಗೆ ನಮ್ಮ ತಂಡದಿಂದ ಒಬ್ಬರು ಸ್ಪರ್ಧಿಸುವುದು ಶೇ.100ರಷ್ಟು ಖಚಿತ ಎಂದು ಜಿಪಂ ಮಾಜಿ ಸದಸ್ಯ ಎಸ್.ಮಾದೇಗೌಡ ತಿಳಿಸಿದ್ದಾರೆ.

ಹುಟ್ಟುಹಬ್ಬ ಆಚರಿಸಿಕೊಂಡ ಬಳಿಕ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಅವರು, ಸಾವಿರಾರು ಅಭಿಮಾನಿಗಳು ಸೇರಿ ನನ್ನ ಹುಟ್ಟುಹಬ್ಬ ಆಚರಿಸಿದ್ದಾರೆ. ನಾನು, ಬೀರಿಹುಂಡಿ ಬಸವಣ್ಣ, ಮಾವಿನಹಳ್ಳಿ ಸಿದ್ದೇಗೌಡ ಹಾಗೂ ಕೆಂಪನಾಯಕ ಇರುವ ಕಡೆಯಲ್ಲಿ ಪ್ರಾಮಾಣಿಕವಾಗಿ ಜನ ಸೇವೆ ಮಾಡಿದ್ದೇವೆ. ನಮ್ಮ ತಂಡದಿಂದ ಒಬ್ಬರು ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸುವುದು ಖಚಿತ. ಪಕ್ಷದಿಂದ ಅಥವಾ ಪಕ್ಷೇತರವಾಗಿ ಸ್ಪರ್ಧಿಸಬೇಕೇ ಎಂಬುದನ್ನು ಕ್ಷೇತ್ರದ ಮತದಾರರು, ಹಿತೈಷಿಗಳೊಂದಿಗೆ ಚರ್ಚಿಸಿ ನಿರ್ಧರಿಸಲಾಗುವುದು ಎಂದು ತಿಳಿಸಿದರು.

ಸಿದ್ದರಾಮಯ್ಯ ಮತ್ತೆ ಸಿಎಂ ಆಗಲೇಬೇಕು

- ಜಮೀರ್ ಅಹಮದ್‌ಖಾನ್ ಪುನರುಚ್ಚಾರ
- ವರಿಷ್ಠರ ಕಟ್ಟಾದೇಶಕ್ಕೂ ಕೇರ್ ಮಾಡದ 'ಅಭಿಮಾನಿ'



ಬೆಂಗಳೂರು, ಡಿ.5 (ಕೆಎಂಶಿ)– ವಿಧಾನಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಮತ್ತೆ ಮುಖ್ಯಮಂತ್ರಿಯಾಗಬೇಕೆಂದು ಕಾಂಗ್ರೆಸ್‌ನ ಹಿರಿಯ ಶಾಸಕ ಜಮೀರ್ ಅಹ್ಮದ್ ಖಾನ್ ಪುನರುಚ್ಚರಿಸಿದ್ದಾರೆ. ಕಾಂಗ್ರೆಸ್ ವರಿಷ್ಠರು ಮುಂದಿನ ಮುಖ್ಯಮಂತ್ರಿ ಯಾರು ಎಂಬುದರ ಬಗ್ಗೆ ಸಾರ್ವಜನಿಕವಾಗಿ ಪ್ರಸ್ತಾಪ ಮಾಡಬಾರದೆಂದು ಕಟ್ಟಾದೇಶ ನೀಡಿದ್ದರೂ, ಜಮೀರ್ ತಮ್ಮ ಹಿಂದಿನ ನಿಲುವಿಗೆ ಅಂಟಿಕೊಂಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಬೇಕೆಂದು ನಾನು ಈ ಹಿಂದೆ ಹೇಳಿದ್ದೆ. ಅದನ್ನೇ ಪುನರುಚ್ಚರಿಸುತ್ತೇನೆ. ಈ ವಿಷಯದಲ್ಲಿ ನಾನು ಹಿಂದೆ ಸರಿಯುವ ಪ್ರಶ್ನೇ ಇಲ್ಲ. ಇದು ನನ್ನ ಒಬ್ಬನ ಅನಿಸಿಕೆಯಲ್ಲ. ರಾಜ್ಯದ ಜನತೆಯ ಆಶಯವೂ ಆಗಿದೆ. ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರುವುದನ್ನು ಯಾರಿಂದಲೂ ತಡೆಯಲು ಸಾಧ್ಯವಿಲ್ಲ. ಪಕ್ಷ ಅಧಿಕಾರಕ್ಕೆ ಬಂದ ನಂತರ ಯಾರು ನಾಯಕರು ಆಗಬೇಕೆಂಬ ಬಗ್ಗೆ ವರಿಷ್ಠರು ತೀರ್ಮಾನ ತೆಗೆದುಕೊಳ್ಳುತ್ತಾರೆ. ವರಿಷ್ಠರ ತೀರ್ಮಾನಕ್ಕೆ ನಾನೂ ಬದ್ಧ, ಆದರೆ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಬೇಕು.

2013ರಿಂದ 2018ರವರೆಗೂ ಅವರು ನೀಡಿರುವ ಆಡಳಿತದ ಬಗ್ಗೆ ಜನ ಈಗಲೂ ಮಾತನಾಡುತ್ತಾರೆ. ಮುಂಬರುವ ಚುನಾವಣೆಯಲ್ಲಿ ಅಂದಿನ ಆಡಳಿತದ ಕಾರ್ಯಕ್ರಮಗಳೇ ನಮ್ಮನ್ನು ಕೈಹಿಡಿಯಲಿದೆ.

ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರವನ್ನು ಸಿದ್ದರಾಮಯ್ಯನವರಿಗೆ ಬಿಟ್ಟುಕೊಡಲು ಈಗಲೂ ಬದ್ಧನಾಗಿದ್ದೇನೆ. ನಾನು ಆಕ್ಷೇತ್ರದ ಮಗ, ಸಿದ್ದರಾಮಯ್ಯ ಆ ಕ್ಷೇತ್ರದ ಅಳಿಯ. ನನ್ನ ವಿರುದ್ಧ ಬಿಜೆಪಿ ಮತ್ತು ಜೆಡಿಎಸ್ ಯಾವುದೇ ಅಭ್ಯರ್ಥಿಯನ್ನು ಕಣಕ್ಕಿಳಿಸಿದರೂ, ನಾನು ಕಳೆದ ಬಾರಿಗಿಂತ ಈ ಬಾರಿ ಹೆಚ್ಚಿನ ಮತಗಳ ಅಂತರದಿಂದ ಜಯ ಗಳಿಸುತ್ತೇನೆ. ಬಿಜೆಪಿ ಎಂತಹ ರೌಡಿಯನ್ನಾದರೂ, ಕಣಕ್ಕಿಳಿಸಲಿ, ನಾನು ಅದಕ್ಕೆ ಅಂಜುವುದಿಲ್ಲ. ನಾನು ಆ ಕ್ಷೇತ್ರದ ಮಗ, ಮನೆಯ ಮಗನನ್ನು ಬಿಟ್ಟು, ಬೇರೆಯವರಿಗೆ ಎಲ್ಲಿಯಾದರೂ ಮಣೆ ಹಾಕುತ್ತಾರಾ ಎಂದು ಪ್ರಶ್ನಿಸಿದರು.

ನಟ ಮನ್‌ದೀಪ್ ರಾಯ್‌ಗೆ ಹೃದಯಾಘಾತ



ಬೆಂಗಳೂರು: ಕನ್ನಡ ಚಿತ್ರರಂಗದ ಖ್ಯಾತ ನಟ ಮನ್‌ದೀಪ್ ರಾಯ್ ಅವರಿಗೆ ಹೃದಯಾಘಾತ ಸಂಭವಿಸಿದ್ದು, ಅವರನ್ನು ನಗರದ ಶೇಷಾದ್ರಿಪುರದಲ್ಲಿರುವ ಅಪೊಲೊ ಆಸ್ಪತ್ರೆಗೆ ದಾಖಲಿಸಲಾಗಿದೆ.

ಎರಡು ದಿನಗಳ ಹಿಂದೆ ಅವರಿಗೆ ಲಘು ಹೃದಯಾಘಾತವಾಗಿತ್ತು ಸದ್ಯ ಚಿಕಿತ್ಸೆ ಮುಂದುವರಿದಿದ್ದು, ಅವರ ಆರೋಗ್ಯ ಸ್ಥಿರವಾಗಿದೆ ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ. ಹಾಸ್ಯ ಪ್ರಧಾನ ಪಾತ್ರಗಳಲ್ಲಿ ನಟಿಸುತ್ತಿದ್ದ ಮನ್ದೀಪ್ ರಾಯ್, 500ಕ್ಕೂ ಅಧಿಕ ಸಿನಿಮಾಗಳಲ್ಲಿ ನಟಿಸಿದ್ದಾರೆ. ಕಳೆದ ನಾಲ್ಕು ದಶಕಗಳಲ್ಲಿ ವರನಟ ಡಾ.ರಾಜ್‌ಕುಮಾರ್, ಶಂಕರ್‌ನಾಗ್, ಅನಂತನಾಗ್ ಹೀಗೆ ಕನ್ನಡ ಚಿತ್ರರಂಗದ ದಿಗ್ಗಜರೊಂದಿಗಷ್ಟೇ ಅಲ್ಲದೆ, ಇತ್ತೀಚಿಗಿನ ಯುವ ಚಿತ್ರತಂಡಗಳೊಂದಿಗೂ ಅವರು ಬಣ್ಣಹಚ್ಚಿದ್ದಾರೆ.

ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಮುಂದುವರಿಕೆಗೆ ಆಗ್ರಹ

ಮೈಸೂರು, ಡಿ.5(ಎಸ್‌ಪಿಎನ್)– ಮೈಸೂರು ರಂಗಾಯಣದಲ್ಲಿ ನಿತ್ಯ ಚಟುವಟಿಕೆಗಳ ಮೂಲಕ ನಾಡಿನ ಮನೆ ಮಾತನಾಗಿರುವ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಅವರನ್ನು ರಂಗಾಯಣ ನಿರ್ದೇಶಕರಾಗಿ ಮುಂದುವರೆಸುವಂತೆ ಕೆಎಂಪಿಕೆ ಚಾರಿಟೆಬಲ್ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಹಿರಿಯ ಸಾಹಿತಿ ಡಾ.ಎಸ್.ಎಲ್.ಭೈರಪ್ಪ ರಚಿತ 'ಪರ್ವ' ನಾಟಕವನ್ನು ರಂಗ ಪ್ರದರ್ಶನಕ್ಕೆ ಅಣಿಗೊಳಿಸಿ, ನಾಡಿನ ಮನೆ ಮಾತಾಗಿರುವ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪನವರ ಅಧಿಕಾರಾವಧಿ ಈ ತಿಂಗಳ ಅಂತ್ಯಕ್ಕೆ ಮುಕ್ತಾಯಗೊಳ್ಳಲಿದ್ದು, ಅವರನ್ನು ಮತ್ತೆ ಮುಂದುವರೆಸುವಂತೆ ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಭಗವದ್ಗೀತೆ ಪ್ರತಿಯೊಬ್ಬರ ಬದುಕಿನ ಮಾರ್ಗದರ್ಶಕ ಗ್ರಂಥ

ಪ್ರವಚನಕಾರ ರಘೋತ್ತಮಾಚಾರ್ಯ ನಾಗ ಸಂಪಿಗೆ ಅಭಿಮತ



ಮೈಸೂರು, ಡಿ.5(ಎಸ್‌ಪಿಎನ್)– ಭಗವದ್ಗೀತೆ ಬರೀ ಗ್ರಂಥವಷ್ಟೇ ಅಲ್ಲ. ಪ್ರತಿಯೊಬ್ಬರ ಬದುಕಿನ ಮಾರ್ಗದರ್ಶಕ ಗ್ರಂಥವೂ ಹೌದು. ಅಲ್ಲದೆ, ಇಡೀ ಮನುಕುಲಕ್ಕೆ ಸಂಬಂಧಿಸಿದ ಗ್ರಂಥವಾಗಿದೆ ಎಂದು ಪ್ರವಚನಕಾರ ರಘೋತ್ತಮಾಚಾರ್ಯ ನಾಗಸಂಪಿಗೆ ಅಭಿಪ್ರಾಯಪಟ್ಟರು.

ಮೈಸೂರು ನಗರದ ಅಗ್ರಹಾರದಲ್ಲಿರುವ ಉತ್ತರಾಧಿ ಮಠದ ರಸ್ತೆಯಲ್ಲಿರುವ ಉತ್ತರಾದಿ ಮಠದ ಆವರಣದಲ್ಲಿ ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘ ಹಾಗೂ ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ವತಿಯಿಂದ ಏರ್ಪಡಿಸಿದ್ದ 'ಗೀತಾ ಜಯಂತಿ' ಅಂಗವಾಗಿ ನಾಲ್ಕು ದಿನಗಳ ಭಗವದ್ಗೀತಾ ಅಭಿಯಾನದಲ್ಲಿ ಪಾಲ್ಗೊಂಡು ಮಾತನಾಡಿದರು.

ಭಗವದ್ಗೀತೆಯ ಪ್ರತಿಯೊಂದು ಅಧ್ಯಯನದಲ್ಲೂ ವಿಶ್ವ ಬಂಧುತ್ವ ಸಂದೇಶವಿದೆ. ಅದು ಸತ್ಯ, ನ್ಯಾಯ, ನೀತಿ, ಧರ್ಮವನ್ನು ಸಾರುತ್ತದೆ. ಹೀಗಾಗಿ ಭಗವದ್ಗೀತೆ ಅಧ್ಯಯನ ಮಾಡಿದವರು ಎಂದೆಂದಿಗೂ ಶ್ರೇಷ್ಠ ವ್ಯಕ್ತಿಗಳಾಗಿ ಹೊರಹೊಮ್ಮುತ್ತಾರೆ. ಗೀತೆ ಪಠಣದಿಂದ ವ್ಯಕ್ತಿತ್ವ ಬೆಳವಣಿಗೆ, ಶ್ರೇಷ್ಠ ನಡವಳಿಕೆ ಅಳವಡಿಸಿಕೊಳ್ಳಲು ಸಾಧ್ಯವಾಗಲಿದೆ ಎಂದು ತಿಳಿಸಿದರು.

ವಿಶ್ವದಲ್ಲಿ ಭಗವದ್ಗೀತೆಗಿಂತ ಶ್ರೇಷ್ಠವಾದ ಗ್ರಂಥ ಇನ್ನೊಂದಿಲ್ಲ. ಜ್ಞಾನಕ್ಕೆ ಮತ್ತೊಂದು ಹೆಸರೇ ಭಗವದ್ಗೀತೆ. ಆಳವಾದ ಆಧ್ಯಾತ್ಮಿಕ ಜ್ಞಾನವನ್ನು ಹೊಂದಿರುವ ಗೀತೆಯ ಸಾರವನ್ನು ನಿತ್ಯ ಪಠಣ ಮಾಡುವುದರಿಂದ ಮನುಷ್ಯನ ಜೀವನ ಮತ್ತು ವ್ಯಕ್ತಿತ್ವದ ಸಮಗ್ರ ಬೆಳವಣಿಗೆಯಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಗೀತೆಯ ಭಾಷೆ ಸುಲಭವಾಗಿ ಅರಿಯುವಷ್ಟು ಸರಳವಾಗಿದ್ದರೂ ಆಧ್ಯಾತ್ಮಿಕವಾಗಿ ಬದುಕಿಗೆ ಗೀತೆಯ ಸಾಲು ಸರಳವಾಗಿದ್ದರೂ ಆಳವಾದ ಅರ್ಥಗಳನ್ನು ಅದು ಒಳಗೊಂಡಿದೆ. ಆಧ್ಯಾತ್ಮಿಕವಾಗಿ ಅಷ್ಟೇ ಅಲ್ಲದೆ, ಗೀತೆ ಮಾರ್ಗದರ್ಶಿಯಾಗಿದೆ ಎಂದರು.

ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಭಗವದ್ಗೀತೆ, ಮಾನವೀಯ ಮೌಲ್ಯಗಳಿರುವ ಅಮೂಲ್ಯ ಗ್ರಂಥ. ಹಾಗಾಗಿ ಪ್ರತಿಯೊಬ್ಬರು ಭಗವದ್ಗೀತೆ ಸಾಲುಗಳನ್ನು ಪಠಣ ಮಾಡಿ, ತಮ್ಮ ಬದುಕಿನಲ್ಲಿ ಗೀತೆಯ ಸಾರವನ್ನು ಅಳವಡಿಸಿಕೊಳ್ಳಲು ಪ್ರಯತ್ನಿಸಬೇಕು ಎಂದು ತಿಳಿಸಿದರು.

ಈ ವೇಳೆ ಪ್ರವಚನಕಾರ ರಘೋತ್ತಮಾಚಾರ್ಯ ನಾಗಸಂಪಿಗೆ ಅವರನ್ನು ಅಭಿನಂದಿಸಲಾಯಿತು. ಉತ್ತರಾದಿ ಮಠದ ಆಡಳಿತಾಧಿಕಾರಿ ಪಂ. ಅನಿರುದ್ಧ ಆಚಾರ್ಯ ಪಾಂಡುರಂಗಿ, ಪಂ. ಗೋವಿಂದಾಚಾರ್ಯ ಪಾಂಡುರಂಗಿ, ಶ್ರೀ ಇಳೈಆಳ್ವಾರ್ ಸ್ವಾಮೀಜಿ, ಹಿರಿಯ ವಿಪ್ರ ಮುಖಂಡ ಕೆ ರಘುರಾಂ ವಾಜಪಾಯಿ, ಶ್ರೀ ಗುರು ರಾಘವೇಂದ್ರ ಸೇವಾ ಟ್ರಸ್ಟ್ ಅಧ್ಯಕ್ಷ ಎಸ್ ಬಿ ವಾಸುದೇವ್ ಮೂರ್ತಿ, ಎಚ್.ಜಿ ಗಿರಿಧರ್, ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆಯ ಪ್ರಧಾನ ಕಾರ್ಯದರ್ಶಿ ವಿಕ್ರಮ ಅಯ್ಯಂಗಾರ್, ಕೆ.ಎಂ. ನಿಶಾಂತ್, ಕಡಕೋಳ ಜಗದೀಶ್, ರಂಗನಾಥ್, ಟಿ.ಎಸ್. ಅರುಣ್, ರವಿಕುಮಾರ್, ಜ್ಯೋತಿ ಹಾಗೂ ಇನ್ನಿತರರು ಹಾಜರಿದ್ದರು.

ನಕ್ಕರೆ ಅದೇ ಸ್ವರ್ಗ

ಡಾಕ್ಟರ್ : ಏನಯ್ಯ ನೀನು ಕೊಟ್ಟ ಚೆಕ್ ಬೌನ್ಸಾಗಿ ಬಂದಿದೆ.

ರೋಗಿ : ಅದರಲ್ಲೇನಿದೆ ವಿಶೇಷ. ನೀವು ಗುಣಪಡಿಸಿದ ಜ್ವರವೂ ಮರಳಿ ಬಂದಿದೆಯಲ್ಲಾ.

ಮೈಸೂರು ಮಿತ್ರ

ಮಂಗಳವಾರ, 6 ಡಿಸೆಂಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ನೀವು ಕಣಿವೆಯೊಂದರ ಆಳಕ್ಕೆ ಇಳಿದಾಗ ಮಾತ್ರ ಎತ್ತರದ ಶಿಖರ ಅದೆಷ್ಟು ಅಮೋಘ ಎಂಬುದು ನಿಮಗೆ ತಿಳಿಯಲು ಸಾಧ್ಯ. –ರಿಚರ್ಡ್ ಎಂ.ನಿಕ್ಸನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮನದಲ್ಲಿ ನೆನೆಯುವವನಿಗೆ, ಮನೆಯೇನು ಮಠವೇನು?

ನಿಮ್ಮ ಪತ್ರಗಳು

ಶಾಶ್ವತ ಗೌರವ "ಸಿಪಿಕೆ ಬಡಾವಣೆ ಹಾಗೂ ಸಿಪಿಕೆ ರಸ್ತೆ"

ಮಾನ್ಯರೆ,



ಮೈಸೂರು ಜಿಲ್ಲೆಯ ಸಾಲಿಗ್ರಾಮ ತಾಲೂಕಿನ ಚಿಕ್ಕನಾಯಕನಹಳ್ಳಿಯಲ್ಲಿ ಜನಿಸಿದ ಚಿಕ್ಕನಾಯಕನಹಳ್ಳಿ ಪುಟ್ಟೇಗೌಡ ಕೃಷ್ಣಕುಮಾರ್‌ರವರು ಮೈಸೂರಿನ ಹಿರಿಯ ಸಾಹಿತಿಗಳು. ಇವರನ್ನು "ಸಿಪಿಕೆ" ಎಂಬ ಕಾವ್ಯನಾಮದಿಂದಲೇ ಸಾಹಿತ್ಯ ಲೋಕದಲ್ಲಿ ಗುರುತಿಸುವುದು. 2012 ರಲ್ಲಿ ಗಂಗಾವತಿಯಲ್ಲಿ ನಡೆದ ವಿಶ್ವಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದು, ಸಾಹಿತ್ಯದಲ್ಲಿ ಮಾಡಿದ ಕೃಷಿಗೆ ಸಂದ ಗೌರವ. ಇದನ್ನು ಹೊರತುಪಡಿಸಿ ಹೇಳಿಕೊಳ್ಳುವಂತಹ ದೊಡ್ಡಮಟ್ಟದ ಗೌರವ ಪುರಸ್ಕಾರಗಳು ಇಲ್ಲಿಯವರೆಗೆ ಇವರಿಗೆ ಸಿಗದಿರುವುದು ದುರದೃಷ್ಟಕರ.

ಬಹುಶಃ ಇದಕ್ಕೆ ಕಾರಣ ಇವರು ಜಾತ್ಯತೀತ, ಪಕ್ಷಾತೀತವಾಗಿ ಇದ್ದು ಇತರರಂತೆ ಸಮಾಜಕ್ಕೆ ದ್ವಂದ್ವ ಹೇಳಿಕೆಗಳನ್ನು ಕೊಡದೇ ಇರುವುದು. ಇವರಿಂದ ಲೋಕಾರ್ಪಣೆಗೊಂಡ ಕೃತಿಗಳಿಗೆ ಲೆಕ್ಕವಿಲ್ಲ. ಸಜ್ಜನಿಕೆಯ ಸಂದೇಶಗಳನ್ನು ನೀಡಿದ ಸಭೆಗಳು ಸಾವಿರಾರು, ಇಳಿವಯಸ್ಸಿನಲ್ಲೂ ದಣಿವರಿಯದೆ ಇಂದಿಗೂ ಸಭೆ ಸಮಾರಂಭಗಳಲ್ಲಿ ಭಾಗವಹಿಸುವುದು ಹಾಗೂ ಸ್ವಚ್ಛ ಕನ್ನಡದಲ್ಲಿ ಅತ್ಯದ್ಭುತ ಕನ್ನಡ ಪದಗಳಿಂದ ಕೂಡಿದ ಭಾಷಣ ಕೇಳುಗರ ಮನಸೂರೆಗೊಳ್ಳುವುದು (ಭಿನ್ನಾಭಿಪ್ರಾಯಕ್ಕೆ ಆಸ್ಪದವಾಗದ ರೀತಿ ಮನೆಯಲ್ಲಿ ವಿಷಯ ಕುರಿತಾಗಿ ಭಾಷಣ ಸಿದ್ಧಪಡಿಸಿಕೊಂಡು ಬರುವುದು ಇವರ ವಿಶೇಷ). ಇಲ್ಲಿಯವರೆಗೆ ಇವರ ನಡೆ–ನುಡಿ–ಬರವಣಿಗೆಯ ಬಗ್ಗೆ ಯಾರೂ ಚಕಾರವೆತ್ತದಿರುವ ಹಾಗೆ ಸಾಹಿತಿಯಾಗಿ ಬದುಕು ಸಾಗಿಸಿಕೊಂಡು ಬಂದಿರುವುದು ಒಂದು ಮಹತ್ ಸಾಧನೆಯಾಗಿದೆ. ಇವೆಲ್ಲವನ್ನೂ ಮೀರಿ ಆಗತಾನೆ ಅಂಬೆಗಾಲಿಡುವ ಯುವ ಸಾಹಿತಿಗಳನ್ನು ಬೆನ್ನು ತಟ್ಟಿ ಪ್ರೋತ್ಸಾಹಿಸುವುದು ದೊಡ್ಡತನಕ್ಕೆ ಸಾಕ್ಷಿ. ಒಮ್ಮೆ ಎಲ್ಲಿಯೂ ಕಾಣಿಸಿಕೊಳ್ಳದ ನನ್ನನ್ನು ಇವರು ಕರೆದಿದ್ದು: ನೀವು ಮಿರ್ಲೆ ಚಂದ್ರಶೇಖರ ಅಲ್ಲ ಎಲೆಮರೆ ಚಂದ್ರಶೇಖರ ಎಂದಿದ್ದು ಬಿರುದು ಕೊಟ್ಟಷ್ಟೇ ಖುಷಿ ಆಯ್ತು.

ಮೇಲಿನ ಪೀಠಿಕೆಗೆ ಕಾರಣ ಸಿಪಿಕೆಯವರು. ಇದೇ ಅಂಕಣದಲ್ಲಿ(ಡಿ. 04) ಪಂಪ ಪ್ರಶಸ್ತಿಯ ನೀಡಿಕೆಯ ಕುರಿತಾಗಿ ಬರೆದಿದ್ದನ್ನು ನೋಡಿದೆ. ಪ್ರಶಸ್ತಿಗಳು ಸಾಧಕರಿಗೆ ಬರುತ್ತವೆ. ಬಂದು ಅಲ್ಲಿಗೇ ಮರೆತು ಹೋಗುತ್ತವೆ. ಇದೇ ಅಂಕಣದಲ್ಲಿ ಹಿಂದೆಯೂ ನಾನು ಬರೆದಿದ್ದೆ. ಮೈಸೂರು ನಗರದವರೇ ಆಗಿರುವ, ಕುವೆಂಪು, ದೇಜಗೌರಂತಹ ಹಿಂದಿನ ಹಾಗೂ ಬೆಳೆಯುತ್ತಿರುವ ಇಂದಿನ ಸಾಹಿತಿಗಳ ಕೊಂಡಿಯಾಗಿರುವ ಏಕೈಕ ಹಿರಿಯ ಸಾಹಿತಿ ನಮ್ಮ ಸಿಪಿಕೆ. ಇವರ ಹೆಸರಿನಲ್ಲಿ ಬಡಾವಣೆ ನಿರ್ಮಿಸಿ ಹಾಗೂ ನಗರದ ಒಂದು ಮುಖ್ಯ ರಸ್ತೆಯನ್ನು "ಸಿಪಿಕೆ ರಸ್ತೆ" ಎಂದು ನಾಮಕರಣ ಮಾಡುವುದು. ಇದರಿಂದ ಅವರ ಸಾಧನೆಗೆ ಗೌರವ ಕೊಟ್ಟಂತೆ ಆಗುವುದಲ್ಲದೆ ಅವರಿಗೂ ಖುಷಿ ಎನಿಸುವುದು. ಶಾಶ್ವತವಾಗಿ ಮೈಸೂರಿನ ಹೊಸ ಪೀಳಿಗೆ ಅವರ ಹೆಸರನ್ನು ಗುನಗಬಹುದು. ಈ ಕಾರ್ಯ ಎಂದೋ ಆಗುವ ಬದಲು ಅವರಿದ್ದಾಗಲೇ ಅನುಷ್ಠಾನಗೊಂಡರೆ ಅವರಿಗೆ ನಾವು ನೀಡುವ ಬಹುದೊಡ್ಡ ಗೌರವ.

–ಮಿರ್ಲೆ ಚಂದ್ರಶೇಖರ, ಲೇಖಕರು, ಮೈಸೂರು.

'ಮಿತ್ರ'ನ ಪತ್ರದ ಫಲಶ್ರುತಿ



ಮಾನ್ಯರೆ,

ನಗರದ ಚಾಮರಾಜಪುರಂ ವಾರ್ಡ್ ಸಂಖ್ಯೆ 49ರ ದುರವಸ್ಥೆಯ ಬಗ್ಗೆ ನನ್ನ ಪತ್ರವೊಂದು ನಿಮ್ಮ ಪತ್ರಗಳು ವಿಭಾಗದಲ್ಲಿ 30.11.2022ರಂದು ಪ್ರಕಟವಾಗಿತ್ತು. ಅದಕ್ಕೆ ಸ್ಪಂದಿಸಿದ ಪಾಲಿಕೆ ಬಿದ್ದುಹೋದ ಮಾರ್ಗಸೂಚಿ ಫಲಕವನ್ನು ಸರಿಯಾಗಿ ನಿಲ್ಲಿಸಿ ಹೋಗಿದೆ. ಇನ್ನು ರಸ್ತೆಯ ಅವ್ಯವಸ್ಥೆ ಯಾವಾಗ ಸರಿಹೋಗುವುದೋ ಎಂದು ಇಲ್ಲಿನ ನಿವಾಸಿಗಳು ಕಾಯುತ್ತಿದ್ದಾರೆ. ಪಾಲಿಕೆಯ ಸದಸ್ಯೆ ಸೌಮ್ಯ ಉಮೇಶ ಕಣ್ಣು ತೆರೆಯಬೇಕಷ್ಟೇ.

–ಕೊ.ಸು.ನರಸಿಂಹಮೂರ್ತಿ, ಹಿರಿಯ ನಾಗರಿಕ, ಚಾಮರಾಜಪುರಂ, ಮೈಸೂರು.

ಬಡವರಿಗೆ ಯೋಜನೆಗಳು ತಲುಪುವುದು ಯಾವಾಗ?

ಮಾನ್ಯರೆ,

ಇತ್ತೀಚೆಗೆ ಚಿಕ್ಕಮಗಳೂರಿನಲ್ಲಿ ಜನರು ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ಹೊರ ಹಾಕಿದ್ದಾರೆ. ಕಾರಣ ಗಿರಿಜನರಿಗಾಗಿ ಜೂನ್‌ನಿಂದ ನವೆಂಬರ್‌ವರೆಗೆ ಉಚಿತವಾಗಿ ಪೌಷ್ಟಿಕ ಆಹಾರ ಪದಾರ್ಥಗಳನ್ನು ನೀಡುತ್ತಿದ್ದು, ಎಲ್ಲಾ ಜಿಲ್ಲೆಯ ಜನರಿಗೂ ದೊರೆತಿದೆ. ಆದರೆ ಈ ಯೋಜನೆ ವ್ಯಾಪ್ತಿಗೆ ಬರುವ ಚಿಕ್ಕಮಗಳೂರು ಜಿಲ್ಲೆಯ 6 ಸಾವಿರ ಜನರಿಗೆ ಮಾತ್ರ ಇನ್ನೂ ಆಹಾರ ಪದಾರ್ಥಗಳು ದೊರೆತಿಲ್ಲ. ಸರ್ಕಾರ ಕೋಟ್ಯಂತರ ಹಣ ಬಿಡುಗಡೆ ಮಾಡಿದ್ದರೂ ಜಿಲ್ಲೆಯ ಅಧಿಕಾರಿಗಳು ಮಾತ್ರ ಮಳೆಗಾಲ ಮುಗಿದರೂ ಇನ್ನು ಯೋಜನೆ ಜನರಿಗೆ ತಲುಪಿಸಿಲ್ಲ ಎಂಬುದು ಬೇಸರದ ಸಂಗತಿ. ಇದನ್ನು ಗಮನಿಸಿದಾಗ ದೇವರು ವರ ಕೊಟ್ಟರೂ ಪೂಜಾರಿ ಕೊಡಲಿಲ್ಲ ಎಂಬಂತಾಗಿದೆ. ಇದೇ ರೀತಿ ಸರ್ಕಾರದ ಹಲವು ಯೋಜನೆಗಳಿಗೆ ಕೋಟ್ಯಂತರ ರೂಪಾಯಿ ಹಣ ಬಿಡುಗಡೆಯಾದರೂ, ಕೊನೆಗೆ ಅದೆಷ್ಟರ ಮಟ್ಟಿಗೆ ಜನಸಾಮಾನ್ಯರಿಗೆ ತಲುಪುತ್ತದೆ ಎಂಬುದು ಕಾಡುವ ಪ್ರಶ್ನೆ?

ಯೋಜನೆಗಳು ಯಶಸ್ವಿಯಾಗುವುದು, ಆ ಯೋಜನೆ ಪ್ರತಿಯೊಬ್ಬ ಜನಸಾಮಾನ್ಯರಿಗೆ ಅದು ತಲುಪಿದಾಗ ಮಾತ್ರ. ಯೋಜನೆಗಳು ಜನಸಾಮಾನ್ಯರಿಗೆ ತಲುಪದಿದ್ದರೆ, ಅಧಿಕಾರಿಗಳು, ಅಧಿಕಾರವುಳ್ಳವರು ಮಾತ್ರ ಇನ್ನು ಶ್ರೀಮಂತರಾಗಿಯೇ ಹೋಗುತ್ತಾರೆ. ಬಡವರು ಬಡವರಾಗಿಯೇ ಉಳಿದುಬಿಡುತ್ತಾರೆ.

–ಆನಂದ ಜೇವೂರ್, ಕಲಬುರಗಿ

ಕನ್ನಡ ಧ್ವಜ ಹಿಡಿದಿದ್ದಕ್ಕೆ ಹಲ್ಲೆ ಖಂಡನೀಯ

ಮಾನ್ಯರೆ,

ಬೆಳಗಾವಿ ನಗರದ ಕಾಲೇಜ್‌ವೊಂದರಲ್ಲಿ ಆಚರಿಸಿದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಕನ್ನಡ ಬಾವುಟ ಹಿಡಿದು ನೃತ್ಯ ಮಾಡುತ್ತಿದ್ದಾಗ ಹಲ್ಲೆ ಮಾಡಿದವರ ವಿರುದ್ಧ ಕಠಿಣ ಕ್ರಮವನ್ನು ಅಲ್ಲಿನ ಜಿಲ್ಲಾಡಳಿತ ಕೈಗೊಳ್ಳಲಿ. ಈ ಕುರಿತು ಪ್ರಕರಣವನ್ನು ದಾಖಲಿಸಿಕೊಂಡು ಕ್ರಮ ತೆಗೆದುಕೊಳ್ಳಬೇಕಾದ ಪೊಲೀಸರು ವಿದ್ಯಾರ್ಥಿಯನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ, ಕಪಾಳಮೋಕ್ಷ ಮಾಡಿ, ಬೂಟು ಕಾಲಿನಿಂದ ಒದ್ದು, ಹಲ್ಲೆ ನಡೆಸಿರುವ ಆರೋಪ ಪತ್ರಿಕೆಗಳ ಮೂಲಕ ತಿಳಿದು ಬಂದಿದೆ. ಈ ಘಟನೆಗಳು ಅಕ್ಷಮ್ಯ ಅನಾಗರಿಕ ವರ್ತನೆ. ಕನ್ನಡ ನೆಲದಲ್ಲಿ ಕನ್ನಡ ಧ್ವಜ ಹಿಡಿದು ನೃತ್ಯ ಮಾಡಿದರೆ ಅಪರಾಧವೇ? ಕರ್ನಾಟಕದಲ್ಲಿ ಕನ್ನಡಿಗರಿಗೆ ರಕ್ಷಣೆ ಇಲ್ಲವೆಂದರೆ ನಮ್ಮನ್ನು ನಾವೇ ವಿಮರ್ಶೆ ಮಾಡಿಕೊಳ್ಳಬೇಕು. ಜಿಲ್ಲಾಡಳಿತ ಈ ದುಂಡಾವರ್ತನೆ ಮಾಡಿದ ಸಹಪಾಠಿಗಳ ಮೇಲೆ ಕಠಿಣ ಕ್ರಮವನ್ನು ತೆಗೆದುಕೊಂಡು ಮುಂದೆ ಮರುಕಳಿಸದಂತೆ ಜಾಗೃತಿ ವಹಿಸಲಿ.

–ಕಂಗಾಣಿ ಸೋಮು ಪಿ.ಸಿ., ಕ್ಯಾತಮಾರನಹಳ್ಳಿ, ಮೈಸೂರು



ಬನ್ನೂರು ಕೆ. ರಾಜು
ಸಾಹಿತಿ, ಪತ್ರಕರ್ತ
ಮೊ : 94815 33167

ಬಹುಮುಖಿ

ಬೆಂಕಿಯಲ್ಲಿ ಅರಳಿದ ಜ್ಞಾನಪುಷ್ಪ ಅಂಬೇಡ್ಕರ್

> ಡಿಸೆಂಬರ್ 6, ಭಾರತರತ್ನ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಪರಿನಿರ್ವಾಣ ದಿನ. ತನ್ನಿಮಿತ್ತ ಈ ಲೇಖನ.

ಒಂದು ದಿನ ಏಳೆಂಟು ವರ್ಷದ ಪುಟ್ಟ ಹುಡುಗನೊಬ್ಬ ತನ್ನ ತಂದೆಯನ್ನು ನೋಡಲು ಎತ್ತಿನ ಗಾಡಿಯಲ್ಲಿ ಕುಳಿತು ಸಾಗುತ್ತಿದ್ದ. ಗಾಡಿ ಸ್ವಲ್ಪ ದೂರ ಹೋಗಿರಬೇಕಷ್ಟೆ, ಆ ಹುಡುಗ ದಲಿತ ಜನಾಂಗಕ್ಕೆ ಸೇರಿದವನೆಂದು ಗಾಡಿಯವನಿಗೆ ತಿಳಿಯಿತು. ಕೂಡಲೇ ಅವನಿಗೆ ಕೋಪ ಬಂದು ಗಾಡಿಯನ್ನು ನಿಲ್ಲಿಸಿ, ನೊಗವನ್ನು ಎತ್ತಿ ಅನಾಮತ್ತಾಗಿ ಪುಟ್ಟ ಹುಡುಗನನ್ನು ಕೆಳಕ್ಕೆ ಬೀಳಿಸಿ ಕೀಳ್ಜಾತಿಯವನೆಂದು ಆ ಹುಡುಗನನ್ನು ನಿಂದಿಸಿದ. ಏನೂ ಅರಿಯದ ಎಳೆಯ ಹೃದಯಕ್ಕೆ ಕಾದಸೀಸ ಸುರಿದಂತಹ ನೋವು.

ಇನ್ನೊಂದು ದಿನ ಅದೇ ಹುಡುಗ ಬಾಯಾರಿಕೆಯಿಂದ ಕೆರೆಯೊಂದರಲ್ಲಿ ನೀರು ಕುಡಿದ. ಇದನ್ನು ಯಾರೋ ನೋಡಿದರು. ಗುಸುಗುಸು ಎನ್ನುತ್ತಾ ಗುಂಪುಗೂಡಿ ಎಲ್ಲರೂ ಸೇರಿ ಕೀಳ್ಜಾತಿಯವನು ಕೆರೆ ನೀರು ಮುಟ್ಟಿದನೆಂದು ಆ ಹುಡುಗನಿಗೆ ಚೆನ್ನಾಗಿ ಥಳಿಸಿ ದೂರಕ್ಕೆ ದಬ್ಬಿದರು. ಅಂದೂ ಏನೂ ತಿಳಿಯದ ಎಳೆ ಮನಸ್ಸಿಗೆ ಕಾದ ಕಬ್ಬಿಣದ ಸಲಾಕೆಯಿಂದ ಬರೆಹಾಕಿದಂತಹ ಹಿಂಸೆ.

ಮತ್ತೊಂದು ದಿನ ಅದೇ ಹುಡುಗ ಓದಲಿಕ್ಕೆ ಸ್ಕೂಲಿಗೆ ಹೋಗುತ್ತಿದ್ದ. ದಾರಿ ಮಧ್ಯೆ ಜೋರಾಗಿ ಮಳೆ ಬಂತು. ಹುಡುಗ ಅಲ್ಲೇ ರಸ್ತೆ ಬದಿಯಲ್ಲಿದ್ದ ಮನೆಯೊಂದರ ಜಗುಲಿಯ ಮೇಲೆ ನಿಂತ ಮನೆಯ ಯಜಮಾನಿ ಹುಡುಗನನ್ನು ನೋಡಿ ಕೆಂಡವಾದಳು. ಕೀಳ್ಜಾತಿಯವನೆಂದು ನಿಂದಿಸುತ್ತಾ ಕೂಡಲೇ ಆ ಹುಡುಗನನ್ನು ಜಗುಲಿಯಿಂದ ಕೆಳಕ್ಕೆ ದಬ್ಬಿದಳು. ಏನೊಂದೂ ಗೊತ್ತಿರದ ಎಳೆ ಕರುಳಿನ ಮೇಲೆ ಕತ್ತಿ ಆಡಿಸಿದಂತಹ ಯಮಯಾತನೆ.

ಅದೊಂದು ದಿನ ಅದೇ ಹುಡುಗ ಹೇರ್ ಕಟಿಂಗ್ ಮಾಡಿಸಿಕೊಳ್ಳಲು ಹೋಗುತ್ತಾನೆ. ಕೂದಲನ್ನು ಕತ್ತರಿಸುವ ಕ್ಷೌರಿಕ ಕೂಡ ದಲಿತನೆಂಬ ಕಾರಣಕ್ಕೆ ಆ ಹುಡುಗನ ಕೂದಲನ್ನು ಮುಟ್ಟಲೊಲ್ಲ. ಪ್ರಾಪಂಚಿಕ ಜ್ಞಾನವೇ ಇರದ ಎಳೆಯನ ನೆತ್ತಿಯ ಮೇಲೆ ಒನಕೆಯಿಂದ ಕುಟ್ಟಿದಂತಹ ಸಂಕಟ.

ಹೀಗೆ ಹುಟ್ಟಿದ ಜಾತಿಯ ಕಾರಣಕ್ಕೆ ಇಂಥಹುದೆಷ್ಟೋ ಅವಮಾನಗಳನ್ನು ಅನುಭವಿಸುತ್ತ ಇಂಥ ನೂರಾರು ನೋವುಗಳನ್ನು ಬಾಲ್ಯದಿಂದಲೂ ನುಂಗುತ್ತಾ ಅಸ್ಪೃಶ್ಯತೆಯ ಬೆಂಕಿಯಲ್ಲಿ ಬೇಯುತ್ತಲೇ ಬೆಳೆದ ಆ ಹುಡುಗ ತನಗೆ ಸರಿಯಾಗಿ ತಿಳಿವು ಬರುವ ಹೊತ್ತಿಗೆ ಅಸ್ಪೃಶ್ಯತೆಯ ಕಹಿಯನ್ನು ಉಂಡುಉಂಡು ಸಾಕಾಗಿ ಕೊನೆಗೊಮ್ಮೆ ಅಸ್ಪೃಶ್ಯತೆಯ ಹುಟ್ಟಡಗಿಸುವ ಭೀಮ ಸಂಕಲ್ಪ ಮಾಡಿದ. ತನ್ನಂತೆಯೇ ಅಸ್ಪೃಶ್ಯತೆಯ ಕರಿನೆರಳಲ್ಲಿ ನಲುಗುತ್ತಿರುವ ದೀನದಲಿತರ ಉದ್ಧಾರಕ್ಕಾಗಿ ತನ್ನ ಇಡೀ ಬದುಕನ್ನು ಮೀಸಲಿಡುವ ಭೀಮ ಪ್ರತಿಜ್ಞೆಗೈದ. ಹೀಗೆ ಅಸ್ಪೃಶ್ಯತೆಯ ವಿರುದ್ಧ ಸಮರ ಸಾರಿ ಭೀಮ ಪ್ರತಿಜ್ಞೆಗೈದ ಆ ಹುಡುಗ ಬೇರ್‍ಯಾರು ಅಲ್ಲ. ಇಂದು ಭಾರತೀಯರ ಕಣ್ಣಲ್ಲಿ ಮಹಾಮಾನವತಾವಾದಿಯಾಗಿ ಕಂಗೊಳಿಸುತ್ತಿರುವ ಸಂವಿಧಾನ ಶಿಲ್ಪಿ ಭಾರತರತ್ನ ಡಾ. ಬಿ.ಆರ್. ಅಂಬೇಡ್ಕರ್. ಅವಮಾನದಿಂದ ಬೆಂದ ಅಂಬೇಡ್ಕರ್ ಎಷ್ಟು ಪ್ರಖರತೆಯಿಂದ ಮೇಲೆದ್ದರೆಂದರೆ ತನಗೆ ನೋವಿತ್ತ ವ್ಯವಸ್ಥೆಯ ಬುಡವನ್ನೇ ಸರಿಪಡಿಸುವಷ್ಟು!

ಭೀಮರಾವ್ ರಾಂಜೀ ಅಂಬೇಡ್ಕರ್ ಸ್ವತಂತ್ರ ಭಾರತದ ರೂಪೀಕರಣದಲ್ಲಿ ಎದ್ದುಕಂಡ ಹೆಸರು. ಈ ದೇಶದ ಸಾಂಪ್ರದಾಯಿಕ ಮಾದರಿಗಳನ್ನು ಒಡೆದು ಮಾನವೀಯತೆಗಾಗಿ ಭುಗಿಲೆದ್ದ ಮನಸ್ಸು ಅವರು ಒಂದು ಮಾತು ಹೇಳಿದ್ದರು. 'ನಾನೊಂದು ಕಲ್ಲು ಬಂಡೆಯಂತೆ, ಕರಗುವುದಿಲ್ಲ, ಆದರೆ ನದಿಯ ದಿಕ್ಕನ್ನೇ ಬದಲಿಸುವವನು'



(I am like a rock which does not melt but turns the course of the river).

ಮೊತ್ತಮೊದಲ ಕಾಂಗ್ರೆಸ್ ಸರ್ಕಾರದಲ್ಲಿ ಮಂತ್ರಿಯಾಗಿದ್ದೂ ಆ ಪಕ್ಷದ ಸದಸ್ಯರಾಗದೇ ಹಾಗೆ ಉಳಿದುಕೊಂಡದ್ದಕ್ಕೆ ಉತ್ತರರೂಪವಾಗಿ ಆ ಮಾತು ಹೇಳಿದ್ದರು. ಅವರು ಪ್ರವಾಹದಲ್ಲಿ ಒಂದಾದವರಲ್ಲ. ಹರಿಯುವ ದಿಕ್ಕನ್ನೇ ಬದಲಿಸಿದವರು. ಅವರಾಡಿದ ಮಾತು ತನ್ನ ಜನರನ್ನು ದೇಶದ ಇತಿಹಾಸದ ಮುಂಚೂಣಿಗೆ ತಂದ ರೀತಿಯನ್ನು ಬಿಂಬಿಸಿದಂತಿತ್ತು.

ಅಂತಹುದೊಂದು ಮಹಾಪ್ರವಾಹ ಭಾರತದ ಇತಿಹಾಸದಲ್ಲಿ 1891ರಿಂದ 1956ರ ನಡುವೆ ನಡೆದು ಹೋಗಿದೆ. ಹುಟ್ಟಿನಿಂದ ಹಿಡಿದು ಮರಣದವರೆಗೆ ಅಂಬೇಡ್ಕರ್ ಬದುಕಿದ ಬಗೆ ರೋಚಕ, ವಿಸ್ಮಯಕಾರಿ. ಅವರು ಬದುಕಿದ 65 ವರ್ಷಗಳ ಕಾಲ ಈ ನಾಡಿನಲ್ಲಿ ಎಷ್ಟೋ ಪ್ರವಾಹಗಳಿದ್ದವು. ಆದರೂ ಅಂಬೇಡ್ಕರ್ ಹಿಂದೂವಾದ, ಕಮ್ಯುನಿಸ್ಟ್‌ವಾದ, ಸಮಾಜವಾದ, ಗಾಂಧಿವಾದ ಇತ್ಯಾದಿ ನದಿಗಳಲ್ಲಿ ಕರಗಲಿಲ್ಲ. ತಾನೇ ಸ್ವತಃ ಒಂದು ನದಿಯಾದರು.

ಭರತ ಭೂಮಿಯ ಉದ್ದಗಲಕ್ಕೂ ಕಣ್ಣು ಕಾಣದಂತೆ ಆವರಿಸಿದ್ದ ಅಸಮಾನತೆಯ ಕಾರ್ಗತ್ತಲಲ್ಲಿ ಕ್ರಾಂತಿ ದೀಪದಂತೆ 1891ರ ಏಪ್ರಿಲ್ 14ರಂದು ಮಹರ್ ಎಂಬ ದಲಿತ ಜನಾಂಗದಲ್ಲಿ ಅಂಬೇಡ್ಕರ್ ಜನಿಸಿದರು. ಇವರಿಗೆ ಜನ್ಮನೀಡಿದ ಪುಣ್ಯಭೂಮಿ ಮಹಾರಾಷ್ಟ್ರದ ರತ್ನಗಿರಿ ಜಿಲ್ಲೆಯ ಅಂಬವಾಡೆ ಗ್ರಾಮ. ಇವರನ್ನು ಹೆತ್ತ ಭಾಗ್ಯಶಾಲಿಗಳು ತಂದೆ ಸುಭೇದಾರ್ ರಾಮ್‌ಜೀ ಸಕ್ಪಾಲ್, ತಾಯಿ ಶ್ರೀಮತಿ ಭೀಮಾಬಾಯಿ. ಇವರು ಕಬೀರ್ ಪಂಥಕ್ಕೆ ಸೇರಿದವರು. ಜಾತಿ ಧರ್ಮಗಳ ಭೇದಗಳಲ್ಲಿ ಇವರಿಗೆ ನಂಬಿಕೆ ಇರಲಿಲ್ಲ. ಹರಿಭಜನೆ ಮಾಡುವವರೆಲ್ಲ ದೇವರಿಗೆ ಸೇರಿದವರೆಂಬ ಭಾವನೆ ಇವರದು.

ಅಂಬೇಡ್ಕರರು ಸತಾರಾ ಪ್ರಾಥಮಿಕ ಶಾಲೆಯಲ್ಲಿದ್ದಾಗಲೇ ಅಸ್ಪೃಶ್ಯತೆಯ ಬಿಸಿ ಕ್ಷಣ ಕ್ಷಣವೂ ಇವರನ್ನು ಸುಡುತ್ತಲೇ ಇತ್ತು. ಇದೆಲ್ಲ ಏಕೆಂದು ಬಾಲಕ ಅಂಬೇಡ್ಕರರಿಗೆ ಅರ್ಥವಾಗುತ್ತಿರಲಿಲ್ಲವಾದರೂ ಕ್ರಮೇಣ ಇವರ ಬುದ್ಧಿ ಬೆಳೆದಂತೆ ತನಗಾಗುತ್ತಿರುವ ಅಪಮಾನ, ಮೇಲ್ಜಾತಿ ಎನಿಸಿಕೊಂಡಿರುವ ಅವಿವೇಕಿಗಳಿಂದ ನಡೆಯುತ್ತಿರುವ ಶೋಷಣೆ, ದಬ್ಬಾಳಿಕೆ ಇವರ ಮನಸ್ಸಿನ ಮೇಲೆ ಆಳವಾಗಿ ಪರಿಣಾಮ ಬೀರಿದ್ದವು. ಇದರ ಪರಿಣಾಮ ಹಿಂದೂ ಧರ್ಮಕ್ಕೆ ಅಂಟಿದ ಜಾತೀಯತೆಯ ವಿರುದ್ಧ ವಿದ್ಯಾರ್ಥಿ ದಿಸೆಯಲ್ಲೇ ಇವರು ಭೀಮಖಡ್ಗವನ್ನು ಮಸೆಯತೊಡಗಿದ್ದರು.

> **ಇಂದು ಮಹಾ ಪರಿನಿರ್ವಾಣ**
>
> ಮೈಸೂರು ಜಿಲ್ಲಾಡಳಿತ ವತಿಯಿಂದ ರಾಷ್ಟ್ರ ನಾಯಕರಾದ ಡಾ.ಬಿ.ಆರ್.ಅಂಬೇಡ್ಕರ್ ಅವರ 66ನೇ ಮಹಾಪರಿನಿರ್ವಾಣ ಕಾರ್ಯಕ್ರಮದ ಪ್ರಯುಕ್ತ ಡಿಸೆಂಬರ್ 6ರಂದು ಬೆಳಗ್ಗೆ 9.30 ಗಂಟೆಗೆ ಟೌನ್‌ಹಾಲ್ ಆವರಣದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆಗೆ ಪುಷ್ಪಾರ್ಚನೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ರಾಷ್ಟ್ರೀಯ ಹಬ್ಬಗಳ ಆಚರಣೆ ಸಮಿತಿ ಜಿಲ್ಲಾಧಿಕಾರಿ ಹಾಗೂ ಅಧ್ಯಕ್ಷರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಂಬೇಡ್ಕರರಿಗೆ ಸಂಸ್ಕೃತ ಕಲಿಯಬೇಕೆಂಬ ಮಹದಾಸೆಯಿತ್ತು ಆದರೆ ಇದಕ್ಕೆ ಕೀಳ್ಜಾತಿಯವರು ಇದನ್ನು ಓದಬಾರದೆಂದು ಮೇಲ್ಜಾತಿಯವರು ಅಡ್ಡಿಪಡಿಸಿದರು. ಆದರೆ ಇವರು ಬಗ್ಗಲಿಲ್ಲ ಬದಲಿಗೆ ಹಠತೊಟ್ಟವರಂತೆ ಸಂಸ್ಕೃತ ಕಲಿತು ಅದರಲ್ಲಿ ಸಂಪೂರ್ಣ ಪಾಂಡಿತ್ಯ ಗಳಿಸಿ ತಾವೇ ಹಲವಾರು ವಿಚಾರ ಕ್ರಾಂತಿ ಕೃತಿಗಳನ್ನು ರಚಿಸುವುದರ ಮೂಲಕ 'ಆಧುನಿಕ ಮನು' ಎಂಬ ಕೀರ್ತಿಗೆ ಪಾತ್ರರಾದರು. ಇದನ್ನು ಮಾತ್ರ ಯಾರಿಂದಲೂ ತಡೆಯಲು ಸಾಧ್ಯವಾಗಲೇ ಇಲ್ಲ. ಏಕೆಂದರೆ ಹಠವಾದಿ ಅಂಬೇಡ್ಕರರ ಭೀಮಶಕ್ತಿ ಅಂಥಾದ್ದು!.

1907ರಲ್ಲಿ ಮೆಟ್ರಿಕ್ಯೂಲೇಷನ್ ಪರೀಕ್ಷೆಯಲ್ಲಿ ತೇರ್ಗಡೆಯಾದ ಅಂಬೇಡ್ಕರರಿಗೆ ಆ ವರ್ಷವೇ ವಿವಾಹವಾಯಿತು. ಆನಂತರ ಅವರು ಮುಂಬೈನ ಎಲ್ಫಿನ್‌ಸ್ಟನ್ ಕಾಲೇಜಿನಲ್ಲಿ ಇಂಟರ್ ಮೀಡಿಯಟ್ ಮುಗಿಸಿ 1921ರಲ್ಲಿ ಬಿ.ಎ. ಪದವೀಧರರಾದರು. ನಂತರ ಬರೋಡಾ ಮಹಾರಾಜರ ಸೈನ್ಯದಲ್ಲಿ ಲೆಫ್ಟಿನೆಂಟ್ ಆಗಿ ನೇಮಕಗೊಂಡರು. ಆದರೆ ಜ್ಞಾನದ ಹಸಿವಿನಿಂದ ಇವರು ಓದುವ ಹಠಕ್ಕೆ ಬಿದ್ದರು. ಆಗ ಬರೋಡಾ ಮಹಾರಾಜರೇ ಇವರ ಬುದ್ಧಿಶಕ್ತಿಗೆ ಮಾರುಹೋಗಿ ವಿದೇಶದಲ್ಲಿ ವ್ಯಾಸಂಗ ಮಾಡಿ ಬಂದ ನಂತರ ತಮ್ಮಲ್ಲೇ ಹತ್ತು ವರ್ಷಗಳ ಕಾಲ ಕೆಲಸ ಮಾಡಬೇಕೆಂಬ ಕರಾರಿನೊಂದಿಗೆ ಉನ್ನತ ವ್ಯಾಸಂಗಕ್ಕೆ ಇವರನ್ನು ಅಮೇರಿಕಾಕ್ಕೆ ಕಳುಹಿಸಿದರು. ಅಲ್ಲಿ ಎಂ.ಎ. ಪದವಿಯೊಡನೆ ಪಿಹೆಚ್‌ಡಿಯನ್ನು ಗಳಿಸಿ 1917ರ ಆಗಸ್ಟ್ 21ರಂದು ಮತ್ತೆ ಭಾರತಕ್ಕೆ ಮರಳಿದರು. ಇಷ್ಟಾದರೂ ಅವರ ಜ್ಞಾನದಾಹ ಇಂಗಿರಲಿಲ್ಲ. ಹಾಗಾಗಿ ಪುನಃ 1920ರಲ್ಲಿ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಲಂಡನಿಗೆ ಹೋದ ಇವರು 1922ರಲ್ಲಿ "ಬ್ಯಾರಿಸ್ಟರ್" ಪದವಿಯೊಡನೆ ಭಾರತಕ್ಕೆ ವಾಪಾಸ್ಸಾದರು.

ವಿದೇಶದಲ್ಲಿ ಕಲಿತು ಒಂದಲ್ಲ ಹಲವಾರು ಡಾಕ್ಟರೇಟ್ ಪದವಿಗಳನ್ನು ಗಳಿಸಿ ಅಂಬೇಡ್ಕರ್ ಸ್ವದೇಶಕ್ಕೆ ಬಂದಿದ್ದರೂ ಇಲ್ಲಿ ಮಾತ್ರ ಅದೇ ಅಸ್ಪೃಶ್ಯತೆ ಅವರನ್ನು ಅಪಮಾನಿಸುತ್ತಿತ್ತು. ಆಗ ಅಂಬೇಡ್ಕರರು "ಮೂಕನಾಯಕ" ಎಂಬ ಪತ್ರಿಕೆಯನ್ನು ಆರಂಭಿಸಿ ಅದರ ಮುಖೇನ ಅಸ್ಪೃಶ್ಯತೆಯ ವಿರುದ್ಧ ಜನಜಾಗೃತಿಗೆ ನಿಂತರು. "ಬಹಿಷ್ಕೃತ ಹಿತಕಾರಿಣಿ" ಎಂಬ ಸಭಾದಂತಹ ಸಂಘಟನೆಗಳನ್ನು ಕಟ್ಟಿ ಅಸ್ಪೃಶ್ಯತೆಯ ವಿರುದ್ಧ ಸಮಾನತೆಗಾಗಿ ಬೀದಿಗಿಳಿದು ಹಲವು ತೆರನಾದ ಹೋರಾಟ ಮಾಡುತ್ತಾ ದಲಿತರ ಪಾಲಿಗೆ ಅಕ್ಷರಶಃ ತೋರು ಬೆರಳಾಗಿದ್ದರು. ಇವರ "ಚೌದರ್ ಕೆರೆ ಚಳವಳಿ"ಯಂತೂ ಭಾರತದ ಇತಿಹಾಸದಲ್ಲಿ ದಾಖಲಿಸುವಂತಾದ್ದು.

ಹೀಗೆ ದಲಿತರ ಪರ ಇವರ ಕ್ರಾಂತಿ ಕಹಳೆ ನಿಧಾನವಾಗಿ ದೇಶದೆಲ್ಲೆಡೆ ಮೊಳಗತೊಡಗಿತ್ತು ಅದೇ ಕಾಲಕ್ಕೆ 2ನೇ ಮಹಾಯುದ್ಧದ ಕಾಲದಲ್ಲಿ ಬ್ರಿಟಿಷರು ಕೆಲವು ಭಾರತೀಯರನ್ನು ಮಂತ್ರಿಮಂಡಲಕ್ಕೆ ಸೇರಿಸಿಕೊಂಡಾಗ ಅದರಲ್ಲಿ ಪ್ರಥಮ ಪ್ರಾಶಸ್ತ್ಯವೇ ಅಂಬೇಡ್ಕರವರಿಗೆ ದೊರಕಿತ್ತು. ಹಾಗೆಯೇ ಭಾರತ ಸ್ವಾತಂತ್ರ್ಯಗಳಿಸಿದ ನಂತರ ನೆಹರು ಸರ್ಕಾರದಲ್ಲಿ ಪ್ರಥಮ ಕಾನೂನು ಸಚಿವರಾಗಿದ್ದ ಹೆಗ್ಗಳಿಕೆ ಹೊಂದಿದ್ದ ಅಂಬೇಡ್ಕರರು ಭಾರತ ದೇಶಕ್ಕೆ ಸಶಕ್ತ 'ಸಂವಿಧಾನ' ನೀಡಿದ ಶಿಲ್ಪಿಯಾಗಿದ್ದು ಇದು ಇಡೀ ವಿಶ್ವಕ್ಕೆ ಮಾದರಿ ಸಂವಿಧಾನವಾಗಿದ್ದು ಇದು ಇವರಿಗೆ ಸಂದ ಮಹಾಗೌರವವೇ ಸರಿ.

ಅಧಿಕಾರ ಇರಲಿ ಇಲ್ಲದಿರಲಿ ಅಂಬೇಡ್ಕರ್‌ರವರು ಹೆಜ್ಜೆ ಇಟ್ಟಲೆಲ್ಲಾ ಅಸ್ಪೃಶ್ಯತಾ ನಿವಾರಣೆಗಾಗಿಯೇ ಅವರ ಹೆಜ್ಜೆಗಳು ತುಡಿಯುತ್ತಿದ್ದವು. ಅಂತೆಯೇ ದಲಿತರ ಪುರೋಭಿವೃದ್ಧಿಗಾಗಿಯೇ ಅವರ ಜೀವ ಸದಾ ಮಿಡಿಯುತ್ತಿತ್ತು.

ಭಾರತ ದೇಶದಲ್ಲಿ ಅಂಬೇಡ್ಕರ್ ಎಂಬ ಕ್ರಾಂತಿ ಪುರುಷ ಜನಿಸಿದ್ದರಿಂದಲೇ ದೇಶದ ಅರ್ಧ ಭಾಗದಂತಿರುವ ಉತ್ತರ ಪ್ರದೇಶ ಕಾನ್ಷಿರಾಂರಂಥ ದಲಿತ ನಾಯಕನ ಹಿಡಿತಕ್ಕೆ ಸಿಕ್ಕಿದ್ದು. ಮಾಯಾವತಿಯಂತಹ ದಲಿತ ಮಹಿಳೆ ಉತ್ತರ ಪ್ರದೇಶದ ಮುಖ್ಯಮಂತ್ರಿಯಾಗಲು ಸಾಧ್ಯವಾದದ್ದು.

ಅಂಬೇಡ್ಕರು ಇಡೀ ಜೀವನ ಅಸ್ಪೃಶ್ಯರೆನಿಸಿಕೊಂಡವರಿಗೆ ನ್ಯಾಯವನ್ನೂ, ಸಮಾನತೆಯನ್ನೂ ದೊರಕಿಸಿ ಕೊಡುವುದಕ್ಕೆ ಮುಡಿಪಾಗಿತ್ತು. ಇದರಲ್ಲಿ ಅವರು ಸಾಕಷ್ಟು ಯಶಸ್ಸನ್ನೂ ಸಾಧಿಸಿದ್ದರು. ಆದರೂ ಹಿಂದೂ ಧರ್ಮದ ಅಸಮಾನತೆಯಿಂದ ರೋಸಿ ಹೋಗಿದ್ದ ಅವರು ಬುದ್ಧನ ಕಾರುಣ್ಯದಲ್ಲಿ ಆಕರ್ಷಿತರಾಗಿ 1956ರ ಅಕ್ಟೋಬರ್ 14ರಂದು ನಾಗಪುರದಲ್ಲಿ ನಡೆದ ಬೃಹತ್ ಸಮಾರಂಭವೊಂದರಲ್ಲಿ ತಮ್ಮ ಅಪಾರ ಅಭಿಮಾನಿಗಳೊಡನೆ ಬೌದ್ಧ ಧರ್ಮಕ್ಕೆ ಸೇರಿದರು.

1956ರ ಡಿಸೆಂಬರ್ 6ರಂದು ಕಾಣದ ಊರಿನತ್ತ ಪಯಣಿಸಿದ ಅಂಬೇಡ್ಕರರಿಗೆ ಮರಣೋತ್ತರವಾಗಿ ಭಾರತ ಸರ್ಕಾರವು 1991ರಲ್ಲಿ "ಭಾರತ ರತ್ನ" ಪ್ರಶಸ್ತಿ ನೀಡಿ ಗೌರವಿಸಿದೆ. ನಿಜಕ್ಕೂ ಅಂಬೇಡ್ಕರ್ ಅವರು ಇಂದಿಗೂ ಸಹ ತಮ್ಮ ಸಾಧನೆಗಳ ಮೂಲಕ "ಭಾರತ ರತ್ನ"ವೇ ಆಗಿದ್ದಾರೆ.

Castes in India: Their Mechanism, Genesis and Development, Philosophy of Hindusim, Riddles in Hindusim, Who were the shudras?, The Buddha and his Dhamma ಮುಂತಾದವು ಅಂಬೇಡ್ಕರ್ ಮುಖ್ಯ ಕೃತಿಗಳು. ಜಬ್ಬಾರ್ ಪಟೇಲ್ ನಿರ್ದೇಶನದಲ್ಲಿ 'ಡಾ. ಭೀಮ ಸಾಹೇಬ್ ಅಂಬೇಡ್ಕರ್' ಆಂಗ್ಲಚಿತ್ರ ನಿರ್ಮಾಣಗೊಂಡಿದೆ. ಇತಿಹಾಸಕಾರ ಡೇವಿಡ್ ಬ್ಲಂಡೆಲ್ ಅಂಬೇಡ್ಕರ್ ಜೀವನಕಥೆ ಆಧರಿಸಿ 'ಅರೈಸಿಂಗ್ ಲೈಟ್' ಚಿತ್ರ ನಿರ್ಮಿಸಿದ್ದರು. ರಾಜೇಶ್‌ಕುಮಾರ್ ರಚಿಸಿ, ಅರವಿಂದಗೌರ್ ನಿರ್ದೇಶಿಸಿದ 'ಅಂಬೇಡ್ಕರ್ ಔರ್ ಗಾಂಧಿ' ನಾಟಕ ಹಲವು ಪ್ರದರ್ಶನಗಳನ್ನು ಕಂಡಿದೆ. ಪುಣೆಯ ವೇದ ವಿದ್ವಾಂಸ ಪ್ರಭಾಕರ ಜೋಶಿ ಅಂಬೇಡ್ಕರ್ ಆತ್ಮಕತೆಯನ್ನು 'ಭೀಮಯಾನ' ಹೆಸರಿನಲ್ಲಿ ಸಂಸ್ಕೃತದಲ್ಲಿ ರಚಿಸಿದ್ದರು. ಇದು 1577 ಶ್ಲೋಕಗಳನ್ನು ಒಳಗೊಂಡಿದೆ.

ಭೂಮಿ ಅತಿಕ್ರಮಣಕ್ಕೆ ರೋಹಿಣಿ ಸಿಂಧೂರಿ ಸಹಕಾರ ಆರೋಪ

ಡಿಜಿಪಿಗೆ ಗಾಯಕ ಲಕ್ಕಿ ಅಲಿ ಟ್ವೀಟ್ ಸಂದೇಶ

ಬೆಂಗಳೂರು, ಡಿ.5– ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ಸಹಕಾರದೊಂದಿಗೆ ಅವರ ಪತಿ ಸುಧೀರ್ ರೆಡ್ಡಿ ಮತ್ತು ಸೋದರ ಮಾವ ಮಧುಸೂದನ ರೆಡ್ಡಿ ಅವರು ತಮ್ಮ ಭೂಮಿಯನ್ನು ಅತಿಕ್ರಮಿಸಿಕೊಂಡಿದ್ದಾರೆ ಎಂದು ಲಕ್ಕಿ ಅಲಿ ಎಂದೇ ಖ್ಯಾತಿ ಪಡೆದಿರುವ ಗಾಯಕ ಮಕ್ಸೂದ್ ಅಲಿ ಅವರು ರಾಜ್ಯದ ಪೊಲೀಸ್ ಮಹಾನಿರ್ದೇಶಕರನ್ನು ಟ್ಯಾಗ್ ಮಾಡಿ ದುಬೈನಿಂದ ಟ್ವೀಟ್ ಮಾಡಿದ್ದಾರೆ.

ಬೆಂಗಳೂರಿನ ಕೆಂಚನಹಳ್ಳಿ ಗ್ರಾಮದ ಸರ್ವೆ ನಂ 11/2, 12, 13 ಮತ್ತು ವಾಸುದೇವಪುರ ಗ್ರಾಮದ ಸರ್ವೆ ನಂ. 24ರಿಂದ 30ರಲ್ಲಿರುವ 33.07 ಎಕರೆ ಫಾರಂ ತಮ್ಮ ಟ್ರಸ್ಟ್‌ಗೆ ಸೇರಿದ್ದು, ತಾವು ಕಳೆದ 50 ವರ್ಷಗಳಿಂದ ಸ್ವಾಧೀನಾನುಭವದಲ್ಲಿದ್ದೇವೆ. ಆದರೆ, ರೋಹಿಣಿ ಸಿಂಧೂರಿ ಪತಿ ಸುಧೀರ್ ರೆಡ್ಡಿ ಮತ್ತು ಸೋದರ ಮಾವ ಮಧುಸೂದನ ರೆಡ್ಡಿ ಅವರು ಅಕ್ರಮವಾಗಿ ತಮ್ಮ ಭೂಮಿಯನ್ನು ಅತಿಕ್ರಮಿಸಿಕೊಂಡಿದ್ದಾರೆ. ನಕಲಿ ಸೇಲ್‌ಡೀಡ್‌ಗಳನ್ನು ಮಾಡಿಕೊಂಡು ಇವರು ಭೂಮಾಫಿಯಾ ನಡೆಸುತ್ತಿದ್ದಾರೆ.

ರೋಹಿಣಿ ಸಿಂಧೂರಿ ಪತಿ ಸುಧೀರ್‌ರೆಡ್ಡಿ ಅವರು ತಮ್ಮ ವೈಯಕ್ತಿಕ ಲಾಭಕ್ಕಾಗಿ ಕರ್ನಾಟಕದ ಸಂಪನ್ಮೂಲಗಳನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ ಎಂದು ಟ್ವೀಟ್‌ನಲ್ಲಿ ತಿಳಿಸಿರುವ ಅವರು, ಪ್ರಸ್ತುತ ತಾವು ಕೆಲಸದ ನಿಮಿತ್ತ ದುಬೈನಲ್ಲಿದ್ದು, ತಮ್ಮನ್ನು (ಡಿಜಿಪಿ) ಭೇಟಿ ಮಾಡಲು ದುಬೈಗೆ ಬರುವ ಮುನ್ನ ಪ್ರಯತ್ನಿಸಿದ್ದೆ. ಆದರೆ ತಾವು ನನಗೆ ಲಭ್ಯವಾಗಲಿಲ್ಲ. ಹೀಗಾಗಿ ಸಂಬಂಧಪಟ್ಟ ಎಸಿಪಿ ಅವರಿಗೆ ದೂರು ಸಲ್ಲಿಸಿದ್ದೆ. ಆದರೆ ನನಗೆ ಸ್ಥಳೀಯ ಪೊಲೀಸರಿಂದ ಯಾವುದೇ ರೀತಿಯ ರಕ್ಷಣೆ ದೊರೆಯುತ್ತಿಲ್ಲ. ನ್ಯಾಯಾಲಯದಲ್ಲಿ ಈ ಭೂಮಿಗೆ ಸಂಬಂಧಪಟ್ಟ ವ್ಯಾಜ್ಯದ ವಿಚಾರಣೆಯೂ ಡಿ.7ರಂದು ನಡೆಸಲಿದ್ದು, ಅಷ್ಟರಲ್ಲಿ ಜಮೀನಿನ ಅನುಭವದಲ್ಲಿ ತಾವೇ ಇರುವುದಾಗಿ ರೋಹಿಣಿ ಸಿಂಧೂರಿ ಪತಿ ಮತ್ತು ಸೋದರ ಮಾವ ಕಾನೂನು ಬಾಹಿರವಾಗಿ ನಿರೂಪಿಸಲು ಪ್ರಯತ್ನಿಸುತ್ತಿದ್ದಾರೆ. ಹೀಗಾಗಿ ತನಗೆ ಇವರಿಂದ ರಕ್ಷಣೆ ನೀಡುವ ಮೂಲಕ ಸಹಾಯ ಮಾಡಬೇಕೆಂದು ಲಕ್ಕಿ ಅಲಿ ತಮ್ಮ ಟ್ವೀಟ್‌ನಲ್ಲಿ ಮನವಿ ಮಾಡಿದ್ದಾರೆ.

ಸಿಂಧೂರಿ ಅವರ ಪತಿ, ಸೋದರ ಮಾವನಿಂದ ಭೂಮಿ ಅತಿಕ್ರಮಣ ಆರೋಪ



ರೋಹಿಣಿ ಸಿಂಧೂರಿ



ಮಕ್ಸೂದ್ ಅಲಿ

ಈ ಭೂಮಿಗೆ ಸಂಬಂಧಿಸಿದಂತೆ ಯಲಹಂಕ ನ್ಯೂಟೌನ್ ಠಾಣೆಯಲ್ಲಿ ದೂರು ಮತ್ತು ಪ್ರತಿ ದೂರು ದಾಖಲಾಗಿದೆ. ಲಕ್ಕಿ ಅಲಿ (ಮಕ್ಸೂದ್ ಅಲಿ) ಅವರು ನ.29ರಂದು ಲಕ್ಷ್ಮೀನಾರಾಯಣ ಇತರರನ್ನು ಆರೋಪಿಗಳನ್ನಾಗಿ ಉಲ್ಲೇಖಿಸಿ 33.07 ಜಮೀನಿನ ಮಾಲೀಕರು ತಾವಾಗಿದ್ದು, ಈ ಸ್ವತ್ತಿಗೆ ಸಂಬಂಧಿಸಿದಂತೆ 2007ರಲ್ಲಿ ನ್ಯಾಯಾಲಯದಲ್ಲಿ ತಡೆಯಾಜ್ಞೆ ಇರುತ್ತದೆ. ಆದರೂ ಆರೋಪಿಗಳು ಸ್ವತ್ತಿನ ನಕಲಿ ಡೀಡ್ ಸೃಷ್ಟಿಸಿಕೊಂಡು ಮೋಸ ಮಾಡಿರುತ್ತಾರೆ. ಹಾಗೂ ನ್ಯಾಯಾಲಯದಲ್ಲಿ ಸುಳ್ಳು ದಾವೆ ಹೂಡಿರುತ್ತಾರೆ. ನ.28ರಂದು ಮಧ್ಯಾಹ್ನ 3.30ರಲ್ಲಿ ಆರೋಪಿಗಳು ನಮ್ಮ ಸ್ವತ್ತಿಗೆ ಅತಿಕ್ರಮ ಪ್ರವೇಶ ಮಾಡಿರುತ್ತಾರೆ. ಇವರಿಂದ ನಮಗೆ ಜೀವ ಬೆದರಿಕೆ ಇರುತ್ತದೆ ಎಂದು ನೀಡಿದ ದೂರನ್ನು ಭಾರತೀಯ ದಂಡ ಸಂಹಿತೆ 506, 420, 447, 465, 468, 471, 34ರಡಿ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

> ಈ ವಿವಾದಕ್ಕೂ ನನಗೂ ಯಾವುದೇ ಸಂಬಂಧವಿಲ್ಲ. ಲಕ್ಕಿ ಅವರ ಹೇಳಿಕೆಗಳು ಅವಹೇಳನಕಾರಿಯಾಗಿದೆ. ಅವರು ನನ್ನ ಮೇಲೆ ಕೆಸರು ಎರಚುವ ಪ್ರಯತ್ನ ಮಾಡುತ್ತಿದ್ದಾರೆ. ಹೀಗಾಗಿ ಅವರ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡುತ್ತೇನೆ.
>
> –ಮಾಧ್ಯಮಗಳಿಗೆ ಪ್ರತಿಕ್ರಿಯಿಸಿರುವ ರೋಹಿಣಿ ಸಿಂಧೂರಿ

ಇದಾದ ಮರುದಿನವೇ ರೋಹಿಣಿ ಸಿಂಧೂರಿ ಸೋದರಮಾವ ಮಧುಸೂದನ್ ರೆಡ್ಡಿ ಅವರು, ಮಕ್ಸೂದ್ ಅಲಿ (ಲಕ್ಕಿ ಅಲಿ) ಮತ್ತು ಮಸೂದ್ ಅಲಿ ಇತರರನ್ನು ಆರೋಪಿಗಳನ್ನಾಗಿ ಉಲ್ಲೇಖಿಸಿ, ತಾವು ವಾಸುದೇವಪುರ ಗ್ರಾಮದ ಸರ್ವೆ ನಂ. 25, 26, 27 ಮತ್ತು 30ರಲ್ಲಿ ಒಟ್ಟು 3 ಎಕರೆ ಜಮೀನಿನ ಮಾಲೀಕರಾಗಿದ್ದು, ಈ ಜಮೀನನ್ನು 2012ರ ಏಪ್ರಿಲ್ 30ರಂದು ಮನ್ಸೂರ್ ಎಂ ಅಲಿ ಮತ್ತು ಆತನ ಅಪ್ರಾಪ್ತ ಮಗಳಾದ ಬೇಬಿ ಸಬೀನಾ ಅವರಿಂದ ಖರೀದಿಸಿ ಸ್ವಾಧೀನದಲ್ಲಿದ್ದೇವೆ. ಇದೇ ಜಮೀನಿನ ವಿಚಾರವಾಗಿ ಮಕ್ಸೂದ್ ಅಲಿ ಹಾಗೂ ತಮ್ಮ ನಡುವೆ ವಿವಾದವಿದ್ದು, ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದೇನೆ. ಹೀಗಿದ್ದರೂ ಮಕ್ಸೂದ್ ಅಲಿ ಮತ್ತು ಮಸೂದ್ ಅಲಿ ಇನ್ನಿತರರು ನವೆಂಬರ್ 28ರಂದು ತಮ್ಮ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿ ತಮ್ಮ ಮೇಲೆ ಹಲ್ಲೆ ನಡೆಸಿದ್ದಾರೆ ಎಂದು ನೀಡಿದ ದೂರನ್ನು ಭಾರತೀಯ ದಂಡ ಸಂಹಿತೆ 447, 323, 34ರಡಿ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಎಟಿಐ ಗೆಸ್ಟ್‌ಹೌಸ್‌ನ 20 ಪದಾರ್ಥಗಳ ಕೊಂಡೊಯ್ದ ರೋಹಿಣಿ ಸಿಂಧೂರಿ!

ಡಿಸಿ ನಿವಾಸದಲ್ಲಿದ್ದರೆ ಮರಳಿಸುವಂತೆ ಎಟಿಐನಿಂದ ಹಾಲಿ ಡಿಸಿಗೆ ಪತ್ರ

ಮೈಸೂರು,ಡಿ.5–ಮೈಸೂರಿನ ಆಡಳಿತ ತರಬೇತಿ ಕೇಂದ್ರದ ಅತಿಥಿಗೃಹದಲ್ಲಿ ವಾಸ್ತವ್ಯ ಹೂಡಿದ್ದ ಹಿಂದಿನ ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿಯವರು ಅತಿಥಿ ಗೃಹದ ಪೀಠೋಪಕರಣ ಸೇರಿ 20 ಸಾಮಗ್ರಿಗಳನ್ನು ಕೊಂಡೊಯ್ದಿದ್ದು, ಅದು ಜಿಲ್ಲಾಧಿಕಾರಿಗಳ ವಸತಿ ಗೃಹದಲ್ಲಿದ್ದರೆ, ಅದನ್ನು ಹಿಂತಿರುಗಿಸುವಂತೆ ಆಡಳಿತ ತರಬೇತಿ ಸಂಸ್ಥೆಯ ನಿರ್ದೇಶಕರು ಹಾಲಿ ಜಿಲ್ಲಾಧಿಕಾರಿ ಡಾ. ರಾಜೇಂದ್ರ ಅವರಿಗೆ ಪತ್ರ ಬರೆದಿದ್ದಾರೆ.

ಮೈಸೂರು ಜಿಲ್ಲಾಧಿಕಾರಿಯಾಗಿ ಆಗಮಿಸಿದ್ದ ರೋಹಿಣಿ ಸಿಂಧೂರಿ 2020ರ ಅಕ್ಟೋಬರ್ 2ರಿಂದ ನವೆಂಬರ್ 14ರವರೆಗೆ ಆಡಳಿತ ತರಬೇತಿ ಸಂಸ್ಥೆಯ ಅತಿಥಿ ಗೃಹದಲ್ಲಿ ವಾಸ್ತವ್ಯವಿದ್ದರು. 2020ರ ನವೆಂಬರ್ 14ರಂದು ಅವರು ಅತಿಥಿ ಗೃಹ ತೆರವುಗೊಳಿಸಿದಾಗ 2 ಟೆಲಿಫೋನ್ ಟೇಬಲ್, 2 ಕ್ಲಾತ್ ಹ್ಯಾಂಗ್ಲರ್ಸ್, 2 ಬೆತ್ತದ ಛೇರ್, 2 ಟೆಲಿಫೋನ್ ಸ್ಟೂಲ್, 2 ಟೀಪಾಯ್, ಒಂದು ಮೈಕ್ರೋ ವೋವನ್, ಒಂದು ರಿಸೆಪ್ಷನ್ ಟೆಲಿಫೋನ್ ಸ್ಟೂಲ್, ಒಂದು ಮಂಚ, ಒಂದು ಹಾಸಿಗೆ, 2 ಪ್ಲಾಸ್ಟಿಕ್ ಸ್ಟೂಲ್, 2 ಯೋಗಾ ಮ್ಯಾಟ್ ಮತ್ತು 2 ಸ್ಟೀಲ್ ವಾಟರ್ ಜಗ್ ಸೇರಿದಂತೆ 20 ಸಾಮಗ್ರಿಗಳು ಸಾಗಿಸಲ್ಪಟ್ಟಿವೆ. ಈ ಹಿನ್ನೆಲೆಯಲ್ಲಿ ಸದರಿ ಸಾಮಗ್ರಿಗಳು ಮೈಸೂರು ಜಿಲ್ಲಾಧಿಕಾರಿಗಳ ವಸತಿ ಗೃಹದಲ್ಲಿ ಇದ್ದಲ್ಲಿ ಅದನ್ನು ಆಡಳಿತ ತರಬೇತಿ ಸಂಸ್ಥೆಗೆ ಹಿಂತಿರುಗಿಸುವಂತೆ ಹಾಗೂ ಇಲ್ಲದಿದ್ದರೆ ಮಾಹಿತಿಯನ್ನು ಮರು ಟಪಾಲಿನಲ್ಲಿ ಕಳುಹಿಸುವಂತೆ ಪತ್ರದಲ್ಲಿ ತಿಳಿಸಲಾಗಿದೆ.

ಈ ಸಾಮಗ್ರಿಗಳ ಕುರಿತು ಆಡಳಿತ ತರಬೇತಿ ಸಂಸ್ಥೆಯು 2020ರ ಡಿಸೆಂಬರ್ 16, 2021ರ ಜನವರಿ 8 ಮತ್ತು ಏಪ್ರಿಲ್ 14ರಂದು ಕೂಡ ಅಂದಿನ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದಿತ್ತು. ನವೆಂಬರ್ 30ರಂದು ಬರೆದಿರುವ ಪತ್ರದಲ್ಲಿ ಉಲ್ಲೇಖಿಸಲಾಗಿದೆ. ಈ ಪತ್ರ ವೈರಲ್ ಆಗಿದ್ದು, ಭಾರೀ ಚರ್ಚೆಗೆ ಗ್ರಾಸವಾಗಿದೆ.


Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com



ವೈದ್ಯರ ಸಲಹೆ ಮೇರೆಗೆ ಬೆಂಗಳೂರಿನ ತಮ್ಮ ನಿವಾಸದಲ್ಲಿ ವಿಶ್ರಾಂತಿ ಪಡೆಯುತ್ತಿರುವ ವಿಪಕ್ಷ ನಾಯಕ ಸಿದ್ದರಾಮಯ್ಯ ಅವರನ್ನು, ಮೈಸೂರು ಜಿಪಂ ಮಾಜಿ ಅಧ್ಯಕ್ಷ ಕೆ.ಮರೀಗೌಡ ಭೇಟಿಯಾಗಿ ಯೋಗಕ್ಷೇಮ ವಿಚಾರಿಸಿದರಲ್ಲದೆ, ರಾಜಕೀಯ ಸಂಬಂಧಿತ ಚರ್ಚೆ ನಡೆಸಿದರು.

ಪ್ರತಿಯೊಬ್ಬರಿಗೂ ತಮ್ಮ ಮತ, ಧರ್ಮ ಅನುಸರಿಸಲು ಹಕ್ಕಿದೆ

ನವದೆಹಲಿ: ಭಾರತ ಮತ ನಿರಪೇಕ್ಷ ದೇಶವಾಗಿದ್ದು ಪ್ರತಿಯೊಬ್ಬರಿಗೂ ತಮ್ಮ ತಮ್ಮ ಮತಗಳನ್ನು ಅನುಸರಿಸುವ ಹಕ್ಕು ಇದೆ ಎಂದು ಸುಪ್ರೀಂಕೋರ್ಟ್ ಹೇಳಿದೆ.



ಠಾಕೂರ್ ಅನುಕುಲ್ ಚಂದ್ರ ಅವರನ್ನು ಪರಮಾತ್ಮ ಎಂದು ಘೋಷಿಸಬೇಕು ಎಂದು ಕೋರಿದ್ದ ಪಿಐಎಲ್ ಅನ್ನು ವಜಾಗೊಳಿಸಿರುವ ವೇಳೆ ಸುಪ್ರೀಂಕೋರ್ಟ್ ಈ ರೀತಿಯ ಹೇಳಿಕೆ ನೀಡಿದೆ. ನ್ಯಾ.ಎಂ ಆರ್ ಷಾ ಹಾಗೂ ನ್ಯಾ. ಸಿಟಿ ರವಿಕುಮಾರ್ ಅರ್ಜಿದಾರರಿಗೆ ಪ್ರಚಾರದ ಆಸಕ್ತಿ ಹೊಂದಿರುವ ವ್ಯಾಜ್ಯವನ್ನು ಕೋರ್ಟ್‌ಗೆ ಎಳೆದು ತಂದಿದ್ದಕ್ಕಾಗಿ 1 ಲಕ್ಷ ರೂಪಾಯಿ ದಂಡ ವಿಧಿಸಿದೆ.

ಅರ್ಜಿದಾರ ಉಪೇಂದ್ರನಾಥ್ ದಲೈ ಅವರು ತಮ್ಮ ಅರ್ಜಿಯನ್ನು ಓದಲು ಪ್ರಾರಂಭಿಸಿದ ಬೆನ್ನಲ್ಲೇ ನ್ಯಾಯಪೀಠ, ಅರ್ಜಿದಾರರ ಕುರಿತು, ನಿಮ್ಮ ಉಪನ್ಯಾಸ ಕೇಳಲು ನಾವು ಇಲ್ಲಿ ಇಲ್ಲ. ಇದು ಸಾರ್ವಜನಿಕ ಹಿತಾಸಕ್ತಿ ಅರ್ಜಿಯೇ ಅದು ಹೇಗೆ ಆಗುತ್ತದೆ ಪ್ರತಿಯೊಬ್ಬರಿಗೂ ಅವರ ಮತವನ್ನು ಅನುಸರಿಸಲು ಹಕ್ಕಿದೆ. ನಿರ್ದಿಷ್ಟ ಮತವನ್ನು ಅನುಸರಿಸಿ ಎಂದು ಜನಕ್ಕೆ ಹೇಳುವುದಕ್ಕೆ ಹೇಗೆ ಸಾಧ್ಯ ನಿಮಗೆ ಬೇಕಾದಲ್ಲಿ ನೀವು ಅವರನ್ನು ಪರಮಾತ್ಮ ಎಂದು ಪರಿಗಣಿಸಿ, ಅದನ್ನು ಬೇರೆಯವರ ಮೇಲೇಕೆ ಹೇರುತ್ತಿದ್ದೀರಿ ಎಂದು ನ್ಯಾಯಪೀಠ ಅರ್ಜಿದಾರರನ್ನು ಪ್ರಶ್ನಿಸಿದೆ.

ಭಾರತ ಮತನಿರಪೇಕ್ಷ ದೇಶವಾಗಿದೆ, ಅರ್ಜಿದಾರರಿಗೆ, ಠಾಕೂರ್ ಅನುಕುಲ್ ಚಂದ್ರ ಅವರನ್ನು ಇಡೀ ದೇಶದ ಜನತೆ ಪರಮಾತ್ಮ ಎಂದು ಅಂಗೀಕರಿಸುವಂತೆ ಮನವಿ ಮಾಡುವುದಕ್ಕೆ ಅವಕಾಶವಿಲ್ಲ. ಇದು ಪ್ರಚಾರಕ್ಕಾಗಿ ಹಾಕಲಾಗಿರುವ ಅರ್ಜಿ ಎಂದೆನಿಸುತ್ತದೆ, ಇದು ದಂಡದ ಸಹಿತ ವಿಲೇವಾರಿ ಮಾಡುವುದಕ್ಕೆ ಯೋಗ್ಯವಷ್ಟೇ ಎಂದು ಪೀಠ ಹೇಳಿದೆ. ಠಾಕೂರ್ ಅನುಕುಲ್ ಚಂದ್ರ ಸೆ.14, 1888ರಲ್ಲಿ ಬಾಂಗ್ಲಾದೇಶದ ಪಬ್ನದಲ್ಲಿ ಜನಿಸಿದ್ದರು.

ಡಿ.11, 6ನೇ ವಂದೇ ಭಾರತ್ ರೈಲು ಮೋದಿಯಿಂದ ಉದ್ಘಾಟನೆ

ನವದೆಹಲಿ: ಡಿಸೆಂಬರ್ 11ರಂದು 6ನೇ ವಂದೇ ಭಾರತ್ ರೈಲನ್ನು ಪ್ರಧಾನಿ ನರೇಂದ್ರ ಮೋದಿಯವರು ಉದ್ಘಾಟಿಸಲಿದ್ದಾರೆ. ಛತ್ತೀಸ್‌ಗಢ ಬಿಲಾಸ್‌ಪುರದಿಂದ ನಾಗ್ಪುರ



(ಮಹಾರಾಷ್ಟ್ರ)ವನ್ನು ತಲುಪಲಿರುವ ದೇಶದ 6ನೇ ಸೆಮಿ ಹೈಸ್ಪೀಡ್ ವಂದೇ ಭಾರತ್ ರೈಲನ್ನು ಡಿಸೆಂಬರ್ 11ರಂದು ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಲಿದ್ದಾರೆ.

ಈ ರೈಲು ವಾರದಲ್ಲಿ ಆರು ದಿನಗಳು ಚಲಿಸುತ್ತದೆ ಮತ್ತು ಸುಮಾರು ಐದೂವರೆ ಗಂಟೆಗಳಲ್ಲಿ ಪ್ರಯಾಣದ ಒಂದು ಮಾರ್ಗವನ್ನು ಪೂರ್ಣಗೊಳಿಸುತ್ತದೆ. ಬಿಲಾಸ್ಪುರ್-ನಾಗ್ಪುರ ವಂದೇ ಭಾರತ್ ರೈಲನ್ನು ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ (ಡಿಸೆಂಬರ್ 11) ನಾಗ್ಪುರದಲ್ಲಿ ಉದ್ಘಾಟಿಸಲಿದ್ದಾರೆ ಎಂದು ಅಧಿಕಾರಿ ತಿಳಿಸಿದ್ದಾರೆ.

ಈ ರೈಲು ಬೆಳಗ್ಗೆ 6.45ಕ್ಕೆ ಬಿಲಾಸ್‌ಪುರದಿಂದ ಹೊರಟು ಮಧ್ಯಾಹ್ನ 12.15ಕ್ಕೆ ನಾಗ್ಪುರ ತಲುಪಲಿದೆ ಎಂದು ರೈಲ್ವೆ ಅಧಿಕಾರಿ ತಿಳಿಸಿದ್ದಾರೆ. ಅದೇ ರೀತಿ ನಾಗ್ಪುರದಿಂದ ಮಧ್ಯಾಹ್ನ 2 ಗಂಟೆಗೆ ಹೊರಟು ರಾತ್ರಿ 7.35ಕ್ಕೆ ಬಿಲಾಸ್ಪುರ ತಲುಪಲಿದೆ. ಪ್ರಸ್ತುತ ಸೂಪರ್ ಫಾಸ್ಟ್ ರೈಲುಗಳು ನಾಗಪುರವನ್ನು ತಲುಪಲು ಸುಮಾರು 7 ಗಂಟೆ ತೆಗೆದು ಕೊಳ್ಳುತ್ತದೆ. ಆದರೆ ವಂದೇ ಭಾರತ್ ರೈಲು ಸುಮಾರು ಐದೂವರೆ ಗಂಟೆಗಳಲ್ಲಿ ತಲುಪಲಿದೆ. ಜೊತೆಗೆ 2023 ರಲ್ಲಿ ಸಿಕಂದರಾಬಾದ್ ಮತ್ತು ವಿಜಯವಾಡ ನಡುವೆ ಮತ್ತೊಂದು ವಂದೇ ಭಾರತ್ ರೈಲು ಪ್ರಾರಂಭಿಸುವ ಸಾಧ್ಯತೆಯಿದೆ ಎಂದು ಅಧಿಕಾರಿ ಹೇಳಿದರು.

ಈ ರೈಲು ಈ ವರ್ಷದ ಅಕ್ಟೋಬರ್‌ನಲ್ಲಿ ಮುಂಬೈ-ಅಹಮದಾಬಾದ್ ಮಾರ್ಗದಲ್ಲಿ ಮೊದಲ ಬಾರಿಗೆ ಉದ್ಘಾಟನೆಗೊಂಡಿತು. ಮುಂದಿನ ವರ್ಷ ಆಗಸ್ಟ್ ವೇಳೆಗೆ 75 ವಂದೇ ಭಾರತ್ ರೈಲುಗಳನ್ನು ಉದ್ಘಾಟಿಸುವ ಗುರಿ ಹೊಂದಿದೆ. ಸೆಮಿ-ಹೈ-ಸ್ಪೀಡ್ ವಂದೇ ಭಾರತ್ ರೈಲಿನ ಎಲ್ಲಾ ಕೋಚ್‌ಗಳು ಸ್ವಯಂಚಾಲಿತ ಬಾಗಿಲುಗಳು, ಜಿಪಿಎಸ್-ಆಧಾರಿತ ಆಡಿಯೊ-ವಿಶುವಲ್ ಪ್ಯಾಸೆಂಜರ್ ಮಾಹಿತಿ ವ್ಯವಸ್ಥೆ, ಮನರಂಜನಾ ಉದ್ದೇಶಗಳಿಗಾಗಿ ಆನ್‌ಬೋರ್ಡ್ ಹಾಟ್‌ಸ್ಪಾಟ್ ವೈ-ಫೈ ಮತ್ತು ಆರಾಮದಾಯಕ ಆಸನಗಳನ್ನು ಹೊಂದಿವೆ. ಮೊದಲ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲನ್ನು ಫೆಬ್ರವರಿ 15, 2019ರಂದು ನವದೆಹಲಿ-ಕಾನ್ಪುರ-ಅಲಹಾಬಾದ್-ವಾರಣಾಸಿ ಮಾರ್ಗದಲ್ಲಿ ಚಾಲನೆ ನೀಡಲಾಯಿತು.

ದ್ವಾರಕೀಶ್‌ಗೆ ಗೌರವ ಡಾಕ್ಟರೇಟ್ ಪ್ರದಾನ


ಬೆಂಗಳೂರು: ಕರ್ನಾಟಕ ಕುಳ್ಳ ಖ್ಯಾತಿಯ ನಟ ದ್ವಾರಕೀಶ್ ಅವರಿಗೆ ಬೆಂಗಳೂರು ವಿಶ್ವವಿದ್ಯಾಲಯವು ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಿದೆ.



ಇಂದು ನಡೆದ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಯಿತು. 57ನೇ ಘಟಿಕೋತ್ಸವ ಅದ್ದೂರಿಯಾಗಿ ನಡೆದಿದ್ದು, ಜ್ಞಾನಜ್ಯೋತಿ ಆಡಿಟೋರಿಯಂನಲ್ಲಿ ನಡೆದ ಕಾರ್ಯಕ್ರಮವನ್ನು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಘಟಿಕೋತ್ಸವಕ್ಕೆ ಚಾಲನೆ ನೀಡಿದರು. ಮುಖ್ಯ ಅತಿಥಿಗಳಾಗಿ ವಿಶ್ವವಿದ್ಯಾಲಯದ ಅನುದಾನ ಆಯೋಗದ ಅಧ್ಯಕ್ಷ ಪ್ರೊ.ಎಂ.ಜಗದೀಶ್, ಉನ್ನತ ಶಿಕ್ಷಣ ಸಚಿವ ಅಶ್ವಥ್‌ನಾರಾಯಣ ಭಾಗವಹಿಸಿದ್ದರು. ಘಟಿಕೋತ್ಸವದಲ್ಲಿ ಚಿತ್ರ ನಟ ದ್ವಾರಕೀಶ್, ಕಲಾವಿದ ಅಮರನಾಥ್‌ಗೌಡ, ಸಮಾಜ ಸೇವಕ ಡಾ.ಟಿ.ಅನಿಲ್‌ಕುಮಾರ್ ಅವರಿಗೆ ಗೌರವ ಡಾಕ್ಟರೇಟ್ ನೀಡಿ ಗೌರವಿಸಲಾಯಿತು. 34337 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. 300 ಚಿನ್ನದ ಪದಕ, 73 ನಗದು ಬಹುಮಾನ, 267 ಅಭ್ಯರ್ಥಿಗಳಿಗೆ ಡಾಕ್ಟರೇಟ್ ಪ್ರದಾನ ಮಾಡಲಾಯಿತು. ಸ್ನಾತಕೋತ್ತರ ಪದವಿ ವಿಭಾಗದಲ್ಲಿ ಕೀರ್ತಿ ನೇಗಿನ್ಹಾಲ್ 7 ಚಿನ್ನದ ಪದಕ,ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವಿಜಯನಗರ. ಅರ್ಚನ 7 ಚಿನ್ನದ ಪದಕ, ರಸಾಯನಶಾಸ್ತ್ರ, ಬೆಂಗಳೂರು ವಿವಿ., ಮಯೂರ 6 ಚಿನ್ನದ ಪದಕ, ಸಂಸ್ಕೃತ ವಿಭಾಗ ಬೆಂಗಳೂರು ವಿಶ್ವವಿದ್ಯಾಲಯದಿಂದ ಅತಿ ಹೆಚ್ಚು ಚಿನ್ನದ ಪದಕ ಪಡೆದರು. ಸ್ನಾತಕ ಪದವಿ ವಿಭಾಗದಲ್ಲಿ, ರಾಮ್‌ಕುಮಾರ್ ಬಿಎಸ್ಸಿ, 6 ಚಿನ್ನದ ಪದಕ, ಸೌಂದರ್ಯ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ & ಸೈನ್ಸ್, ಸ್ಫೂರ್ತಿ 6 ಚಿನ್ನದ ಪದಕ, ಬಿಕಾಂ, ಜ್ಞಾನವಿಕಾಸ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ & ಕಾಮರ್ಸ್, ಧನುಷ 5 ಚಿನ್ನದ ಪದಕ, ಬಿಬಿಎ, ಸುರಾನ ಕಾಲೇಜು ಅತೀ ಹೆಚ್ಚು ಪದಕ ಪಡೆದರು.

ಹಿರಿಯ ನಿರ್ದೇಶಕ ಭಗವಾನ್ ಆಸ್ಪತ್ರೆಗೆ ದಾಖಲು

ಬೆಂಗಳೂರು: ಕನ್ನಡ ಚಿತ್ರರಂಗದ ಹಿರಿಯ ನಿರ್ದೇಶಕ ಭಗವಾನ್ ಅವರು ಜಯದೇವ ಹೃದ್ರೋಗ ಆಸ್ಪತ್ರೆಗೆ ದಾಖಲಾಗಿದ್ದಾರೆ. ಚಿತ್ರರಂಗದಲ್ಲಿ ಇವರು ಭಗವಾನ್ ಎಂದೇ ಪ್ರಸಿದ್ಧರು.



ಕನ್ನಡ ಚಿತ್ರರಂಗದಲ್ಲಿ ಖ್ಯಾತ ನಿರ್ದೇಶಕರಾಗಿ, ನಿರ್ಮಾಪಕರಾಗಿ ಮತ್ತು ನಟರಾಗಿಯೂ ಇವರು ಗುರುತಿಸಿಕೊಂಡಿದ್ದಾರೆ. ತಮ್ಮ ಹದಿಹರೆಯದ ವಯಸ್ಸಲ್ಲಿ ನಾಟಕಗಳಲ್ಲಿ ಅಭಿನಯಿಸುತ್ತಿದ್ದರು. ಬಳಿಕ 1956ರಲ್ಲಿ ಕಣಗಾಲ್ ಪ್ರಭಾಕರ ಶಾಸ್ತ್ರೀ ಅವರಿಗೆ ಸಹಾಯಕರಾಗಿ ಚಿತ್ರರಂಗ ಪ್ರವೇಶಿಸಿದರು. 1966ರಲ್ಲಿ ತೆರೆಕಂಡ 'ಸಂಧ್ಯಾರಾಗ' ಚಿತ್ರದ ಮೂಲಕ ಸಹಾಯಕ ನಿರ್ದೇಶಕರಾದರು. ಬಳಿಕ ನಿರ್ದೇಶಕ ದೊರೈರಾಜ್ ಜೊತೆಗೂಡಿ ಸ್ವತಂತ್ರರಾಗಿ ಚಿತ್ರ ನಿರ್ದೇಶಿಸಲು ಪ್ರಾರಂಭಿಸಿದರು.

ಈ ಇಬ್ಬರ ಜೊಡಿ 55 ಕನ್ನಡ ಚಿತ್ರಗಳನ್ನು ನಿರ್ದೇಶಿಸಿದ್ದಾರೆ. 'ಕಸ್ತೂರಿ ನಿವಾಸ', 'ಎರಡು ಕನಸು', 'ಬಯಲು ದಾರಿ', 'ಗಿರಿಕನ್ಯೆ', 'ಚಂದನದ ಗೊಂಬೆ', 'ವಸಂತ ಗೀತ', 'ಆಪರೇಷನ್ ಡೈಮಂಡ್ ರಾಕೆಟ್', 'ಹೊಸಬೆಳಕು', 'ಯಾರಿವನು' ಸೇರಿದಂತೆ ಹಲವು ಯಶಸ್ವಿ ಸಿನಿಮಾಗಳನ್ನು ಭಗವಾನ್ ಅವರು ನಿರ್ದೇಶಿಸಿದ್ದಾರೆ.

ಇವರ 30 ಚಿತ್ರಗಳಲ್ಲಿ ವರನಟ ಡಾ.ರಾಜಕುಮಾರ್ ನಾಯಕ ನಟರಾಗಿ ಅಭಿನಯಿಸಿರುವುದು ಇನ್ನೊಂದು ವಿಶೇಷ. ಅಷ್ಟೇ ಅಲ್ಲದೇ ಭಗವಾನ್ ಅವರು ವಿನಯ್ ರಾಘವೇಂದ್ರ ರಾಜ್‌ಕುಮಾರ್ ನಾಯಕತ್ವದ 'ಅನಂತು ವರ್ಸಸ್ ನುಸ್ರತ್' ಚಿತ್ರದಲ್ಲೂ ನಟಿಸಿದ್ದರು. ಸಿನಿಮಾ ರಂಗದಲ್ಲಿ 65 ವರ್ಷದ ಸುದೀರ್ಘ ಅನುಭವವನ್ನು ಹೊಂದಿದ್ದಾರೆ. ದೊರೈರಾಜರ ಮರಣದ ನಂತರ ಇವರು ನಿರ್ದೇಶನದಿಂದ ನಿವೃತ್ತಿ ಪಡೆದರು.

ಮೈಸೂರು ಮಹಾನಗರ ಪಾಲಿಕೆ ಸಿಬ್ಬಂದಿ ಘನಕಾರ್ಯ

ಬಡಾವಣೆಯ ಖಾಲಿ ಜಾಗದಲ್ಲಿ ಕಸ ಸುರಿದು ಬೆಂಕಿ: ಹೊಗೆಯಿಂದ ಕಂಗಾಲಾದ ನಿವಾಸಿಗಳು

ಮೈಸೂರು, ಡಿ.5(ಎಂಕೆ)- ಕಸಕ್ಕೆ ಬೆಂಕಿ ಹಚ್ಚಿ ನಿವಾಸಿಗಳಿಗೆ ಹಾನಿಕಾರಕ ಹೊಗೆ ಸೇವನೆಯ ಅನುಗ್ರಹ ನೀಡಿದ ಮೈಸೂರು ನಗರ ಪಾಲಿಕೆ ಸಿಬ್ಬಂದಿ...!

ನಗರ ವಾಸಿಗಳ ಆರೋಗ್ಯ ಕಾಪಾಡಬೇಕಾದ ನಗರ ಪಾಲಿಕೆ ಸಿಬ್ಬಂದಿಯೇ ನಿವಾಸಿಗಳ ಪ್ರಾಣದೊಂದಿಗೆ ಚೆಲ್ಲಾಟವಾಡುತ್ತಿದೆ. ನಗರದೆಲ್ಲೆಡೆಯಿಂದ ಕಸ ತಂದು ಸುರಿಯುವುದು, ಸುರಿದ ಕಸಕ್ಕೆ ಬೆಂಕಿ ಹಚ್ಚುವುದು ಕಳೆದ 6 ತಿಂಗಳಿಂದ ಪಾಲಿಕೆ ಸಿಬ್ಬಂದಿ ನಿತ್ಯ ಕೆಲಸವಾಗಿದೆ.



ಮೈಸೂರಿನ ರಾಜೀವ್‌ನಗರದ 3ನೇ ಹಂತದಲ್ಲಿರುವ(ನಾರಾಯಣ ಹೃದಯಾಲಯ ಆಸ್ಪತ್ರೆ ಸಮೀಪ) ಖಾಲಿ ನಿವೇಶನಗಳನ್ನು ಕಸ ಸುರಿಯುವ ಸ್ಥಳವನ್ನಾಗಿ ಮಾಡಿಕೊಂಡಿರುವ ಪಾಲಿಕೆ ಸಿಬ್ಬಂದಿ, ಸುರಿದ ಕಸಕ್ಕೆ ಬೆಂಕಿಹಚ್ಚುವ ಕೆಲಸ ಮಾಡುತ್ತಿದ್ದಾರೆ. ಪರಿಣಾಮ ಅಕ್ಕ-ಪಕ್ಕ ನಿವಾಸಿಗಳ ಉಸಿರಾಟಕ್ಕೆ ಭಾರೀ ತೊಂದರೆ ಉಂಟಾಗುತ್ತಿದ್ದು, ದುರ್ವಾಸನೆ ಬೀರುವ ಹೊಗೆಯ ನಡುವೆಯೇ ಜೀವಿಸುವಂತಾಗಿದೆ.

ಕ್ಯಾರೆ ಎನ್ನುತ್ತಿಲ್ಲ: ಕಳೆದ 6 ತಿಂಗಳಿಂದ ಇಲ್ಲಿನ ಖಾಲಿ ಜಾಗದಲ್ಲಿ ಸುಮಾರು ಅರ್ಧ ಕಿಮೀಯಷ್ಟು ದೂರ ಕಸ ಸುರಿಯುತ್ತಿರುವ ಪಾಲಿಕೆ ಸಿಬ್ಬಂದಿ ಸಂಜೆ ವೇಳೆಗೆ ಬೆಂಕಿ ಹಚ್ಚುತ್ತಾರೆ. ಇದರಿಂದ ತೊಂದರೆಯಾಗುತ್ತಿದೆ ಎಂದು ಸಾಕಷ್ಟು ಸಲ ಹೇಳಿದ್ದರೂ ಕ್ಯಾರೆ ಎನ್ನುತ್ತಿಲ್ಲ. ಪಾಲಿಕೆ ಕಂಟ್ರೋಲ್ ರೂಂಗೆ ಕರೆ ಮಾಡಿದರೂ ಯಾವುದೇ ಪ್ರಯೋಜನವಿಲ್ಲ ಎಂದು ಸ್ಥಳೀಯ ನಿವಾಸಿ ನದೀಮ್ ಮಹಮದ್ ಖಾನ್ 'ಮೈಸೂರು ಮಿತ್ರ'ನಲ್ಲಿ ದೂರಿದ್ದಾರೆ.


ಸಮೀಪದಲ್ಲಿಯೇ ಆಸ್ಪತ್ರೆ ಹಾಗೂ ಆರ್‌ಟಿಓ ಕಚೇರಿ ಇದೆ. ಪ್ರತಿನಿತ್ಯ ಸಾವಿರಾರು ಜನರು ಬರುತ್ತಾರೆ. ಅಲ್ಲದೆ ರಾಜೀವ್‌ನಗರ 3ನೇ ಹಂತದ ಬಡಾವಣೆಯಲ್ಲಿ ನೂರಾರು ಮನೆಗಳಿದ್ದು, ಸಾವಿರಾರು ಜನರು ವಾಸಿಸುತ್ತಿದ್ದಾರೆ. ಇದೆಲ್ಲವೂ ಕಣ್ಣ ಮುಂದೆ ಕಂಡರೂ ಕಾಣದಂತೆ ವರ್ತಿಸುತ್ತಿರುವ ಪಾಲಿಕೆ ಸಿಬ್ಬಂದಿ ವರ್ತನೆ ಮಿತಿ ಮೀರಿದಂತಿದೆ ಎಂದು ಕಿಡಿಕಾರಿದರು.

ಸಂಜೆ 4ಕ್ಕೆ ಬೆಂಕಿ: 2 ದಿನಗಳಿಗೊಮ್ಮೆ ಸಂಜೆ 4 ಗಂಟೆಯಾಗುತ್ತಿದ್ದಂತೆ ಕಸಕ್ಕೆ ಬೆಂಕಿ ಹಚ್ಚುತ್ತಾರೆ. ಹಸಿಕಸ, ಒಣ ಕಸದ ಜೊತೆಗೆ ಇ-ತ್ಯಾಜ್ಯವೂ (ಎಲೆಕ್ಟ್ರಾನಿಕ್ ವಸ್ತುಗಳು) ಇರುತ್ತದೆ. ಪ್ಲಾಸ್ಟಿಕ್ ವಸ್ತುಗಳಿಂದ ಕೆಟ್ಟ ಹೊಗೆ ಹೊರಬರಲಿದ್ದು, ಉಸಿರು ಕಟ್ಟಿದಂತಾಗುತ್ತದೆ. ಮನೆ ಮಂದಿ ಕೆಮ್ಮಿನಿಂದ ಬಳಲುವಂತಾಗಿದೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ. ಇದೇ ರೀತಿ ಕಸ ಸುರಿದು ಬೆಂಕಿ ಹಚ್ಚುತ್ತಿದ್ದರೆ, ಅದೇ ಕಸವನ್ನು ಪಾಲಿಕೆ ಮುಂದೆ ತಂದು ಸುರಿದು ನಿವಾಸಿಗಳು ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ.

ಪಿಎಫ್‌ಐ ಸೇರಿ ಪೋಸ್ಟರ್ ಹಾಕಿದವರ ವಿರುದ್ಧ ಸೂಕ್ತ ಕ್ರಮ

ಬೆಂಗಳೂರು, ಡಿ.5 (ಕೆಎಂಶಿ)- ಪಿಎಫ್‌ಐ ಸೇರಿ ಎಂಬ ಪೋಸ್ಟರ್‌ಗಳನ್ನು ಅಂಟಿಸಿರುವವರ ವಿರುದ್ಧ ಪೊಲೀಸರು ಈಗಾಗಲೇ ಕ್ರಮ ಕೈಗೊಂಡಿದ್ದಾರೆ. ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಿಎಫ್‌ಐ ರದ್ದು ಮಾಡಿದ ನಂತರ ಹತಾಶರಾಗಿ ಈ ರೀತಿ ಗೋಡೆ ಮೇಲೆ ಬರೆಯುತ್ತಿದ್ದಾರೆ. ಇದನ್ನು ನಾನು ಖಂಡಿಸುತ್ತೇನೆ. ಸಮಾಜದಲ್ಲಿ ಗೊಂದಲ ಸೃಷ್ಟಿಸುವ ಕೆಲಸ ಮಾಡುತ್ತಿರುವುದು ಸರಿಯಲ್ಲ ಎಂದು ತಿಳಿಸಿದರು.



ಮಹಾರಾಷ್ಟ್ರ ಮಂತ್ರಿಗಳು ಬೆಳಗಾವಿಗೆ ಬರುವುದು ಸೂಕ್ತವಲ್ಲ ಎಂದು ಲಿಖಿತವಾಗಿ ಸೂಚಿಸಿದ್ದರೂ ಬರುತ್ತಿರುವುದು ಸರಿಯಲ್ಲ. ಯಾರು ಎಲ್ಲಿ ಬೇಕಾದರೂ ಓಡಾಡುವ ಸ್ವಾತಂತ್ರ್ಯವಿದೆ ಎಂದು ನಮಗೂ ತಿಳಿದಿದೆ. ಕಾನೂನು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಸಂಬಂಧಪಟ್ಟ ಪೊಲೀಸ್ ಹಾಗೂ ಕಂದಾಯ ಇಲಾಖೆ ಅಧಿಕಾರಿಗಳಿಗೆ ಕಾನೂನು ಸುವ್ಯವಸ್ಥೆ ದೃಷ್ಟಿಯಿಂದ ನಮ್ಮ ಸರ್ಕಾರ ಕೆಲವು ಕ್ರಮಕೈಗೊಳ್ಳಲು ಸೂಚನೆ ನೀಡಲಾಗಿದೆ ಎಂದರು. ಈ ರೀತಿಯ ಕ್ರಮ ಸರಿಯಾದುದಲ್ಲ. ಗಡಿ ವಿವಾದ ಬಗೆಹರಿದಿದ್ದರೂ ಸುಪ್ರೀಂಕೋರ್ಟಿನಲ್ಲಿ ವ್ಯಾಜ್ಯ ಹೂಡಿದ್ದಾರೆ. ಕಾನೂನಾತ್ಮಕವಾಗಿ ಇಬ್ಬರೂ ಹೋರಾಡುತ್ತೇವೆ. ಆದರೆ ಎರಡೂ ರಾಜ್ಯದ ಜನರು ಸಾಮರಸ್ಯದಿಂದಿದ್ದು, ಇಲ್ಲಿ ಕಾನೂನು ಸುವ್ಯವಸ್ಥೆ ಕದಡುವ ಯಾವುದೇ ಕೆಲಸ ಮಾಡಬಾರದು ಎಂದು ಮಹಾರಾಷ್ಟ್ರ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡುವುದಾಗಿ ತಿಳಿಸಿದರು.



ಮೈಸೂರು ವಾರ್ಡ್ ನಂ.22ರ ಪಡುವಾರಹಳ್ಳಿಯಲ್ಲಿ ಮೈಸೂರು ನಗರಪಾಲಿಕೆ 24.1ರ ಯೋಜನೆಯಡಿಯಲ್ಲಿ ಸುಮಾರು 20 ಲಕ್ಷ ರೂ. ವೆಚ್ಚದ ಡಾ.ಬಿ.ಆರ್. ಅಂಬೇಡ್ಕರ್ ಭವನದ ಅಭಿವೃದ್ಧಿ ಕಾಮಗಾರಿಗೆ ಸೋಮವಾರ ಶಾಸಕ ಎಲ್.ನಾಗೇಂದ್ರ ಗುದ್ದಲಿಪೂಜೆ ನೆರವೇರಿಸಿದರು. ಈ ಸಂದರ್ಭದಲ್ಲಿ ಪಾಲಿಕೆ ಸದಸ್ಯರಾದ ಶ್ರೀಮತಿ ನಮ್ರತಾ ರಮೇಶ್, ಎಂ.ಚಿಕ್ಕವೆಂಕಟು, ದಿ ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಎಸ್.ಬಿ.ಶಿವು, ಪುನೀತ್, ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, ಗಿರೀಶ್, ಎಂ.ಸಿ.ಕುಮಾರ್, ಆಟೋ ಮಂಜು, ಗುರುದತ್ತ, ಗಂಗೋತ್ರಿ ರಮೇಶ್ ಮತ್ತಿತರಿದ್ದರು.

ಲಗೇಜ್ ಆಟೋ ಪಲ್ಟಿ, ಮಂಡ್ಯ ಮೂಲದ ಮೂವರು ಸಾವು

ರಾಮನಗರ: ಮಾಗಡಿ ತಾಲೂಕಿನ ನಾರಾಯಣಿಪಾಳ್ಯ ಗೇಟ್ ಬಳಿ ರಸ್ತೆ ತಿರುವಿನಲ್ಲಿ ಲಗೇಜ್ ಆಟೋ ಪಲ್ಟಿಯಾಗಿ ಮೂವರು ಸ್ಥಳದಲ್ಲೇ ದುರ್ಮರಣಕ್ಕೀಡಾಗಿದ್ದು, ಮೂವರ ಸ್ಥಿತಿ ಗಂಭೀರವಾಗಿದೆ. ಮಂಡ್ಯ ಜಿಲ್ಲೆ ನಾಗಮಂಗಲ ತಾಲೂಕಿನ ಬೆಳ್ಳೂರು ಗ್ರಾಮದವರಾದ ರತ್ನಮ್ಮ(53), ಲಕ್ಷ್ಮಮ್ಮ(40) ಹಾಗೂ ಮಂಜುನಾಥ(32) ಮೃತರು. ನೆಲಮಂಗಲದಲ್ಲಿ ತರಕಾರಿ ತೆಗೆದುಕೊಂಡು ಬೆಳ್ಳೂರಿಗೆ ವಾಪಸ್ ಹೋಗುವಾಗ ಈ ಅಪಘಾತ ಸಂಭವಿಸಿದೆ. ಇನ್ನೂ ಮೂವರು ಗಾಯಗೊಂಡಿದ್ದು, ಅವರನ್ನು ನೆಲಮಂಗಲ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಮೂವರ ಮೃತದೇಹಗಳು ರಸ್ತೆಯಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು.

ಮಹಾರಾಷ್ಟ್ರ ಸಚಿವರು ಬೆಳಗಾವಿಗೆ ಬರಲು ಬಿಡುವುದಿಲ್ಲ

ಜಿಲ್ಲಾಧಿಕಾರಿ ನಿತೇಶ್ ಪಾಟೀಲ್



ಬೆಳಗಾವಿ: ಉಭಯ ರಾಜ್ಯಗಳ ನಡುವಿನ ಗಡಿ ವಿವಾದ ಭುಗಿಲೆದ್ದಿರುವ ಈ ಸಂದರ್ಭದಲ್ಲಿ ಮಹಾರಾಷ್ಟ್ರ ಸಚಿವರು ಬೆಳಗಾವಿಗೆ ಬರಲು ಬಿಡುವುದಿಲ್ಲ ಎಂದು ಜಿಲ್ಲಾಧಿಕಾರಿ ನಿತೇಶ್ ಪಾಟೀಲ್ ಹೇಳಿದ್ದಾರೆ.

ಮಹಾರಾಷ್ಟ್ರದ ಗಡಿ ಉಸ್ತುವಾರಿ ಸಚಿವರಾದ ಚಂದ್ರಕಾಂತ ಪಾಟೀಲ, ಶಂಭುರಾಜ್ ದೇಸಾಯಿ ಹಾಗೂ ಮಹಾರಾಷ್ಟ್ರ ಗಡಿ ಸಲಹಾ ಸಮಿತಿ ಅಧ್ಯಕ್ಷ, ಸಂಸದ ಶಂಭುರಾಜ್ ದೇಸಾಯಿ ಅವರಿಗೆ ಡಿ.6ರಂದು ಬೆಳಗಾವಿ ಪ್ರವೇಶಿಸಲು ಬಿಡುವುದಿಲ್ಲ ಎಂದು ಜಿಲ್ಲಾಧಿಕಾರಿ ನಿತೇಶ್ ಪಾಟೀಲ ಸ್ಪಷ್ಟಪಡಿಸಿದ್ದಾರೆ. ವಿವಿಧ ಕನ್ನಡ ಸಂಘಟನೆಗಳಿಂದ ಮನವಿ ಸ್ವೀಕರಿಸಿದ ನಂತರ ಮಾತನಾಡಿದ ಅವರು, ಗಡಿಯಲ್ಲಿ ಈಗ ಪರಿಸ್ಥಿತಿ ಬಿಗಡಾಯಿಸಿದೆ. ಇಂತಹ ವೇಳೆ ಬೆಳಗಾವಿಗೆ ಬಂದರೆ, ಕಾನೂನು ಮತ್ತು ಸುವ್ಯವಸ್ಥೆಗೆ ಧಕ್ಕೆ ಬರಲಿದೆ. ಮೂವರಿಗೆ ಸುರಕ್ಷತೆ ಒದಗಿಸಲು ಕಷ್ಟವಾಗಲಿದೆ. ಹಾಗಾಗಿ ಬೆಳಗಾವಿಗೆ ಬಾರದಿರುವುದೇ ಸೂಕ್ತ ಎಂದು ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಮಹಾರಾಷ್ಟ್ರ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ತಿಳಿಸಿದ್ದಾರೆ. ಹಾಗಾಗಿ ಸಚಿವರು ಮತ್ತು ಸಂಸದ ತಮ್ಮ ನಿರ್ಧಾರದಿಂದ ಹಿಂದೆ ಸರಿಯುತ್ತಾರೆ ಎಂಬ ನಿರೀಕ್ಷೆಯಿದೆ. ಇಷ್ಟಾಗಿಯೂ ಬರಲು ಮುಂದಾದರೆ, ಬೆಳಗಾವಿ ಪ್ರವೇಶಕ್ಕೆ ಬರಲು ಬಿಡುವುದಿಲ್ಲ. 144ನೇ ಕಲಂ ಪ್ರಕಾರ, ನಿಷೇಧಾಜ್ಞೆ ಜಾರಿಗೊಳಿಸುತ್ತೇವೆ. ಅಂತೆಯೇ ಮಹಾರಾಷ್ಟ್ರಕ್ಕೆ ಹೊಂದಿಕೊಂಡಿರುವ ಜಿಲ್ಲೆಯ ಗಡಿಗಳಲ್ಲಿ ಪೊಲೀಸರು ಬಿಗಿ ಭದ್ರತೆ ಕೈಗೊಂಡಿದ್ದಾರೆ ಎಂದರು.

ಅರ್ಹ ಮತದಾರರ ಹೆಸರು ಸೇರ್ಪಡೆಗೆ ಡಿ.8ರವರೆಗೆ ಅವಕಾಶ

ಮೈಸೂರು, ಡಿ.5(ಎಸ್‌ಬಿಡಿ)- ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ ಪ್ರಗತಿಯಲ್ಲಿದ್ದು ಅರ್ಹ ಮತದಾರರ ಹೆಸರು ಸೇರ್ಪಡೆಗೆ ಪ್ರಸಕ್ತ ಡಿ.8ರವರೆಗೆ ಕಾಲಾವಕಾಶವಿದೆ.



ಮೈಸೂರು ಜಿಲ್ಲೆಯಲ್ಲೂ ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ-2023ರ ಕಾರ್ಯ ಮುಂದುವರೆದಿದ್ದು, ಮತದಾರರ ಹಕ್ಕು ಮತ್ತು ಆಕ್ಷೇಪಣೆಗೆ ಅವಕಾಶ ನೀಡಲಾಗಿದೆ. ಈ ನಿಟ್ಟಿನಲ್ಲಿ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರಿದೆಯೇ ಎಂದು ಖಚಿತಪಡಿಸಿಕೊಂಡು, ಇಲ್ಲವಾದರೆ ಸೇರ್ಪಡೆ ಮಾಡಿಕೊಳ್ಳಬಹುದು. ಎಲ್ಲಾ ಅರ್ಹ ಮತದಾರರು ಮತದಾರರ ಪಟ್ಟಿಗೆ ತಮ್ಮ ಹೆಸರನ್ನು ಸೇರಿಸಲು ಡಿ.8ರವರೆಗೂ ಅವಕಾಶವಿದ್ದು, ಇದನ್ನು ಸದುಪಯೋಗಪಡಿಸಿಕೊಳ್ಳುವಂತೆ ಜಿಲ್ಲಾ ಚುನಾವಣಾಧಿಕಾರಿಗಳೂ ಆದ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ತಿಳಿಸಿದ್ದಾರೆ.

ಅನಿವಾಸಿ ಭಾರತೀಯರು: ಉದ್ಯೋಗ, ಶಿಕ್ಷಣ ಇನ್ನಿತರೆ ಕಾರಣದಿಂದ ದೇಶದಿಂದ ಹೊರಗಿರುವ ಜೊತೆಗೆ ಬೇರೆ ಯಾವುದೇ ದೇಶದ ಪೌರತ್ವವನ್ನು ಪಡೆಯದ ಅನಿವಾಸಿ ಭಾರತೀಯರು(Non Resident Indians) ನಿಯಮಾನುಸಾರ ಮತದಾರರ ಪಟ್ಟಿಯಲ್ಲಿ ಹೆಸರು ನೋಂದಣಿ ಮಾಡಿಕೊಳ್ಳಬಹುದು. ತಮ್ಮ ಪಾಸ್‌ಪೋರ್ಟ್‌ನಲ್ಲಿ ನಮೂದಿಸಲಾದ ವಿಳಾಸದಲ್ಲಿ ನಮೂನೆ-6-ಎ ಸಲ್ಲಿಸಿ ಮತದಾರರಾಗಿ ನೋಂದಾಯಿಸಲು ಅವಕಾಶವಿದೆ.

ಸೇವಾ ಮತದಾರರು: ಸೇವಾ ಮತದಾರರು(Service Voters) ಕೂಡ ನಿಯಮಾನುಸಾರ ಮತದಾರರ ಪಟ್ಟಿಯಲ್ಲಿ ಹೆಸರು ನೋಂದಣಿ ಮಾಡಿಕೊಳ್ಳಲು ಅವಕಾಶವಿದೆ. ಒಕ್ಕೂಟದ ಸಶಸ್ತ್ರ ಪಡೆಗಳ ಸದಸ್ಯರು, ಸೇನಾ ಕಾಯಿದೆ 1950ರಡಿ ಅಸ್ಸಾಂ ರೈಫಲ್ಸ್, ಸಿಆರ್‌ಪಿಎಫ್, ಬಿಎಸ್‌ಎಫ್, ಐಟಿಬಿಪಿ, ಎಸ್‌ಎಸ್‌ಬಿ, ಜಿಆರ್‌ಇಎಫ್, ಬಿಆರ್‌ಓ, ಸಿಐಎಸ್‌ಎಫ್ ಇನ್ನಿತರ ಪಡೆಯ ಸದಸ್ಯರು, ರಾಜ್ಯದ ಸಶಸ್ತ್ರ ಪೊಲೀಸ್ ಫೋರ್ಸ್ ಸದಸ್ಯರು ಹಾಗೂ ರಾಜ್ಯದ ಹೊರಗೆ ಸೇವೆ ಸಲ್ಲಿಸುತ್ತಿರುವವರು, ಭಾರತ ಸರ್ಕಾರದ ಅಡಿಯಲ್ಲಿ ದೇಶದ ಹೊರಗಿನ ಹುದ್ದೆಯಲ್ಲಿರುವವರು, ಹಾಗೂ ಅವರೊಂದಿಗೆ ವಾಸವಾಗಿರುವ ಅವರ ಪತ್ನಿ ಹೆಸರನ್ನು ತಮ್ಮ ಸೇನಾ ವ್ಯಾಪ್ತಿಯ ರೆಕಾರ್ಡ್ ಆಫೀಸ್ ಮೂಲಕ ಸೇರ್ಪಡೆ ಮಾಡಿಕೊಳ್ಳಬಹುದು ಎಂದು ತಿಳಿಸಿದ್ದಾರೆ.

2021ರ ಏಕಲವ್ಯ, ಕ್ರೀಡಾರತ್ನ ಪ್ರಶಸ್ತಿ ಪ್ರಕಟ

ಬೆಂಗಳೂರು: 2021ನೇ ಸಾಲಿನ ಏಕಲವ್ಯ, ಜೀವಮಾನ ಸಾಧನೆ, ಕರ್ನಾಟಕ ಕ್ರೀಡಾರತ್ನ ಪ್ರಶಸ್ತಿ ಹಾಗೂ 2022ನೇ ಸಾಲಿನ ಕ್ರೀಡಾ ಪೋಷಕ ಪ್ರಶಸ್ತಿ ಪ್ರಕಟವಾಗಿದೆ.



ಕ್ರೀಡಾ ಸಾಧಕರಿಗೆ ರಾಜ್ಯ ಸರ್ಕಾರ ಕೊಡಮಾಡುವ ಪ್ರತಿಷ್ಠಿತ ಪ್ರಶಸ್ತಿ ಇದಾಗಿದ್ದು, ಯುವಜನ ಸಬಲೀಕರಣ ಮತ್ತು ಕ್ರೀಡಾ ಸಚಿವ ಡಾ.ನಾರಾ0ಯಣಗೌಡ ಅವರು ಪ್ರಶಸ್ತಿಯನ್ನು ಪ್ರಕಟ ಮಾಡಿದರು. ಮಂಗಳವಾರ ರಾಜಭವನದ ಗಾಜಿನ ಮನೆಯಲ್ಲಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆಯಲಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕ್ರೀಡಾ ಸಚಿವ ನಾರಾಯಣಗೌಡ ಸೇರಿದಂತೆ ಹಲವು ಗಣ್ಯರು ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ.


ಕ್ರೀಡಾರತ್ನ ಪ್ರಶಸ್ತಿ: ಕವನ -ಬಾಲ್ ಬ್ಯಾಡ್ಮಿಂಟನ್, ಬಿ.ಗಜೇಂದ್ರ- ಗುಂಡು ಎತ್ತುವುದು, ಶ್ರೀಧರ್-ಕಂಬಳ, ರಮೇಶ್ ಮಳವಾಡ್-ಖೋಖೋ, ವೀರಭದ್ರ ಮುಧೋಳ್-ಮಲ್ಲಕಂಬ, ಖುಷಿ-ಯೋಗ, ಲೀನಾ ಅಂತೋಣಿ ಸಿದ್ದಿ-ಮಟ್ಟಿ ಕುಸ್ತಿ, ದರ್ಶನ್-ಕಬಡ್ಡಿ, **ಏಕಲವ್ಯ ಪ್ರಶಸ್ತಿ:** ಚೇತನ್-ಅಥ್ಲೆಟಿಕ್ಸ್, ಶಿಖಾ ಗೌತಮ್-ಬ್ಯಾಡ್ಮಿಂಟನ್, ಕೀರ್ತಿ ರಂಗಸ್ವಾಮಿ-ಸೈಕ್ಲಿಂಗ್, ಅದಿತ್ರಿ ವಿಕ್ರಾಂತ್ ಪಾಟೀಲ್-ಫೆನ್ಸಿಂಗ್, ಅಮೃತ್ ಮುದ್ರಾಬೆಟ್-ಜಿಮ್ನಾಸ್ಟಿಕ್, ಶೇಷೇಗೌಡ-ಹಾಕಿ, ರೇಷ್ಮಾ ಮರೂರಿ-ಲಾನ್ ಟೆನ್ನಿಸ್, ಟಿಜೆ ಶ್ರೀಜಯ್-ಶೂಟಿಂಗ್, ತನೀಷ್ ಜಾರ್ಜ್ ಮ್ಯಾಥ್ಯೂ-ಈಜು, ಯಶಸ್ವಿನಿ ಘೋರ್ಪಡೆ-ಟೇಬಲ್ ಟೆನ್ನಿಸ್, ಹರಿಪ್ರಸಾದ್-ವಾಲಿಬಾಲ್, ಸೂರಜ್ ಸಂಜು ಅಣ್ಣಿಕೇರಿ-ಕುಸ್ತಿ, ಹೆಚ್.ಎಸ್ ಸಾಕ್ಷತ್-ನೆಟ್ ಬಾಲ್, ಮನೋಜ್-ಬ್ಯಾಸ್ಕೆಟ್‌ಬಾಲ್, ರಾಘವೇಂದ್ರ-ಪ್ಯಾರಾ ಅಥ್ಲೆಟಿಕ್ಸ್. **ಜೀವಮಾನ ಸಾಧನೆ ಪ್ರಶಸ್ತಿ:** ಅಲ್ಕಾ ಎನ್ ಪಡುತಾರೆ -ಸೈಕ್ಲಿಂಗ್, ಬಿ.ಆನಂದ್‌ಕುಮಾರ್-ಪ್ಯಾರಾ ಬ್ಯಾಡ್ಮಿಂಟನ್, ಶೇಖರಪ್ಪ-ಯೋಗ, ಅಶೋಕ್-ವಾಲಿಬಾಲ್, ರವೀಂದ್ರಶೆಟ್ಟಿ-ಕಬಡ್ಡಿ, ಅಮರನಾಥ್-ಯೋಗ. **ಕ್ರೀಡಾ ಪೋಷಕ ಪ್ರಶಸ್ತಿ:** ಬಿ.ಎಂ.ಎಸ್. ಮಹಿಳಾ ಕಾಲೇಜು-ಬೆಂಗಳೂರು ನಗರ ಜಿಲ್ಲೆ, ಮಂಗಳ ಫ್ರೆಂಡ್ಸ್ ಸರ್ಕಲ್-ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ, ನಿಟ್ಟೆ ಎಜುಕೇಷನ್ ಟ್ರಸ್ಟ್-ಉಡುಪಿ

ಇಬ್ಬರ ಬಲಿಪಡೆದ ಚಿರತೆ ಸೆರೆಗೆ ಪೂರಕವಾಗಿ 40 ಗ್ರಾಮಗಳ ಕಬ್ಬು ಕಟಾವಿಗೆ ಡಿಸಿ ಆದೇಶ

ಮೈಸೂರು,ಡಿ.5(ಎಸ್‌ಬಿಡಿ)-ತಿ.ನರಸೀಪುರ ತಾಲೂಕಿನಲ್ಲಿ ಇಬ್ಬರ ಬಲಿ ಪಡೆದು ಆತಂಕ ಹುಟ್ಟಿಸಿರುವ ಚಿರತೆ ಸೆರೆ ಕಾರ್ಯಾಚರಣೆಗೆ ಅನುಕೂಲವಾಗುವ ನಿಟ್ಟಿನಲ್ಲಿ 40 ಗ್ರಾಮಗಳಲ್ಲಿರುವ ಕಬ್ಬು ಕಟಾವಿಗೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಸೋಮವಾರ ಆದೇಶಿಸಿದ್ದಾರೆ.







ಚಿರತೆ ದಾಳಿಯಿಂದ ಸೋಸಲೆ ಹೋಬಳಿ ಎಂ.ಎಲ್.ಹುಂಡಿ ಗ್ರಾಮದ ವಾಸಿ ಮಂಜುನಾಥ್ ಅ.31ರಂದು ಹಾಗೂ ಎಸ್.ಕೆಬ್ಬೆಹುಂಡಿ ಗ್ರಾಮದ ಮೇಘನಾ ಡಿ.1ರಂದು ಮೃತಪಟ್ಟಿದ್ದು, ತಾಲೂಕು ಜನರ ಆತಂಕ ಹೆಚ್ಚಿಸಿದೆ. ಚಿರತೆ ಸೆರೆಗೆ ನಿರಂತರ ಕಾರ್ಯಾಚರಣೆ ನಡೆಸಲಾಗುತ್ತಿದೆಯಾದರೂ ಅದು ಪತ್ತೆಯಾಗಿಲ್ಲ. ಚಿರತೆ ಹಾವಳಿ ಇರುವ ಪ್ರದೇಶದ ಗದ್ದೆ, ಹೊಲ, ತೋಟ, ಪಾಳುಬಿದ್ದ ಜಾಡುಗಳು, ಬೆಟ್ಟಗುಡ್ಡಗಳು, ಅವುಗಳ ತಪ್ಪಲು ಸೇರಿದಂತೆ ಎಲ್ಲಾ ಕಡೆಯಲ್ಲೂ ಅರಣ್ಯ ಇಲಾಖೆ ತಂಡಗಳು ಕಾರ್ಯಾಚರಣೆ ನಡೆಸುತ್ತಿವೆ. ಇಲಾಖಾ ವಾಹನಗಳಲ್ಲಿ ಸುಸಜ್ಜಿತ ತಂಡಗಳು ಗಸ್ತು ನಡೆಸುತ್ತಿವೆ. ಆ ತಂಡಗಳು ನೀಡಿರುವ ವರದಿಯಂತೆ ತಾಲೂಕು ವ್ಯಾಪ್ತಿಯ 195 ಗ್ರಾಮಗಳ ಪೈಕಿ 40 ಗ್ರಾಮಗಳ ಕಬ್ಬಿನ ಬೆಳೆ ಸಕಾಲ ಕಟಾವು ಮಾಡಿದ್ದಲ್ಲಿ ಕಾರ್ಯಾಚರಣೆಗೆ ಅನುಕೂಲವಾಗಲಿದ್ದು, ಈ ಸಂಬಂಧ ನಿರ್ದೇಶನ ನೀಡುವಂತೆ ಮೈಸೂರು ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಮನವಿ ಮಾಡಿದ್ದರು. ಈ ಹಿನ್ನೆಲೆಯಲ್ಲಿ ತಿ.ನರಸೀಪುರ ತಾಲೂಕು ವ್ಯಾಪ್ತಿಯ ಗ್ರಾಮಗಳಲ್ಲಿ ಚಿರತೆ ಹಾವಳಿ ಹೆಚ್ಚಾಗಿದೆ. ಸಾರ್ವಜನಿಕರು ಹಾಗೂ ಜೀವಸಂಕುಲಗಳ ಪ್ರಾಣಹಾನಿ ತಡೆಯುವುದರ ಜೊತೆಗೆ ಸಾರ್ವಜನಿಕರಲ್ಲಿರುವ ಭಯ ಹೋಗಲಾಡಿಸಲು ಶೀಘ್ರ ಚಿರತೆ ಸೆರೆ ಹಿಡಿಯಬೇಕಿರುವುದರಿಂದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕೋರಿಕೆಯಂತೆ 23 ಗ್ರಾಪಂ ವ್ಯಾಪ್ತಿಯ ತುರುಗನೂರು, ಯಾಚನಹಳ್ಳಿ, ಮಾರಗೌಡನಹಳ್ಳಿ, ದಾಸೇಗೌಡನಹಳ್ಳಿ, ಸಿ.ವಿ.ಕೊಪ್ಪಲು, ಕೇತುಪುರ, ಉಕ್ಕಲಗೆರೆ, ಎಂ.ಎಲ್.ಹುಂಡಿ, ಸೋಮನಾಥಪುರ, ಕಗ್ಗಲೀಪುರ, ದೊಡ್ಡೇಬಾಗಿಲು, ಹೊರಳಹಳ್ಳಿ, ಕರುಗಹಳ್ಳಿ, ಚಿದರವಳ್ಳಿ, ಎಸ್.ದೊಡ್ಡಪುರ, ಬೋಳೇಗೌಡನಹುಂಡಿ, ಕೆಂಪನಪುರ, ರಾಮೇಗೌಡನಪುರ, ಚಿಕ್ಕಕಲ್ಲುನೀ, ನರಗ್ಯಾತನಹಳ್ಳಿ, ಹಲವಾರ, ಚಿಟಿಗಯ್ಯನಕೊಪ್ಪಲು, ನಾಗಲಗೆರೆ, ಮುಸುವಿನ ಕೊಪ್ಪಲು, ಸೋಸಲೆ, ಬೈನಹಳ್ಳಿ, ವೀರಪ್ಪೊಡೆಯರ್ ಹುಂಡಿ, ಕಾಳಬಸವನಹುಂಡಿ, ಕುರುಬಾಳನಹುಂಡಿ, ಗಾಡಿಜೋಗಿ ಹುಂಡಿ, ಮಾದಿಗಹಳ್ಳಿ, ಸುಜಲೂರು, ಹ್ಯಾಕನೂರು, ತುಂಬಲ, ಯರಗನಹಳ್ಳಿ, ಸೀಹಳ್ಳಿ, ಮಾದಾಪುರ, ಹಿರಿಯೂರು, ಮೂಗೂರು, ಕೂಡ್ಲೂರು ಸೇರಿ ಒಟ್ಟು 40 ಗ್ರಾಮಗಳಲ್ಲಿ ರೈತರು ಬೆಳೆದಿರುವ ಪಕ್ವಗೊಂಡ ಕಬ್ಬನ್ನು ಮೊದಲ ಆದ್ಯತೆಯಲ್ಲಿ ಶೀಘ್ರ ಕಟಾವು ಮಾಡಿಸಿ, ಕಾರ್ಖಾನೆಗೆ ಸಾಗಿಸಬೇಕೆಂದು ಜಿಲ್ಲಾಧಿಕಾರಿಗಳು ಆದೇಶದಲ್ಲಿ ತಿಳಿಸಿದ್ದಾರೆ.

ಇಂದು ಶಿವ ದೀಪೋತ್ಸವ

ಮೈಸೂರು, ಡಿ. 5- ಶ್ರೀ ಸುತ್ತೂರು ಕ್ಷೇತ್ರದಲ್ಲಿ ನಾಳೆ (ಡಿ.6) ಸಂಜೆ ಶಿವ ದೀಪೋತ್ಸವ (ಕೃತ್ತಿಕೋತ್ಸವ)ವನ್ನು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳ ಸಾನ್ನಿಧ್ಯದಲ್ಲಿ ಏರ್ಪಡಿಸಲಾಗಿದೆ.

ಸಂಜೆ 6ಕ್ಕೆ ಜೆಎಸ್‌ಎಸ್ ವಸತಿ ಶಾಲಾ ಸಂಗೀತ ಶಿಕ್ಷಕರು ಹಾಗೂ ಮಕ್ಕಳಿಂದ ಸಾಮೂಹಿಕ ಪ್ರಾರ್ಥನೆ ಇರುತ್ತದೆ. 6.35ಕ್ಕೆ ಜಾತ್ರಾ ಮಹೋತ್ಸವ ಪ್ರಸಾರ ರಥಕ್ಕೆ ಚಾಲನೆ ನೀಡಲಾಗುವುದು. ರಾತ್ರಿ 7ಕ್ಕೆ ಸಾಹಿತಿಗಳು ಹಾಗೂ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಪ್ರೊ. ಎಂ. ಕೃಷ್ಣೇಗೌಡರು 'ಬೆಳಕಿನ ಉತ್ಸವ' ವಿಷಯ ಕುರಿತು ಉಪನ್ಯಾಸ ನೀಡಲಿದ್ದಾರೆ.

ರಾತ್ರಿ 8ಕ್ಕೆ ಮಹಾಮಂಗಳಾರತಿ, ಪ್ರಾಕಾರೋತ್ಸವ ಹಾಗೂ ದೀಪೋತ್ಸವ ಜರುಗಲಿವೆ. ಈ ಕಾರ್ಯಕ್ರಮವನ್ನು https://www.facebook.com/JSSMVP http://Youtube.com/c/JSSMahavidyapeethaonline ಲಿಂಕ್‌ಗಳ ಮೂಲಕ ಆನ್‌ಲೈನ್‌ನಲ್ಲಿ ವೀಕ್ಷಿಸಬಹುದಾಗಿದೆ.

ವಿಜೃಂಭಣೆಯ ಹನುಮ ಜಯಂತಿ

ಕುಶಾಲನಗರ, ಡಿ.5– ಕುಶಾಲನಗರದ ರಥಬೀದಿಯಲ್ಲಿರುವ ಶ್ರೀ ಆಂಜನೇಯ ದೇವಾಲಯದಲ್ಲಿ ಹನುಮ ಜಯಂತಿ ಶ್ರದ್ಧಾಭಕ್ತಿಯಿಂದ ಸೋಮವಾರ ನಡೆಯಿತು.



ಶ್ರೀ ರಾಮಾಂಜನೇಯ ಉತ್ಸವ ಸಮಿತಿ, ದೇವಸ್ಥಾನ ಸೇವಾ ಟ್ರಸ್ಟ್ ವತಿಯಿಂದ ಹಮ್ಮಿಕೊಂಡಿದ್ದ 37ನೇ ವರ್ಷದ ಅದ್ಧೂರಿ ಹನುಮ ಜಯಂತೋತ್ಸವ ಅಂಗವಾಗಿ ದೇವಾಲಯದಲ್ಲಿ ಸೋಮವಾರ ಬೆಳಗ್ಗೆ ಪಂಚಾಮೃತ ಅಭಿಷೇಕ, ಮಧ್ಯಾಹ್ನ ಮಹಾಮಂಗಳಾರತಿ ಬಳಿಕ ಪಾನಕ, ವಿತರಣೆ ಸೇರಿದಂತೆ ಗಾಯತ್ರಿ ಕಲ್ಯಾಣ ಮಂಟಪದಲ್ಲಿ ನೆರೆದಿದ್ದ ಭಕ್ತಾದಿಗಳಿಗೆ ಅನ್ನ ಸಂತರ್ಪಣೆ ನಡೆಯಿತು.

ರಾಧಾಕೃಷ್ಣ ಮತ್ತು ಮಯೂರ್ ಭಟ್ ಪೂಜಾ ವಿಧಿ ನೆರವೇರಿಸಿದರು. ಸಂಜೆ ಅಲಂಕೃತ ಮಂಟಪದಲ್ಲಿ ಆಂಜನೇಯ ಸ್ವಾಮಿಯ ಉತ್ಸವ ಮೂರ್ತಿ ಮೆರವಣಿಗೆ ಸೇರಿದಂತೆ ಸುತ್ತಮುತ್ತಲ ಗ್ರಾಮಗಳ ವಿವಿಧ ದೇವಾಲಯಗಳ ಉತ್ಸವ ಮಂಟಪಗಳ ಶೋಭಾಯಾತ್ರೆ ವಿಜೃಂಭಣೆಯಿಂದ ಜರುಗಿತು.

ಉತ್ಸವ ಸಮಿತಿ ಅಧ್ಯಕ್ಷ ಪ್ರಶಾಂತ್ ವಿ.ಹೆಚ್, ಕಾರ್ಯದರ್ಶಿ ನವನೀತ್ ಪಿ.ಪಿ, ಉಪಾಧ್ಯಕ್ಷ ಅನುದೀಪ್ ಕೆ.ವಿ. ಸಹ ಸಂಚಾಲಕ ಹರೀಶ್ ಎಲ್, ಸಹ ಕಾರ್ಯದರ್ಶಿ ವಿನು ಟಿ., ಖಜಾಂಚಿ ಪ್ರವೀಣ್ ಎಸ್., ಸಲಹೆಗಾರ ರಾಜೀವ, ಸಂಚಾಲಕ ಚಂದ್ರಶೇಖರ್ ಕೆ.ಎಸ್., ನಿರ್ದೇಶಕರಾದ ಪ್ರಸಾದ್ ವಿ.ಎನ್., ಪರಮೇಶ್ ಡಿ.ಆರ್.ರಘು ಡಿ.ವಿ ಸೇರಿದಂತೆ ಹನುಮಂತೋತ್ಸವ ದಶ ಮಂಟಪಗಳ ಸಮಿತಿ ಪ್ರಮುಖರು, ಇತರೆ ಪದಾಧಿಕಾರಿಗಳು ಇದ್ದರು. ಕುಶಾಲನಗರದ ರಥಬೀದಿಯಲ್ಲಿರುವ ಶ್ರೀ ಆಂಜನೇಯ ದೇವಾಲಯದಲ್ಲಿ ಹನುಮ ಜಯಂತಿ ಶ್ರದ್ಧಾಭಕ್ತಿಯಿಂದ ಸೋಮವಾರ ನಡೆಯಿತು.

ಡಿ.10, 11ಕ್ಕೆ ಕೊಡಗು ಕಾಫಿ ಉತ್ಸವ

ಮಡಿಕೇರಿ, ಡಿ.5– ಪಶ್ಚಿಮಘಟ್ಟ ಸಾಲಿನ ಕೊಡಗಿನ ಸ್ವಾದಭರಿತ ವೈಶಿಷ್ಟ್ಯ ಪೂರ್ಣವಾದ ಕಾಫಿ ಮತ್ತು ಅದರ ಮೌಲ್ಯವರ್ಧಿತ ಉತ್ಪನ್ನಗಳನ್ನು ಹೊರ ಜಗತ್ತಿಗೆ ಪರಿಚಯಿಸಲು ಮತ್ತು ಆಂತರಿಕ ಕಾಫಿ ಮಾರುಕಟ್ಟೆಯನ್ನು ಬಲಪಡಿಸುವ ಪ್ರಮುಖ ಉದ್ದೇಶದಿಂದ ಡಿ.10ಮತ್ತು 11ರಂದು ರಾಜಾಸೀಟಿನಲ್ಲಿ 'ಕೊಡಗು ಕಾಫಿ ಉತ್ಸವ–2022' ಅನ್ನು ಆಯೋಜಿಸಲಾಗಿದೆ ಎಂದು ಜಿಲ್ಲಾಧಿಕಾರಿ ಡಾ. ಬಿ.ಸಿ. ಸತೀಶ ತಿಳಿಸಿದ್ದಾರೆ.



ನಗರದ ಕಾಫಿ ಮಂಡಳಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಜಿಲ್ಲಾಧಿಕಾರಿ ಡಾ. ಬಿ.ಸಿ. ಸತೀಶ ಅವರು, ಜಿಲ್ಲಾಡಳಿತ, ಕಾಫಿ ಮಂಡಳಿ ಮತ್ತು ತೋಟಗಾರಿಕಾ ಇಲಾಖೆಯ ಸಂಯುಕ್ತಾಶ್ರಯದಲ್ಲಿ ಆಯೋಜಿತ ಈ ಕಾಫಿ ಉತ್ಸವದಲ್ಲಿ ಕಾಫಿ ಉದ್ಯಮದ ಸರಪಳಿಯಲ್ಲಿ ಬರುವ ಅತ್ಯುತ್ತಮ ಕಾಫಿ ಬ್ರ್ಯಾಂಡ್‌ಗಳು, ಸ್ವಸಹಾಯ ಗುಂಪುಗಳ ಕಾಫಿ ಉತ್ಪನ್ನಗಳು, ರೋಸ್ಟರ್‌ಗಳು, ಬ್ರೂಯಿಂಗ್ ಮೆಷಿನರಿಗಳು, ಮೌಲ್ಯವರ್ಧಿತ ಕಾಫಿ ಉತ್ಪನ್ನಗಳ ಪ್ರದರ್ಶನ ನಡೆಯಲಿದೆ ಎಂದು ತಿಳಿಸಿದರು.

ಈಗಾಗಲೇ 2 ದಿನಗಳ ಕಾಲ ನಡೆಯಲಿರುವ ಕಾಫಿ ಉತ್ಸವದಲ್ಲಿ ಕಾಫಿ ಉದ್ಯಮದಲ್ಲಿ ತೊಡಗಿಸಿಕೊಂಡಿರುವ ದೇಶದ ವಿವಿಧೆಡೆಗಳ ಖಾಸಗಿ ಸಂಸ್ಥೆಗಳನ್ನು ಆಹ್ವಾನಿಸಲಾಗಿದೆ. ಇದರ ಪ್ರಯೋಜನವನ್ನು ಪ್ರತಿಯೊಬ್ಬರು ಪಡೆದುಕೊಳ್ಳುವಂತೆ ಕರೆ ನೀಡಿದರು.

ಅತೀ ಹೆಚ್ಚು ಕಾಫಿಯನ್ನು ಉತ್ಪಾದಿಸುತ್ತಿರುವ ಕೊಡಗಿನಲ್ಲಿ ಅದನ್ನು ಬೆಳೆಯುವ ರೀತಿ, ಅಂತಿಮವಾಗಿ ಕಾಫಿ ಮಾರುಕಟ್ಟೆಗೆ ಬರುವ ಕ್ರಮ, ಮೌಲ್ಯವರ್ಧಿತ ಕಾಫಿ ಉತ್ಪನ್ನಗಳನ್ನು ಪ್ರವಾಸಿಗರಿಗೆ ಪರಿಚಯಿಸುವ ಪ್ರಯತ್ನ ಕಾಫಿ ಮೇಳದ ಉದ್ದೇಶವಾಗಿದೆ. ಈ ಮೇಳದಲ್ಲಿ ಮಳಿಗೆಗಳ ಬದಲಾಗಿ ರಾಜಾಸೀಟಿನಲ್ಲಿ ಪ್ರಸ್ತುತ ಇರುವ 4 ವ್ಯೂ ಪಾಯಿಂಟ್‌ಗಳು ಮತ್ತು ಅದನ್ನು ಸಂಪರ್ಕಿಸುವ ಹಾದಿಯಲ್ಲಿ ತಾತ್ಕಾಲಿಕವಾಗಿ ಅಳವಡಿಸುವ ಛತ್ರಿಗಳ ಅಡಿಯಲ್ಲಿ ವಿವಿಧ ಉತ್ಪನ್ನಗಳ ಪ್ರದರ್ಶನ ನಡೆಯಲಿದೆ ಎಂದು ವಿವರಿಸಿದರು.

ಜೇನು, ವೈನ್ ಮೇಳ: ಕಾಫಿ ಮೇಳದ ರೀತಿಯಲ್ಲೇ ಡಿ.24 ಮತ್ತು 25ರಂದು ಕೊಡಗಿನ ಜೇನು ಕೃಷಿಯ ಬಗ್ಗೆ ಬೆಳಕು ಚೆಲ್ಲುವ 'ಜೇನು ಮೇಳ'ವನ್ನು ಆಯೋಜಿಸಲಾಗುತ್ತದೆ ಎಂದು ಜಿಲ್ಲಾಧಿಕಾರಿ ಡಾ. ಬಿ.ಸಿ. ಸತೀಶ ಅವರು ತಿಳಿಸಿದರು. ಕೊಡಗಿನ ಕಾಫಿ, ಜೇನು ಮೊದಲಾದವುಗಳ ಬಗ್ಗೆ ಮಾಹಿತಿ ನೀಡುವ ಮೇಳಗಳ ರೀತಿಯಲ್ಲೇ ಮುಂದಿನ ಸಾಲಿನ ಜನವರಿಯ ಎರಡನೇ ಶನಿವಾರ ಮತ್ತು ಭಾನುವಾರಗಳಂದು 'ಕೊಡಗಿನ ವೈನ್ ಮೇಳ'ವನ್ನು ನಡೆಸುವ ಉದ್ದೇಶವು ಇದೆ. ಆ ಮೂಲಕ ಸ್ಥಳೀಯ ಉದ್ಯಮಗಳ ಉತ್ತೇಜನಕ್ಕೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವ ವಿಶ್ವಾಸ ವ್ಯಕ್ತಪಡಿಸಿದರು.

ಕಾಫಿ ಔಟ್‌ಲೆಟ್ ಚಿಂತನೆ: ಕೊಡಗಿನ ಕಾಫಿ ಕೃಷಿ ಸಂಸ್ಕೃತಿ, ಕಾಫಿಯ ಉತ್ಪನ್ನಗಳು ಸೇರಿದಂತೆ, ಇದಕ್ಕೆ ಸಂಬಂಧಿಸಿದ ವಿವಿಧ ಮಾಹಿತಿಗಳನ್ನು ಜನರಿಗೆ ತಲುಪಿಸುವ ನಿಟ್ಟಿನಲ್ಲಿ ಜಿಲ್ಲಾ ಕೇಂದ್ರ ಮಡಿಕೇರಿಯಲ್ಲಿ 'ಕಾಫಿ ಔಟ್‌ಲೆಟ್' ಆರಂಭದ ಬಗ್ಗೆಯೂ ಚಿಂತನೆ ನಡೆದಿದೆ. ಇಂತಹ ಕಾಫಿ ಔಟ್‌ಲೆಟ್‌ನ್ನು ಸರ್ಕಾರದಿಂದ ಅನುಮೋದಿತ ಸಂಸ್ಥೆಗಳ ಮೂಲಕ ನಡೆಸಲಾಗುತ್ತದೆ ಎಂದು ಅವರು ಮಾಹಿತಿ ನೀಡಿದರು.

ಕಾಫಿಯ ಆಂತರಿಕ ಬಳಕೆ: ಕಾಫಿ ಮಂಡಳಿಯ ಸಹಾಯಕ ನಿರ್ದೇಶಕ ಚಂದ್ರಶೇಖರ್ ಮಾತನಾಡಿ, ಒಟ್ಟು ದೇಶದಲ್ಲಿ ಬೆಳೆಯುವ ಕಾಫಿಯಲ್ಲಿ ಶೇ.30 ರಷ್ಟು ಕಾಫಿ ಆಂತರಿಕ ಬಳಕೆಯಾಗುತ್ತಿದೆ. ಉಳಿದ ಶೇ.70ರಷ್ಟು ಕಾಫಿ ರಫ್ತಾಗುತ್ತದೆ ಎಂದು ತಿಳಿಸಿದರು. ಕಾಫಿಯ ಆಂತರಿಕ ಬಳಕೆ ಹೆಚ್ಚಳಕ್ಕೆ ಪೂರಕವಾಗಿ ಕಾಫಿ ಮೇಳವನ್ನು ಆಯೋಜಿಸುತ್ತಿರುವುದಾಗಿ ಹೇಳಿದರು. ಸುದ್ದಿಗೋಷ್ಠಿಯಲ್ಲಿ ತೋಟಗಾರಿಕಾ ಇಲಾಖಾ ಸಹಾಯಕ ನಿರ್ದೇಶಕ ಪ್ರಮೋದ್ ಉಪಸ್ಥಿತರಿದ್ದರು.

> ಕೊಡಗು ಜಿಲ್ಲಾ ವ್ಯಾಪ್ತಿಯಲ್ಲಿ ಅತೀ ಹೆಚ್ಚಿನ ಮಳೆಯಿಂದ ಫಸಲು ಹಾನಿಯಾಗಿರುವ ಹಿನ್ನೆಲೆಯಲ್ಲಿ 4079 ಬೆಳೆಗಾರರಿಗೆ 12.70 ಕೋಟಿ ಪರಿಹಾರದ ಮೊತ್ತವನ್ನು ಬಿಡುಗಡೆ ಮಾಡಲಾಗಿದೆ. ಜಿಲ್ಲಾ ವ್ಯಾಪ್ತಿಯಲ್ಲಿ ಭಾರೀ ಮಳೆಯಿಂದ 52 ಸಾವಿರ ಹೆಕ್ಟೇರ್ ವ್ಯಾಪ್ತಿಯಲ್ಲಿ ಫಸಲು ಹಾನಿಯಾಗಿದೆ. ಈ ಬಗ್ಗೆ ಬೆಳೆಗಾರರಿಂದ ಮಾಹಿತಿಯನ್ನು ಪಡೆಯಲಾಗಿದ್ದು, ಮುಂದಿನ ದಿನಗಳಲ್ಲಿ ಪರಿಹಾರ ಲಭ್ಯವಾಗಲಿದೆ.
> -ಡಾ. ಬಿ.ಸಿ. ಸತೀಶ, ಜಿಲ್ಲಾಧಿಕಾರಿ, ಕೊಡಗು.

ಮಸೀದಿಯಲ್ಲಿ ಕಳವು ಮಾಡಿದ್ದ ಆರೋಪಿ ಬಂಧನ



ಗೋಣಿಕೊಪ್ಪ, ಡಿ.5– ಗೋಣಿಕೊಪ್ಪ ಹಿದಾಯಿ ಮಸೀದಿಯ ಕಳವು ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿ ವಿರಾಜಪೇಟೆ ನಿವಾಸಿ ಮಹಮ್ಮದ್ ಹಬೀದ್ (32) ಎಂಬಾತನನ್ನು ಗೋಣಿಕೊಪ್ಪ ಪೊಲೀಸರು ಬಂಧಿಸಿದ್ದಾರೆ.

ನವೆಂಬರ್ 28 ರಂದು ಸುಮಾರು 70 ಸಾವಿರ ಮೌಲ್ಯದ ಮೊಬೈಲ್, ಆಂಪ್ಲಿಫ್ಲೇಯರ್ ಹಾಗೂ 7 ಸಾವಿರ ನಗದು ಕಳವು ಮಾಡಲಾಗಿತ್ತು. ಈ ಬಗ್ಗೆ ಗೋಣಿಕೊಪ್ಪ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ಕ್ರಮಕ್ಕೆ ಮುಂದಾಗಿದ್ದರು. ಸೋಮವಾರ ಬಂಧಿಸಲಾಯಿತು. ಆರೋಪಿಯನ್ನು ಬಂಧಿಸಿ ಪೊಲೀಸರು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದ್ದು, ಆತನನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ. ವಿರಾಜಪೇಟೆ ಪೊಲೀಸ್ ಡಿವೈಎಸ್‌ಪಿ ನಿರಂಜನ್ ರಾಜ್ ಅರಸ್ ಮಾರ್ಗದರ್ಶನದಲ್ಲಿ ಗೋಣಿಕೊಪ್ಪ ವೃತ್ತ ನಿರೀಕ್ಷಕ ಗೋವಿಂದರಾಜು, ಉಪನಿರೀಕ್ಷಕ ದೀಕ್ಷಿತ್‌ಕುಮಾರ್, ಸಹಾಯಕ ಉಪನಿರೀಕ್ಷಕ ಸಾಬು, ಸಿಬ್ಬಂದಿ ಹೆಚ್. ಕೆ. ಕೃಷ್ಣ, ಮಣಿಕಂಠ, ಕೃಷ್ಣಮೂರ್ತಿ, ಅನೀಫ್, ಪುನೀತ್ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಕೂಡ್ಲೂರು ಕೈಗಾರಿಕಾ ಬಡಾವಣೆ: ನಾಗರಹಾವು ರಕ್ಷಣೆ



ಕುಶಾಲನಗರ, ಡಿ.5– ಸಮೀಪದ ಕೂಡ್ಲೂರು ಕೈಗಾರಿಕಾ ಬಡಾವಣೆಯ ವಿಠಲ ಅವರ ಕಾರ್ಖಾನೆಯಲ್ಲಿದ್ದ ಭಾರಿ ಗಾತ್ರದ ನಾಗರ ಹಾವನ್ನು ಸ್ನೇಕ್ ಅಬ್ದುಲ್ ಗಫೂರ್ ಶನಿವಾರ ಹಿಡಿದು ಸಂರಕ್ಷಣೆ ಮಾಡಿ ಅರಣ್ಯ ಪ್ರದೇಶಕ್ಕೆ ಬಿಟ್ಟಿದ್ದಾರೆ.

ಕಾರ್ಖಾನೆಯಲ್ಲಿ ಬೆಳಿಗ್ಗೆ 5 ಅಡಿ ಉದ್ದದ ನಾಗರಹಾವು ಸೇರಿಕೊಂಡಿದ್ದು ನಾಗರಹಾವನ್ನು ಕಂಡು ಕಂಪನಿಯಲ್ಲಿ ಕೆಲಸ ಮಾಡುವವರು ಭಯಭೀತರಾದರು. ತಕ್ಷಣ ವಿಠಲ ಅವರು ಸ್ನೇಕ್ ಅಬ್ದುಲ್ ಗಫೂರ್ ಅವರಿಗೆ ಕರೆ ಮಾಡಿದರು. ಮಾಹಿತಿ ತಿಳಿದು ಅಲ್ಲಿಗೆ ಬಂದ ಗಫೂರ್ 16 ವರ್ಷದ ಹಳೆಯ ನಾಗರಹಾವನ್ನು ಹಿಡಿದು ಅರಣ್ಯಾಧಿಕಾರಿಗಳ ಸಮ್ಮುಖದಲ್ಲಿ ಆನೆಕಾಡು ಪ್ರದೇಶಕ್ಕೆ ಬಿಟ್ಟರು.

ತಂಗಮ್ಮ ನಿಧನ

ನಾಪೋಕ್ಲು, ಡಿ.5– ಇಲ್ಲಿಗೆ ಸಮೀಪದ



ಎಮ್ಮೆಮಾಡು ಗ್ರಾಮದ ದಿವಂಗತ ಪೊಲೀಸ್ ದಫೇದಾರ ಚೇಯಕ್ ಪೂವಂಡ ಸೋಮಯ್ಯ ಅವರ ಧರ್ಮಪತ್ನಿ, ಕಟ್ಟಿ ಮಂಜುನಾಥ ಅವರ ತಾಯಿ ತಂಗಮ್ಮ (80) ಶನಿವಾರ ನಿಧನರಾದರು. ಮೃತರ ಅಂತ್ಯಕ್ರಿಯೆ ಭಾನುವಾರ ಸ್ವಗ್ರಾಮದಲ್ಲಿ ನೆರವೇರಿತು. ಮೃತರು ಪುತ್ರ, ಪುತ್ರಿ ಹಾಗೂ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

ಫ್ಲೆಕ್ಸ್, ಬಂಟಿಂಗ್ಸ್ ತೆರವುಗೊಳಿಸಿದ್ದಕ್ಕೆ ಕ್ಷಮೆಯಾಚಿಸಿ, ಪುನರ್ ಅಳವಡಿಸಿದ ಪುರಸಭೆ ಸಿಬ್ಬಂದಿ

ಅಚ್ಚರಿ ಮೂಡಿಸಿರುವ ಶ್ರೀರಂಗಪಟ್ಟಣ ಪುರಸಭೆ ಆಡಳಿತದ ವರ್ತನೆ





ಶ್ರೀರಂಗಪಟ್ಟಣ, ಡಿ.5– ಸೋಮವಾರ ಬೆಳ್ಳಂಬೆಳಗ್ಗೆ ಶ್ರೀರಂಗಪಟ್ಟಣ ಪುರಸಭೆ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರು ಭಾನುವಾರ ಹಿಂದೂಪರ ಸಂಘಟನೆಗಳು ಅಳವಡಿಸಿದ್ದ ಫ್ಲೆಕ್ಸ್ ಹಾಗೂ ಬಂಟಿಂಗ್ಸ್‌ಗಳನ್ನು ತೆರವುಗೊಳಿಸುವ ಕಾರ್ಯವನ್ನು ಚುರುಕಾಗಿ ಕೈಗೊಂಡಿದ್ದರು. ಆದರೆ, ಮಧ್ಯಾಹ್ನದ ವೇಳೆಗೆ ಪುರ ಸಭಾ ಮುಖ್ಯಾಧಿಕಾರಿಗಳು ಹಿಂದೂ ಸಂಘಟನೆಗಳವರ ಕ್ಷಮೆ ಕೋರಿ ತೆರವುಗೊಳಿಸಿದ ಸ್ಥಳದಲ್ಲೇ ತಮ್ಮದೇ ಸಿಬ್ಬಂದಿಗಳಿಂದ ಫ್ಲೆಕ್ಸ್ ಹಾಗೂ ಬಂಟಿಂಗ್ಸ್‌ಗಳನ್ನು ಅಳವಡಿಸಿದ ವಿಲಕ್ಷಣ ಘಟನೆ ನಡೆದಿದೆ.

ಇಂದು ಬೆಳಗ್ಗೆ ಶ್ರೀರಂಗಟ್ಟಣದ ಜಾಮೀಯಾ ಮಸೀದಿ ವೃತ್ತದ ಬಳಿ ಬಂದಿಗೌಡ ವೃತ್ತದಲ್ಲಿ ಅಳವಡಿಸಿದ್ದ ಕೇಸರಿ ಬಂಟಿಂಗ್ಸ್ ಹಾಗೂ ಹನುಮನ ಫ್ಲೆಕ್ಸ್‌ಗಳನ್ನು ಪುರಸಭಾಧಿಕಾರಿಗಳು ತೆರವುಗೊಳಿಸಿದರು. ಈ ಕಾರ್ಯಕ್ಕೆ ಸ್ಥಳೀಯ ಪೊಲೀಸರು ಕೂಡ ಬಂದೋಬಸ್ತ್ ಒದಗಿಸಿದ್ದರು. ಈ ವಿಷಯ ತಿಳಿಯುತ್ತಿದ್ದಂತೆಯೇ ಹಿಂದೂ ಜಾಗರಣಾ ವೇದಿಯ ಜಿಲ್ಲಾ ಕಾರ್ಯದರ್ಶಿ ಚಂದನ್ ನೇತೃತ್ವದಲ್ಲಿ ಹಿಂದೂ ಸಂಘಟನೆಗಳ ಕಾರ್ಯಕರ್ತರು ಪುರಸಭಾ ಕಚೇರಿ ಎದುರು ಪ್ರತಿಭಟನೆ ನಡೆಸಿದರು. ಈ ಪ್ರತಿಭಟನೆಗೆ ಮಣಿದ ಮುಖ್ಯಾಧಿಕಾರಿಗಳು ಮಧ್ಯಾಹ್ನದ ವೇಳೆಗೆ ಪ್ರತಿಭಟನಾಕಾರರನ್ನು ಉದ್ದೇಶಿಸಿ, 'ಇದರಲ್ಲಿ ನಮ್ಮದೇನೂ ತಪ್ಪಿಲ್ಲ. ತಾಲೂಕು ಆಡಳಿತದ ಸೂಚನೆಯಂತೆ ಕೆಲಸ ಮಾಡಿದ್ದೇವೆ. ಇದರಿಂದ ಹಿಂದೂಪರ ಸಂಘಟನೆಗಳವರಿಗೆ ನೋವಾಗಿದ್ದರೇ ಕ್ಷಮೆ ಕೋರುತ್ತೇನೆ' ಎಂದು ಹೇಳಿದ್ದಲ್ಲದೇ ತೆರವುಗೊಳಿಸಿದ್ದ ಸ್ಥಳದಲ್ಲಿ ತಮ್ಮ ಸಿಬ್ಬಂದಿ ಮೂಲಕವೇ ಬಂಟಿಂಗ್ಸ್ ಮತ್ತು ಫ್ಲೆಕ್ಸ್‌ಗಳನ್ನು ಮತ್ತೆ ಅಳವಡಿಸಲು ಕ್ರಮ ಕೈಗೊಂಡರು.

ಈ ವೇಳೆ ಮಾಧ್ಯಮಗಳೊಂದಿಗೆ ಮಾತನಾಡಿದ ಹಿಂದೂ ಜಾಗರಣಾ ವೇದಿಕೆ ಜಿಲ್ಲಾ ಕಾರ್ಯದರ್ಶಿ ಚಂದನ್, ಇದು ಹಿಂದೂ ಕಾರ್ಯಕರ್ತರನ್ನು ಹತ್ತಿಕ್ಕುವ ಕೆಲಸವಾಗಿದೆ. ತಪ್ಪಿತಸ್ಥರು ಯಾರೇ ಆದರೂ ಅವರ ವಿರುದ್ಧ ಹಿಂದೂ ಜಾಗರಣಾ ವೇದಿಕೆ ಕಾನೂನು ಕ್ರಮಕ್ಕೆ ಮುಂದಾಗಲಿದೆ ಎಂದರು. ಅಲ್ಲದೇ ಹನುಮ ಸಂಕೀರ್ತನಾ ಯಾತ್ರೆಯಲ್ಲಿ ಭಾಗವಹಿಸಿದ್ದ ಹನುಮ ಭಕ್ತರ ಮೇಲೆ ಮುಸ್ಲಿಂ ಮುಖಂಡರು ದುರುದ್ದೇಶದಿಂದ ಪ್ರಕರಣ ದಾಖಲಿಸಿದ್ದು, ನಾವೆಲ್ಲಾ ಹಿಂದೂ ಕಾರ್ಯಕರ್ತರ ಪರವಾಗಿ ನಿಲ್ಲಲಿದ್ದೇವೆ. ದೂರು ದಾಖಲಿಸುವ ಮುನ್ನಾ ಮುಸ್ಲಿಂ ಮುಖಂಡರು ಯೋಚಿಸಬೇಕಿತ್ತು. ಇದು ಇಲ್ಲಿಗೆ ನಿಲ್ಲುವುದಿಲ್ಲ. ನಮ್ಮ ಪ್ರಾಣ ಬಲಿ ಕೊಟ್ಟಾದರೂ ಮಂದಿರ ನಿರ್ಮಿಸಿಯೇ ತೀರುತ್ತೇವೆ ಎಂದು ಘೋಷಿಸಿದರು.

> ಶ್ರೀರಂಗಪಟ್ಟಣದಲ್ಲಿ ಹನುಮ ಸಂಕೀರ್ತನಾ ಯಾತ್ರೆಯನ್ನು ಹಿಂದೂಪರ ಕಾರ್ಯಕರ್ತರು ಆಯೋಜಿಸಿದ್ದ ಹಿನ್ನೆಲೆಯಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಅಧಿಕಾರಿಗಳು ಸಭೆ ನಡೆಸಿದ್ದರು. ಈ ಸಭೆಯಲ್ಲಿ ಹಿಂದೂಪರ ಸಂಘಟನೆಗಳು ಪಟ್ಟಣದಲ್ಲಿ ಅಳವಡಿಸುವ ಫ್ಲೆಕ್ಸ್ ಹಾಗೂ ಬಂಟಿಂಗ್ಸ್ ವಿಚಾರವೂ ಕೂಡ ಪ್ರಸ್ತಾಪವಾಗಿದ್ದು, ಡಿ.5 ರಂದು (ಸೋಮವಾರ) ಹನುಮ ಜಯಂತಿ ಇರುವುದರಿಂದ ತಾವೂ ಅಳವಡಿಸಿರುವ ಫ್ಲೆಕ್ಸ್ ಹಾಗೂ ಬಂಟಿಂಗ್ಸ್‌ಗಳನ್ನು ಸೋಮವಾರ ತಾವೇ ತೆರವುಗೊಳಿಸುವುದಾಗಿ ಹಿಂದೂಪರ ಸಂಘಟನೆ ಮುಖಂಡರು ಹೇಳಿದಾಗ ಅದನ್ನು ಅಧಿಕಾರಿಗಳು ಒಪ್ಪಿದ್ದರು. ಆದರೆ ಇಂದು ಏಕಾಏಕಿ ಪುರಸಭೆ ಅಧಿಕಾರಿಗಳು ಫ್ಲೆಕ್ಸ್, ಬಂಟಿಂಗ್ಸ್ ತೆರವು ಕಾರ್ಯಕ್ಕೆ ಮುಂದಾಗಿದ್ದರಿಂದ ಹಿಂದೂಪರ ಸಂಘಟನೆಗಳ ಕಾರ್ಯಕರ್ತರು ಪ್ರತಿಭಟನೆ ನಡೆಸಿದವು. ಈ ವೇಳೆ ಸಭೆಯಲ್ಲಿ ಪ್ರಸ್ತಾಪವಾಗಿದ್ದ ವಿಷಯವನ್ನು ಮುಂದಿಟ್ಟಾಗ ತಬ್ಬಿಬ್ಬಾದ ಅಧಿಕಾರಿಗಳು ತಮ್ಮ ತಪ್ಪನ್ನು ಅರಿತುಕೊಂಡು ಹಿಂದೂಪರ ಸಂಘಟನೆಗಳ ಕ್ಷಮೆ ಕೋರಿ ತಾವೇ ತೆರವುಗೊಳಿಸಿದ್ದ ಫ್ಲೆಕ್ಸ್ ಹಾಗೂ ಬಂಟಿಂಗ್ಸ್‌ಗಳನ್ನು ಮರು ಸ್ಥಾಪಿಸಿದರು.

> ಭಾನುವಾರ ತಡರಾತ್ರಿ ಹಿರಿಯ ಅಧಿಕಾರಿಗಳು ದೂರವಾಣಿ ಮೂಲಕ ನೀಡಿದ್ದ ಮೌಖಿಕ ಆದೇಶದಂತೆ ಹಿಂದೂ ಸಂಘಟನೆಗಳು ಹಾಕಿದ್ದ ಹನುಮನ ಫ್ಲೆಕ್ಸ್ ಮತ್ತು ಬಂಟಿಂಗ್ಸ್‌ಗಳನ್ನು ಸೋಮವಾರ ಬೆಳ್ಳಂಬೆಳಗ್ಗೆ ತೆರವುಗೊಳಿಸಿದ್ದೆವು. ಆದರೆ ಅದನ್ನು ವಿರೋಧಿಸಿ ಹಿಂದೂ ಸಂಘಟನೆಗಳ ಕಾರ್ಯಕರ್ತರು ಏಕಾಏಕಿ ಪುರಸಭಾ ಕಚೇರಿ ಎದುರು ಪ್ರತಿಭಟನೆ ನಡೆಸಿದಾಗ ಹಿರಿಯ ಅಧಿಕಾರಿಗಳ ಗಮನಕ್ಕೆ ತಂದು ಅವರ ಸೂಚನೆ ಮೇರೆಗೆ ತೆರವುಗೊಳಿಸಿದ್ದ ಹನುಮನ ಫ್ಲೆಕ್ಸ್ ಮತ್ತು ಬಂಟಿಂಗ್ಸ್‌ಗಳನ್ನು ಪುನರ್ ಜೋಡಿಸಿದ್ದೇವೆ.
> - ಸಂದೀಪ್, ಪುರಸಭೆ ಮುಖ್ಯಾಧಿಕಾರಿ.

ಮುಸಲ್ಮಾನರಿಂದ ದೂರು ದಾಖಲು

ಪಟ್ಟಣದಲ್ಲಿ ಭಾನುವಾರ ನಡೆದ ಸಂಕೀರ್ತನಾ ಯಾತ್ರೆ ವೇಳೆ ಕೆಲ ಹನುಮ ಮಾಲಾಧಾರಿಗಳು ಗಂಜಾಂನ ಮುಸ್ಲಿಂ ಮನೆಯೊಂದರ ಮೇಲೆ ಹತ್ತಿ ಹಸಿರು ಧ್ವಜ ತೆಗೆದು ಹನುಮನ ಕೇಸರಿ ಬಾವುಟ ನೆಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ಪಟ್ಟಣ ಟೌನ್ ಪೊಲೀಸ್ ಠಾಣೆಗೆ ನಿವಾಸಿ ಸಯ್ಯದ್ ರೆಹಮಾನ್ ಸೇರಿದಂತೆ 40ಕ್ಕೂ ಹೆಚ್ಚು ಮುಸ್ಲಿಂಮರು ದೂರು ನೀಡಿದ್ದು, ಪ್ರಕರಣ ದಾಖಲಿಸಿಕೊಂಡ ಪಟ್ಟಣ ಟೌನ್ ಪೊಲೀಸರು ಎಫ್‌ಐಆರ್ ದಾಖಲಿಸಿ ತನಿಖೆ ಮುಂದುವರಿಸಿದ್ದಾರೆ

ಮಂಡ್ಯ ಜಿಲ್ಲೆಯಲ್ಲಿ ಬೆಳೆಗಳಿಗೆ ಹಂದಿ ಕಾಟ; ವನ್ಯಜೀವಿ ಕಾಯ್ದೆಗೆ ತಿದ್ದುಪಡಿ ತರುವಂತೆ ಸಿಎಂಗೆ ದಿನೇಶ್ ಗೂಳಿಗೌಡ ಮನವಿ

ಮಂಡ್ಯ, ಡಿ.5– ಜಿಲ್ಲೆಯಲ್ಲಿ ಕಾಡುಹಂದಿಗಳ ಕಾಟ ಮಿತಿಮೀರಿದೆ. ರಾತ್ರಿ ವೇಳೆ ಹೊಲಗಳಿಗೆ ನುಗ್ಗುವ ಇವುಗಳು ರೈತರ ಬೆಳೆಗಳನ್ನು ತೀವ್ರ ತರನಾಗಿ ಹಾನಿ ಮಾಡುತ್ತಿವೆ.



ಈ ಹಿನ್ನೆಲೆಯಲ್ಲಿ ಕಾಡು ಹಂದಿಗಳ ನಿಯಂತ್ರಣಕ್ಕಾಗಿ ವನ್ಯಜೀವಿ (ಸಂರಕ್ಷಣಾ) ಕಾಯ್ದೆಯಲ್ಲಿ ಕೆಲವು ಸಡಿಲಿಕೆ ಮಾಡಿ ತಿದ್ದುಪಡಿ ಮಾಡಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಪತ್ರ ಬರೆದು ಮನವಿ ಮಾಡಿದ್ದಾರೆ.

ಇದು ಮಂಡ್ಯ ಜಿಲ್ಲೆಯ ಎಲ್ಲ 7 ತಾಲೂಕುಗಳಲ್ಲಿಯೂ ಕಂಡುಬರುತ್ತಿರುವ ಸಮಸ್ಯೆಯಾಗಿದ್ದು, ರೈತರು ಕೃಷಿಯಲ್ಲಿ ತೊಡಗುವುದು ದುಸ್ತರವಾಗಿದೆ. ಮೊದಲೇ ರೈತ ಆರ್ಥಿಕವಾಗಿ ಸಂಕಷ್ಟದಲ್ಲಿದ್ದು, ಬೆಳೆದ ಬೆಳೆಗೆ ಯೋಗ್ಯ ಬೆಲೆ ಸಿಗುತ್ತಿಲ್ಲ. ವೈಜ್ಞಾನಿಕ ಬೆಲೆ ಇನ್ನೂ ನಿಗದಿಯಾಗಿಲ್ಲ. ಇನ್ನೂ ಹಲವಾರು ಸಮಸ್ಯೆಗಳಿಗೆ ಪರಿಹಾರ ಸಿಕ್ಕಿಲ್ಲ. ಈ ಮಧ್ಯೆ ಪರಿಶ್ರಮಪಟ್ಟು ಬೆಳೆ ಬೆಳೆದರೆ ಅವುಗಳೂ ಕಾಡುಪ್ರಾಣಿಗಳ ಪಾಲುಗುತ್ತಿವೆ. ಈ ಹಿನ್ನೆಲೆಯಲ್ಲಿ ಬೇಟೆಗಾರರು ಹಂದಿಯನ್ನು ಗುಂಡಿಕ್ಕಿ ಕೊಲ್ಲಲು ಅವಕಾಶ ನೀಡಬೇಕು ಎಂದು ಶಾಸಕ ದಿನೇಶ್ ಗೂಳಿಗೌಡ ಅವರು ಮನವಿ ಮಾಡಿದ್ದಾರೆ.

ಹಾಲಿ ಇರುವ ಕಾಯ್ದೆಯಲ್ಲಿ ಕಾಡುಹಂದಿಗಳನ್ನು ಕೊಲ್ಲಲು ಕೆಲವು ಉಪ ನಿಯಮಗಳನ್ನೂ ವಿಧಿಸಲಾಗಿರುತ್ತದೆ. ಹಾಲು ಕರೆಯುವ ಹಂದಿಗಳನ್ನು ಕೊಲ್ಲಬಾರದು, ಗುಂಡು ಹೊಡೆಯುವಾಗ ತಪ್ಪಿಸಿಕೊಂಡು ಕಾಡಿನೊಳಗೆ ಹಂದಿಗಳು ಓಡಿದರೆ ಸಾಯಿಸಬಾರದು ಎಂಬಿತ್ಯಾದಿ ನಿಯಮಗಳನ್ನು ಹಾಕಲಾಗಿದೆ. ಇಲ್ಲಿ ಪ್ರಶ್ನೆಯೆಂದರೆ ಕಾಡುಹಂದಿಗಳು ಹಾಲುಕರೆಯುತ್ತವೆಯೋ ಇಲ್ಲವೋ ಎಂದು ಪತ್ತೆ ಹಚ್ಚುವುದು ಹೇಗೆ? ಅದನ್ನು ಗಮನಿಸುವುದರಲ್ಲಿ ಅವುಗಳು ತಪ್ಪಿಸಿಕೊಂಡು ಬಿಡುತ್ತವೆ. ಇನ್ನು ತಪ್ಪಿಸಿಕೊಂಡು ಕಾಡಿನೊಳಗೆ ಪ್ರವೇಶ ಮಾಡಿದರೆ ಅವುಗಳನ್ನು ಗುಂಡು ಹೊಡೆದು ಸಾಯಿಸುವಂತಿಲ್ಲ. ಆ ಕಾಡುಹಂದಿಗಳು ಪುನಃ ಹೊಲಗಳಿಗೆ ಬಂದು ಬೆಳೆಯನ್ನು ನಾಶ ಮಾಡುವ ಸಾಧ್ಯತೆ ಇರುತ್ತದೆ. ಅವುಗಳು ಪುನಃ ಜಮೀನಿಗೆ ಬರುವವರೆಗೆ ಕಾದು ಕುಳಿತುಕೊಳ್ಳಬೇಕು ಎಂಬ ರೀತಿಯಲ್ಲಿ ಈಗಿರುವ ನಿಯಮ ಹೇಳುತ್ತದೆ.

ಈ ಹಿನ್ನೆಲೆಯಲ್ಲಿ ಈಗಿರುವ ಕಾನೂನನ್ನು ಇಂದಿನ ಕಾಲಮಾನಕ್ಕೆ ತಕ್ಕಂತೆ ಬದಲಾಯಿಸಬೇಕಿದೆ. ರೈತರ ಹಿತದೃಷ್ಟಿಯಿಂದ ಈ ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳುವುದು ಅತಿ ಅವಶ್ಯಕವಾಗಿದೆ. ಆ ಮೂಲಕ ಕಾನೂನಿನಲ್ಲಿ ತಿದ್ದುಪಡಿ ತಂದು ರೈತ ವರ್ಗದ ನೆರವಿಗೆ ಧಾವಿಸಬೇಕೆಂದು ಶಾಸಕ ದಿನೇಶ್ ಗೂಳಿಗೌಡ ಅವರು ಮುಖ್ಯಮಂತ್ರಿಯವರಿಗೆ ಮನವಿ ಮಾಡಿದ್ದಾರೆ.

ಸಿದ್ದರಾಮಯ್ಯ ಅವರಿಗೂ ಪತ್ರ: ಇದೇ ವೇಳೆ ಈ ಪತ್ರದ ಪ್ರತಿಯನ್ನು ಮಾಜಿ ಮುಖ್ಯಮಂತ್ರಿ, ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಅವರಿಗೂ ನೀಡಿರುವ ಶಾಸಕ ದಿನೇಶ್ ಗೂಳಿಗೌಡ ಅವರು ಮುಂಬರುವ ಅಧಿವೇಶನದಲ್ಲಿ ರೈತರ ಈ ಸಮಸ್ಯೆ ಬಗ್ಗೆ ಚರ್ಚೆಗ ನಡೆಸುವಂತೆ ಮನವಿ ಮಾಡಿದ್ದಾರೆ. ಇನ್ನು ಜಿಲ್ಲಾ ಉಸ್ತುವಾರಿ ಸಚಿವ ಕೆ. ಗೋಪಾಲಯ್ಯ ಹಾಗೂ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಅವರಿಗೂ ಪತ್ರದ ಪ್ರತಿಯನ್ನು ಶಾಸಕರು ಲಗತ್ತಿಸಿದ್ದು, ಬಹುಬೇಗ ಈ ಸಮಸ್ಯೆಗೆ ಮುಕ್ತಿ ಕಾಣಿಸಬೇಕು ಎಂದು ಮನವಿ ಮಾಡಿದ್ದಾರೆ.

ವಿಜೃಂಭಣೆಯ ಹನುಮ ಜಯಂತಿ



ಗುಂಡ್ಲುಪೇಟೆ, ಡಿ.5– ಪಟ್ಟಣದ ಚಾಮರಾಜನಗರ ಜೋಡಿ ರಸ್ತೆಯಲ್ಲಿರುವ ಆಂಜನೇಯ ದೇವಸ್ಥಾನ, ಶ್ರೀರಾಮೇಶ್ವರ ದೇವಸ್ಥಾನ, ತೆರಕಣಾಂಬಿಯ ಆಂಜನೇಯ, ವಾಲಿ, ಸುಗ್ರೀವ ಹಾಗೂ ತೆರಕಣಾಂಬಿಹುಂಡಿ ಕೊತ್ತಲವಾಡಿ ರಸ್ತೆಯ ಶೃಂಗಾರಾಂಜನೇಯ ದೇವಾಯಲಗಳಲ್ಲಿ ಹನುಮ ಜಯಂತಿ ಆಚರಿಸಲಾಯಿತು.

ಹನುಮ ಜಯಂತಿ ಹಿನ್ನೆಲೆಯಲ್ಲಿ ದೇವಾಲಯಗಳಿಗೆ ವಿವಿಧ ವರ್ಣದ ಪುಷ್ಪಗಳಿಂದ ಅಲಂಕಾರ ಮತ್ತು ವಿದ್ಯುತ್ ದೀಪಾಂಕಾರ ಮಾಡಲಾಗಿತ್ತು. ಪಟ್ಟಣದಲ್ಲಿ ನಡೆದ ಹನುಮ ಜಯಂತಿ ಪ್ರಯುಕ್ತ ಪುರಸಭೆ ಅಧ್ಯಕ್ಷ ಪಿ.ಗಿರೀಶ್ ಮತ್ತು ಕುಟುಂಬಸ್ಥರು ದೇವರಿಗೆ ವಿಶೇಷ ಪೂಜೆ ಮತ್ತು ಸಹಸ್ರಾರು ಮಂದಿಗೆ ಅನ್ನಸಂತರ್ಪಣೆ ಕಾರ್ಯಕ್ರಮವನ್ನು ಆಯೋಜಿಸಿದ್ದರು. ತೆರಕಣಾಂಬಿ ಗ್ರಾಮದಲ್ಲಿ ಬ್ಯಾಂಡ್ ಹಾಗೂ ನಗಾರಿ ವಾದನಗಳೊಂದಿಗೆ ಆಂಜನೇಯರ ಭಾವಚಿತ್ರವನ್ನು ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು.

ಹೆಚ್‌ಡಿಕೆ ಹೇಳಿಕೆ ಖಂಡಿಸಿ ಪ್ರತಿಭಟನೆ

ಹನೂರು, ಡಿ.5– ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಅವರು ದಲಿತ ಸಮುದಾಯಕ್ಕೆ ನೋವಾಗುವ ರೀತಿ ಅಸ್ಪೃಶ್ಯ ಪದ ಬಳಕೆ ಮಾಡಿರುವುದು ಖಂಡನೀಯ. ಕೂಡಲೇ ಅವರು ಕ್ಷಮೆಯಾಚಿಸಬೇಕು ಎಂದು ಸಮಾಜ ಸೇವಕ ನಿಶಾಂತ್ ಆಗ್ರಹಿಸಿದರು.

ಕುಮಾರಸ್ವಾಮಿ ಅವರ ಹೇಳಿಕೆ ಖಂಡಿಸಿ ಪಟ್ಟಣದಲ್ಲಿ ನಡೆಸಲಾದ ಬೃಹತ್ ಮೌನ ಪ್ರತಿಭಟನೆ ಬಳಿಕ ಸುದ್ದಿಗಾರರೊಡನೆ ಮಾತನಾಡಿದರು. ಸಂವಿಧಾನದಲ್ಲಿ ಎಲ್ಲರಿಗೂ ಸಮನಾದ ಹಕ್ಕಿದೆ. ಮುಖ್ಯಮಂತ್ರಿಯಾಗಲು ದಲಿತರು ಯೋಗ್ಯರಲ್ಲ ಎಂಬ ಅರ್ಥ ಬರುವಂತೆ ಕುಮಾರಸ್ವಾಮಿ ಪದ ಬಳಕೆ ಮಾಡಿರುವುದು ಸಂವಿಧಾನ ವಿರೋಧಿ ಹೇಳಿಕೆಯಾಗಿದೆ. ಡಾ. ಬಿ.ಆರ್. ಅಂಬೇಡ್ಕರ್ ಅನುಯಾಯಿಗಳಿಗೆ ಈ ಹೇಳಿಕೆ ನೋವನ್ನುಂಟು ಮಾಡಿದೆ. ಒಂದು ವೇಳೆ ಅವರು ಕ್ಷಮೆಯಾಚಿಸದಿದ್ದರೆ ಚುನಾವಣೆಯಲ್ಲಿ ಮತಯಾಚನೆಗೆ ಬರುವ ಸಂದರ್ಭದಲ್ಲಿ ತಕ್ಕ ಪಾಠವನ್ನು ಸಹ ಕಲಿಸುತ್ತೇವೆ ಎಂದು ಎಚ್ಚರಿಸಿದರು. ಈ ಸಂದರ್ಭದಲ್ಲಿ ನಿಶಾಂತ್ ಬೆಂಬಲಿಗರು ಮತ್ತು ಅಭಿಮಾನಿಗಳು ಇನ್ನಿತರರು ಉಪಸ್ಥಿತರಿದ್ದರು.

ಸಂಚಾರಿ ಸೇವಾ ಸಿಂಧು ವಾಹನಕ್ಕೆ ಸೋಮವಾರಪೇಟೆಯಲ್ಲಿ ತಡೆ

ಚಾಮರಾಜನಗರ, ಡಿ.5– ಕಾಡಾ ಅಧ್ಯಕ್ಷ ಜಿ. ನಿಜಗುಣರಾಜು ಅವರ ಸಂಚಾರಿ ಸೇವಾ ಸಿಂಧು ವಾಹನಕ್ಕೆ ತಡೆವೊಡ್ಡಿ, ವಾಹನವನ್ನು ವಾಪಸ್ ಕಳುಹಿಸಿರುವ ಘಟನೆ ನಗರದ ಸೋಮವಾರಪೇಟೆಯ 1ನೇ ವಾರ್ಡ್‌ನಲ್ಲಿ ಸೋಮವಾರ ನಡೆದಿದೆ ಇದೀಗ ಇದು ರಾಜಕೀಯ ಬಣಕ್ಕೆ ತಿರುಗಿದ್ದು ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಚಾಮರಾಜನಗರ ವಿಧಾನಸಭಾ ಕ್ಷೇತ್ರದ ಬಿಜೆಪಿ ಟಿಕೆಟ್ ಆಕಾಂಕ್ಷಿಯಾಗಿರುವ ನಿಜಗುಣರಾಜು ಅವರು ಕ್ಷೇತ್ರದಾದ್ಯಂತ ಸಂಚಾರಿ ಸೇವಾ ಸಿಂಧು ವಾಹನದ ಮೂಲಕ ಸಾರ್ವಜನಿಕರಿಗೆ ಉಚಿತವಾಗಿ ನಾನಾ ಸೇವೆ ನೀಡುತ್ತಿದ್ದರು. ಈ ವಾಹನಗಳು ಪ್ರತಿನಿತ್ಯ ಕ್ಷೇತ್ರದ ಒಂದಲ್ಲ ಒಂದು ಗ್ರಾಮಕ್ಕೆ ತೆರಳುತ್ತಿದ್ದವು. ಅದರಂತೆ ಇಂದು ನಗರದ ನಗರಸಭಾ ವ್ಯಾಪ್ತಿಯ ಒಂದನೇ ವಾರ್ಡ್‌ನ ಸೋಮವಾರಪೇಟೆ ಬಡಾವಣೆಗೆ ಎರಡು ವಾಹನಗಳು ತೆರಳಿತ್ತು.

ಈ ವೇಳೆ ಸ್ಥಳಕ್ಕೆ ಆಗಮಿಸಿದ ಆ ವಾರ್ಡ್‌ನ ನಗರಸಭಾ ಮಾಜಿ ಸದಸ್ಯ ಹಾಗೂ ಕಾಂಗ್ರೆಸ್ ಮುಖಂಡ ಮಹದೇವಯ್ಯ ಅವರು, ಇದೇನಿದು ಎಂದು ಪ್ರಶ್ನಿಸಿದ್ದಾರೆ ಎನ್ನಲಾಗಿದೆ ಈ ವೇಳೆ ವಾಹನದ ಸಿಬ್ಬಂದಿ, ಆಯುಷ್ಮಾನ್ ಕಾರ್ಡ್ ಮಾಡುವುದಾಗಿ ಉತ್ತರಿಸಿದ್ದಾರೆ. ಇದನ್ನು ಮಾಡಲು ಸರ್ಕಾರ ಇದೆ. ನೀವ್ಯಾರು ಇದನ್ನು ಮಾಡಲು. ಇದಕ್ಕೆ ನಿಮಗೆ ಅನುಮತಿ ನೀಡಿದವರು ಯಾರು? ಎಂದು ಪ್ರಶ್ನಿಸಿ ಅನುಮತಿ ಪತ್ರ ಕೇಳಿದರು ಎನ್ನಲಾಗಿದೆ. ನೀವು ಮತದಾರರ ಪಟ್ಟಿಯಲ್ಲಿರುವ ಹೆಸರನ್ನು ಡಿಲೀಟ್ ಮಾಡಲು ಬಂದಿದ್ದೀರಿ. ಹಲವಾರು ಜನರ ಹೆಸರು ಈಗಾಗಲೇ ಪಟ್ಟಿಯಲ್ಲಿ ಇಲ್ಲದಾಗಿದೆ. ನೀವು ಇಲ್ಲಿಂದ ತೆರಳುವಂತೆ ಸೂಚಿಸಿದ್ದಾರೆ. ಸಂಚಾರಿ ಸೇವಾ ಸಿಂಧು ವಾಹನದ ಸಿಬ್ಬಂದಿ ಸ್ಥಳದಿಂದ ತೆರಳದಿದ್ದಾಗ ಮಾತಿನ ಚಕಮಕಿ ಸಹ ನಡೆದು ತಳ್ಳಾಟ– ನೂಕಾಟ ನಡೆಯಿತು ಎನ್ನಲಾಗಿದೆ. ವಿಷಯ ತಿಳಿದು ಸ್ಥಳಕ್ಕೆ ಆಗಮಿಸಿದ ಪೊಲೀಸರು ಎಲ್ಲರನ್ನೂ ಸಮಾಧಾನಪಡಿಸಿ ವಾಹನವನ್ನು ವಾಪಸ್ ಕಳುಹಿಸಿದರು.

ದೂರು ದಾಖಲು: ಸೇವಾ ಸಿಂಧು ವಾಹನದ ಸಿಬ್ಬಂದಿ ಲಿಂಗರಾಜು ಈ ಬಗ್ಗೆ ಪಟ್ಟಣ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ನನ್ನ ಮೇಲೆ ಮಹದೇವಯ್ಯ ಮತ್ತು ಇತರರು ಗಲಾಟೆ ಮಾಡಿ, ನಮ್ಮ ವಾಹನವನ್ನು ನಮ್ಮಗಳನ್ನು ಸೋಮವಾರ ಪೇಟೆಯಿಂದ ಹೋಗುವಂತೆ ಮಾಡಿದ್ದಾರೆ. ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ದೂರು ನೀಡಿದ್ದಾರೆ.



> ಶಾಸಕ ಸಿ. ಪುಟ್ಟರಂಗಶೆಟ್ಟಿ ಅವರ ಭ್ರಷ್ಟಾಚಾರದ ವಿರುದ್ಧ ನಾನು ಇಡಿ ಮತ್ತು ಐಟಿಗೆ ದೂರು ನೀಡುವುದಾಗಿ ತಿಳಿಸಿದ್ದೆ. ಇದರಿಂದ ಶಾಸಕರು ವಿಚಲಿತರಾಗಿ ನನ್ನ ಮೇಲೆ ಪೂರ್ವಗ್ರಹ ಪೀಡಿತರಾಗಿ ಸಾರ್ವಜನಿಕರಿಗೆ ಉಚಿತವಾಗಿ ನೀಡುತ್ತಿದ್ದ ನಾನಾ ಸೇವೆಗಳಿಗೆ ತಮ್ಮ ಕಾರ್ಯಕರ್ತರ ಮೂಲಕ ತಡೆಯೊಡ್ಡುವ ಪ್ರಯತ್ನ ನಡೆಸಿದ್ದಾರೆ. ಇದಕ್ಕೆ ನಾನು ಬಗ್ಗುವುದಿಲ್ಲ... ಜಗ್ಗುವುದಿಲ್ಲ...
> - ಜಿ. ನಿಜಗುಣರಾಜು, ಕಾಡಾ ಅಧ್ಯಕ್ಷರು.

> ಸಾರ್ವಜನಿಕರಿಗೆ ಸೌಲಭ್ಯಗಳನ್ನು ಕಲ್ಪಿಸಲು ಸರ್ಕಾರ ಇವೆ. ಅನುಮತಿ ಪಡೆಯದೇ ಯಾರೋ ಖಾಸಗಿ ವ್ಯಕ್ತಿ ಸೌಲಭ್ಯ ಕಲ್ಪಿಸುತ್ತೇನೆಂದು ಬಂದರೆ ಏನರ್ಥ?. ಇದನ್ನು ಶಾಸಕ ಪುಟ್ಟರಂಗಶೆಟ್ಟಿ ಅವರ ಗಮನಕ್ಕೆ ತಂದಾಗ, ಅವರು ವಾಹನಗಳನ್ನು ವಾಪಸ್ ಕಳುಹಿಸಿ ಎಂದರು. ಅದರಂತೆ ವಾಹನಗಳನ್ನು ವಾಪಸ್ ಕಳುಹಿಸಿದೆವು. ನಾನು ಯಾರ ಮೇಲೂ ಹಲ್ಲೆ ಮಾಡಿಲ್ಲ. ಅದರೂ ಸಹ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.
> - ಮಹದೇವಯ್ಯ, ನಗರಸಭಾ ಮಾಜಿ ಸದಸ್ಯ, ಸೋಮವಾರಪೇಟೆ.

ಮುಖ್ಯಮಂತ್ರಿಗಳು ಚಾಮರಾಜನಗರಕ್ಕೆ ಬಂದು ಬುರುಡೆ ಬಿಡುತ್ತಾರೆ, ನಂಬಬೇಡಿ

ಚಾಮರಾಜನಗರ, ಡಿ.5– ಬಜೆಟ್‌ನಲ್ಲಿ ಜಿಲ್ಲೆಯ ಅಭಿವೃದ್ಧಿಗೆ ಮೂರುಕಾಸು ಮೀಸಲಿಡದ ಸಿಎಂ ಬಸವರಾಜ ಬೊಮ್ಮಾಯಿ ಅವರು ಚುನಾವಣೆ ಹತ್ತಿರ ಇರುವುದರಿಂದ ಚಾಮರಾಜನಗರಕ್ಕೆ ಬರುತ್ತಾರೆ 6 ಸಾವಿರ ಕೋಟಿ, 3 ಸಾವಿರ ಕೋಟಿ ಬಿಡುಗಡೆ ಮಾಡಿದ್ದೇನೆ ಎಂದು ಬುರುಡೆ ಬಿಡುತ್ತಾರೆ. ಇದನ್ನು ಜನತೆ ನಂಬಬೇಡಿ ಎಂದು ಕನ್ನಡ ಚಳವಳಿ ವಾಟಾಳ್ ಪಕ್ಷದ ಅಧ್ಯಕ್ಷ ವಾಟಾಳ್ ನಾಗರಾಜು ಹೇಳಿದರು.



ನಗರದ ಪ್ರವಾಸಿಮಂದಿರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಚಾಮರಾಜನಗರದ ಜನತೆ ನೋವಲ್ಲಿ ಇದ್ದು ಕಣ್ಣೀರಿನಲ್ಲಿ ಕೈ ತೊಳೆಯುತ್ತಿದ್ದಾರೆ. ಮುಖ್ಯಮಂತ್ರಿಗಳಿಗೆ ಚಾಮರಾಜನಗರದ ಮೇಲೆ ಇಷ್ಟು ದಿನಗಳಿಂದ ಇಲ್ಲದ ಪ್ರೀತಿ ಚುನಾವಣೆ ಸಂದರ್ಭದಲ್ಲೇಕೆ? ನೀವು ಇಲ್ಲಿ ಬಂದು ಸಾವಿರಾರು ಕೋಟಿ ಬಿಡುಗಡೆ ಘೋಷಣೆ ಮಾಡಿಬಿಟ್ಟು, ಅದು ಆದೇಶ ಆಗಲು ಅನೇಕ ದಿನಗಳ ಕಾಲಾವಕಾಶ ಬೇಕಾಗುತ್ತದೆ. ಇನ್ನು 5 ತಿಂಗಳೊಳಗೆ ಚುನಾವಣೆ ಬಂದು ನಿಮ್ಮ ಸರ್ಕಾರ ಬಿದ್ದು ಹೋಗುತ್ತದೆ. ಆಮೇಲೆ ಅನುದಾನ ಬಿಡುಗಡೆ ಮಾಡುತ್ತೀರಾ? ಇದು ಬರೀ ನಾಟಕ. ಸಾವಿರಾರು ಕೋಟಿ ರೂ. ಬಿಡುಗಡೆ ಘೋಷಣೆ ಮಾಡಿ ಆಕಾಶವನ್ನೇ ಕೆಳಗಿಸುತ್ತೇನೆ ಚಂದ್ರಲೋಕವನ್ನೇ ಮೇಲಕ್ಕೆ ತರುತ್ತೇನೆ ಎಂದು ಬರೀ ಬುರುಡೆ ಬಿಡುತ್ತಾರೆ ಇದನ್ನು ಜನತೆ ನಂಬಬಾರದು ಎಂದರು.

ಗಣಿಗಾರಿಕೆ ಲೂಟಿ ಮಾಡುವವರಿಗೆ ಬೆಂಬಲ ಕೊಟ್ಟಿದ್ದೀರಿ: ಸಿಎಂ ಬೊಮ್ಮಾಯಿ ಅವರೇ ಚಾಮರಾಜನಗರಕ್ಕೆ ನಿಮ್ಮ ಕೊಡುಗೆ ಏನು? ಪಿಡಬ್ಲ್ಯೂಡಿಯಿಂದ ಎಷ್ಟು ರಸ್ತೆ ಮಾಡಿಸಿದ್ದೀರಿ, ನೀರಾವರಿ ಎಷ್ಟು ಮಾಡಿಸಿದ್ದೀರಿ, ಮನೆಗಳು ಎಷ್ಟು ಕೊಟ್ಟಿದ್ದೀರಿ, ವಿದ್ಯುತ್‌ಶಕ್ತಿ ಎಷ್ಟು ಮಾಡಿದ್ದೀರಿ. ನೀವು ಮಾಡಿರುವುದೇನೆಂದರೇ ಗಣಿಗಾರಿಕೆ ಲೂಟಿ ಮಾಡುವವರಿಗೆ ಬೆಂಬಲ ಕೊಟ್ಟಿದ್ದೀರೇ ಹೊರತು ಬೇರೆ ಯಾರಿಗೂ ಅಲ್ಲ. ಇದು ಬಹಳ ಅನ್ಯಾಯವಾಗಿದೆ ಎಂದು ಆರೋಪಿಸಿದರು.

ಚಾ.ನಗರ ಜನರ ಕಲ್ಯಾಣಕ್ಕಾಗಿ ನಿರಂತರ ಹೋರಾಟ ಮಾಡುವೆ: ನಾನು ಸೋತರೂ ನನಗೇನು ಅದರ ಬಗ್ಗೆ ನೋವು ಇಲ್ಲ. ಚಾಮರಾಜನಗರ ಜನರ ಕಲ್ಯಾಣಕ್ಕಾಗಿ ನಿರಂತರ ಹೋರಾಟ ಮಾಡುತ್ತೇನೆ. ಚಾಮರಾಜನಗರ ಜಿಲ್ಲೆ ಮಾಡಿಸಿದ್ದು, ಕಾವೇರಿ ಕುಡಿಯುವ ನೀರು ತಂದದ್ದು, ಜಿಲ್ಲಾಡಳಿತ ಭವನ ಮಾಡಿಸಿದ್ದು, ಎಸ್‌ಪಿ ಆಫೀಸ್, ಜೋಡಿರಸ್ತೆ ಸೇರಿದಂತೆ ಚಾಮರಾಜನಗರ ಅನೇಕ ಅಭಿವೃದ್ಧಿ ಕೆಲಸ ಮಾಡಿಸಿದ್ದೇನೆ. ಇದನ್ನು ಚಾಮರಾಜನಗರ ಜನತೆ ಅರ್ಥ ಮಾಡಿಕೊಳ್ಳಬೇಕಿದೆ ಎಂದರು. ಈ ಸಂದರ್ಭದಲ್ಲಿ ವರದನಾಯಕ, ಗೋಪಾಲನಾಯಕ, ರೇವಣ್ಣಸ್ವಾಮಿ, ಕುಮಾರ್, ಅಜಯ್, ಶಿವಲಿಂಗಮೂರ್ತಿ, ಪಾರ್ಥಸಾರಥಿ ಇತರರಿದ್ದರು.

ಶಂಭಣ್ಣ ನಿಧನ



ಗುಂಡ್ಲುಪೇಟೆ, ಡಿ.5– ತಾಲೂಕಿನ ಮೂಡುಗೂರು ಗ್ರಾಮದ ವಾಸಿ ನಿವೃತ್ತ ದೈಹಿಕ ಶಿಕ್ಷಣ ಶಿಕ್ಷಕ ಶಂಭಣ್ಣ(69) ನಿಧನರಾಗಿದ್ದಾರೆ. ಮೃತರು ತಾಯಿ, ಪತ್ನಿ, ಓರ್ವ ಪುತ್ರ, ಪುತ್ರಿ ಮತ್ತು ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ಮೃತರ ಜಮೀನಿನಲ್ಲಿ ಸೋಮವಾರ ನೆರವೇರಿತು.



ಮೈಸೂರಲ್ಲಿ ಭಕ್ತಿ ಭಾವದ ಹನುಮ ಸ್ಮರಣೆ

ಹನುಮ ದೇವಾಲಯಗಳಲ್ಲಿ ಹೋಮ, ಹವನ, ವಿಶೇಷ ಅಲಂಕಾರ, ಪೂಜೆ






ಮೈಸೂರಿನ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಶ್ರೀ ಕಾರ್ಯಸಿದ್ಧಿ ಹನುಮಾನ್ ದೇವಸ್ಥಾನದಲ್ಲಿ ಶ್ರೀ ಗಣಪತಿ ಸಚ್ಚಿದಾನಂದ ಶ್ರೀಗಳಿಂದ ವಿಶೇಷ ಪೂಜೆ, ಅರಮನೆ ಉತ್ತರ ದ್ವಾರದಲ್ಲಿರುವ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಹೋಮ

ಹನುಮನ ಭಕ್ತಿಯಿಂದ ಸ್ಮರಿಸಿದರೆ ಕಷ್ಟಗಳು ದೂರ ದೂರ...: ಗಣಪತಿ ಸಚ್ಚಿದಾನಂದ ಶ್ರೀಗಳು

ಮೈಸೂರು, ಡಿ.5(ಆರ್‌ಕೆಬಿ)– ಕಲಿಯುಗದಲ್ಲಿ ಕಾಡುತ್ತಿರುವ ಎಲ್ಲಾ ಬಗೆಯ ಕಷ್ಟ, ದುಃಖ ನಾಶ ಮಾಡಲೆಂದೇ ಶ್ರೀ ಆಂಜನೇಯಸ್ವಾಮಿ ಅವತರಿಸಿ ಬರುತ್ತಾರೆ ಎಂದು ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ನುಡಿದರು.

ಹನುಮ ಜಯಂತಿ ಪ್ರಯುಕ್ತ ಅವಧೂತ ದತ್ತಪೀಠದ ಆವರಣದಲ್ಲಿರುವ ಶ್ರೀ ಕಾರ್ಯಸಿದ್ಧಿ ಹನುಮಾನ್ ದೇವಸ್ಥಾನದಲ್ಲಿ ವಿಶೇಷ ಪೂಜಾ ಕಾರ್ಯ ನೆರವೇರಿಸಿದ ನಂತರ ಭಕ್ತರಿಗೆ ಆಶೀರ್ವಚನ ನೀಡಿ ಶ್ರೀಗಳು ಮಾತನಾಡಿದರು. ರಾಮಾಯಣ ಕಾಲದಲ್ಲಿ ಶ್ರೀರಾಮ, ಸೀತಾಮಾತೆಯವರ ಕಷ್ಟಗಳನ್ನೇ ದೂರ ಮಾಡಿದ ಹನುಮಂತ ಸಾಮಾನ್ಯ ಜನರ ದುಃಖ ದೂರ ಮಾಡದೇ ಇರುತ್ತಾನೆಯೇ. ಯಾರು ಹನುಮನನ್ನು ಭಕ್ತಿಯಿಂದ ಪೂಜಿಸಿ, ಆರಾದಿಸಿದರೆ ಖಂಡಿತವಾಗಿ ಆತ ಎಲ್ಲರ ಕಷ್ಟಗಳನ್ನು ದೂರ ಮಾಡುತ್ತಾನೆ ಎಂದರು. ಹನುಮನ ಜನ್ಮ ಸ್ಥಳದ ಬಗ್ಗೆ ಗೊಂದಲಗಳಿವೆ. ಕೆಲವು ಅಂಜನಾದ್ರಿ ಎನ್ನುತ್ತಾರೆ, ಇನ್ಯಾರೋ ಇನ್ನೊಂದು ಸ್ಥಳ ಹೇಳುತ್ತಾರೆ. ಅವನ ಹುಟ್ಟಿದ ಸ್ಥಳ ಎಲ್ಲಾದರೂ ಆಗಿರಲಿ, ಅವನನ್ನು ನಂಬಿ, ಶುದ್ಧ ಮನಸ್ಸಿನಿಂದ ಪ್ರಾರ್ಥಿಸುವಂತೆ ಶ್ರೀಗಳು ಕರೆನೀಡಿದರು. ನಮ್ಮ ಆಶ್ರಮದ ಆವರಣದಲ್ಲಿ 25 ವರ್ಷ ಗಳಿಂದ ಬಯಲು ಆಂಜನೇಯನಿಗೆ ಪೂಜೆ ಮಾಡಲಾಗುತ್ತಿತ್ತು. ಈಗ್ಗೆ 10 ವರ್ಷಗಳಿಂದ ಮಂದಿರ ನಿರ್ಮಿಸಿ ಪೂಜೆ ಸಲ್ಲಿಸಲಾಗುತ್ತಿದೆ. ಇಲ್ಲಿ ಮೂರು ಆಂಜನೇಯ ಮೂರ್ತಿಗಳಿವೆ. ಒಂದು ಆಕಾಶದಲ್ಲಿ, ಇನ್ನೊಂದು ಮಧ್ಯದಲ್ಲಿ, ಮತ್ತೊಂದು ಪಾತಾಳದಲ್ಲಿ ಪ್ರತಿಷ್ಠಾಪನೆ ಮಾಡಲಾಗಿದೆ ಎಂದರು.

ಮೈಸೂರು, ಡಿ.5(ಆರ್‌ಕೆಬಿ)– ಹನುಮ ಜಯಂತಿ ಅಂಗವಾಗಿ ಮೈಸೂರಿನ ವಿವಿಧೆಡೆ ಸೋಮವಾರ ಭಕ್ತಿ ಭಾವದಿಂದ ಹನುಮ ಸ್ಮರಣೆ ಮಾಡಲಾಯಿತು. ಹನುಮ ದೇವಾಲಯದಲ್ಲಿ ಹೋಮ, ಹವನ, ಹನುಮನಿಗೆ ವಿಶೇಷ ಅಲಂಕಾರ, ವಿಶೇಷ ಪೂಜೆಗಳು ನೆರವೇರಿದವು. ಮುಂಜಾನೆಯಿಂದಲೇ ಜನರು ದೇವರಿಗೆ ಭಕ್ತಿಯಿಂದ ನಮಿಸಿದರು.

ನಂಜನಗೂಡು ರಸ್ತೆಯಲ್ಲಿರುವ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಕಾರ್ಯಸಿದ್ಧಿ ಹನುಮಾನ್ ದೇವ ಸ್ಥಾನದಲ್ಲಿ 10ನೇ ವಾರ್ಷಿಕೋತ್ಸವದ ಪ್ರಯುಕ್ತ ಆಂಜನೇಯ ನಿಗೆ ವಿಶೇಷ ಅಭಿಷೇಕ, ದೇವರಿಗೆ ಕದಳಿ ಅಲಂಕಾರ ಮಾಡಲಾಗಿತ್ತು. ಶ್ರೀ ಗಣಪತಿ ಸಚ್ಚಿದಾನಂದ ಶ್ರೀಗಳು ಮೊದಲಿಗೆ ಮೂಲ ಹನುಮ ದೇವರು ಹಾಗೂ ಸ್ವರ್ಣ ಹನುಮ ಮೂರ್ತಿಗೆ 108 ಹನುಮ ಶ್ಲೋಕದೊಂದಿಗೆ ಅಷ್ಟೋತ್ತರ ಪೂಜಾ ಕೈಂಕರ್ಯ ನೆರವೇರಿಸಿದರು. ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಭಜನಾ ಕಾರ್ಯಕ್ರಮದಲ್ಲಿ ಹನುಮ ಸ್ಮರಣೆ ನಡೆಯಿತು. ಇದಕ್ಕೂ ಮುನ್ನ ಮುಂಜಾನೆ ಮೂರೂವರೆ ಗಂಟೆಗಳ ಕಾಲ ಸತತವಾಗಿ ಭಕ್ತರು ದೇವಾಲಯದ ಆವರಣದಲ್ಲಿ ಹನುಮಾನ್ ಚಾಲೀಸ ಪಠಣ ಮಾಡಿದರು.

ಅರಮನೆ ಉತ್ತರ ದ್ವಾರದಲ್ಲಿರುವ ಕೋಟೆ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲಾಯಿತು, ಅಲ್ಲಿ ದೇವರಿಗೆ ವಿಶೇಷ ಅಭಿಷೇಕ ಮತ್ತು ಇತರ ಎಲ್ಲಾ ಸಾಂಪ್ರದಾಯಿಕ ಆಚರಣೆಗಳನ್ನು ನೆರವೇರಿಸಲಾಯಿತು. ಇರ್ವಿನ್ ರಸ್ತೆಯಲ್ಲಿರುವ ಶ್ರೀ ಪಂಚಮುಖಿ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ 22ನೇ ಹನುಮ ಜಯಂತಿ ಪ್ರಯುಕ್ತ ಹೋಮ ನಡೆಯಿತು. ದೇವರಿಗೆ ವಿಶೇಷ ಅಲಂಕಾರದ ಜೊತೆಗೆ ಅಷ್ಟದ್ರವ್ಯ ಮಹಾಗಣಪತಿ ಹೋಮ ಮಾಡಲಾಯಿತು. ದೇವಸ್ಥಾನದಲ್ಲಿ ಭಕ್ತವೃಂದದ ಮುಖ್ಯಸ್ಥರಾದ ಎಸ್.ಚಂದ್ರಶೇಖರ್ ಜಾಧವ್, ವೈ.ಎಸ್.ನಾಗೇಶ್, ಎಸ್.ಶಿವಕುಮಾರ್, ಶ್ರೀನಿಧಿ, ಬಿ.ಗಂಗಾಧರ್, ಸತ್ಯನಾರಾಯಣರಾಜು, ಉಷಾರಾಣಿ, ವೆಂಕಟೇಶ್ ಗೋಬಿ, ಬಿ.ಎಸ್.ಹರೀಶ್ ನೇತೃತ್ವದಲ್ಲಿ ವಿಶೇಷ ಹೋಮ, ಪೂಜಾ ಕಾರ್ಯಕ್ರಮಗಳು ನೆರವೇರಿದವು.

ಬನ್ನಿಮಂಟಪ ಹನುಮಂತನಗರದ ಶ್ರೀ ವೀರಾಂಜನೇಯ ಸ್ವಾಮಿ ದೇವಸ್ಥಾನದಲ್ಲಿಯೂ ದೇವರಿಗೆ ಚರುಷ್ಟಾರ್ಚನೆ, ಪಂಚಾಮೃತ ಅಭಿಷೇಕ, ಶ್ರೀರಾಮ ತಾರಕ ಹೋಮ, ಸ್ವಾಮಿಯ ಉತ್ಸವ, ಅನ್ನಸಂತರ್ಪಣೆಗಳು ನಡೆದವು.

ಟಿ.ಕೆ.ಲೇಔಟ್‌ನ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಮುಂಜಾನೆ ದೇವರಿಗೆ ಅಭಿಷೇಕ, ವಿಶೇಷ ಪೂಜಾ ಕಾರ್ಯಗಳು ನೆರವೇರಿದವು. ದಸರಾ ವಸ್ತುಪ್ರದರ್ಶನ ಮೈದಾನದಲ್ಲಿರುವ ಪುರಾತನ ಶ್ರೀ ವೀರಾಂಜನೇಯಸ್ವಾಮಿ ದೇವಸ್ಥಾನದಲ್ಲಿ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡರ ನೇತೃತ್ವದಲ್ಲಿ ಧಾರ್ಮಿಕ ಪೂಜಾ ಕಾರ್ಯಗಳನ್ನು ನೆರವೇರಿಸಲಾಯಿತು. ಡಿ.ದೇವರಾಜ ಅರಸು ರಸ್ತೆಯಲ್ಲಿರುವ ಮಾರುತಿ ದೇವ ಸ್ಥಾನ, ಎಂ.ಜಿ.ರಸ್ತೆ ಪಾತಾಳಾಂಜನೇಯಸ್ವಾಮಿ ದೇವಸ್ಥಾನ, ಕುವೆಂಪುನಗರ ಕಾಂಪ್ಲೆಕ್ಸ್ ಆಂಜನೇಯಸ್ವಾಮಿ ದೇವಸ್ಥಾನ ಸೇರಿದಂತೆ ಮೈಸೂರಿನ ಎಲ್ಲಾ ಆಂಜನೇಯಸ್ವಾಮಿ ದೇವಾಲಯಗಳಲ್ಲಿ ಹನುಮ ಜಯಂತಿಯನ್ನು ಭಕ್ತಿಯಿಂದ ಆಚರಿಸಲಾಯಿತು. ಎಲ್ಲೆಡೆ ಭಕ್ತರಿಗೆ ಪ್ರಸಾದ ವಿನಿಯೋಗ ನಡೆಸಲಾಯಿತು.



ಮೈಸೂರಿನ ಟಿ.ಕೆ. ಲೇಔಟ್‌ನಲ್ಲಿರುವ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಹನುಮ ಜಯಂತಿ ಅಂಗವಾಗಿ ಆಂಜನೇಯಸ್ವಾಮಿಗೆ ವಿಶೇಷ ಅಲಂಕಾರ ಮಾಡಲಾಗಿತ್ತು.



ರಾಜ್ಯ ಧಾರ್ಮಿಕ ದತ್ತಿ ಇಲಾಖೆ ಶ್ರೀ ಪಂಚಮುಖಿ ಆಂಜನೇಯಸ್ವಾಮಿ ದೇವಸ್ಥಾನ ಇರ್ವಿನ್ ರಸ್ತೆ ವತಿಯಿಂದ ಹನುಮ ಜಯಂತಿ ಅಂಗವಾಗಿ ಡಿ.13ವರೆಗೆ ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಆಯೋಜಿಸಿದ್ದು, ಚಾಲನೆಯನ್ನು ದೇವಸ್ಥಾನದ ಪ್ರಧಾನ ಅರ್ಚಕ ವಿದ್ವಾನ್ ಎಸ್. ಕೃಷ್ಣಮೂರ್ತಿ ನೆರವೇರಿಸಿದರು.



ಮೈಸೂರು ದಸರಾ ವಸ್ತುಪ್ರದರ್ಶನ ಮೈದಾನದಲ್ಲಿರುವ ಪುರಾತನ ಶ್ರೀ ವೀರಾಂಜನೇಯಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಹೋಮ ನಡೆಯಿತು. ಚಿತ್ರದಲ್ಲಿ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ ಇನ್ನಿತರರಿದ್ದಾರೆ.



ಹನುಮ ಜಯಂತಿ ಅಂಗವಾಗಿ ಮೈಸೂರಿನ ಸದ್ವಿದ್ಯಾ ವೃತ್ತದಲ್ಲಿ ಶ್ರೀ ವೀರಾಂಜನೇಯ ಸ್ವಾಮಿ ದೇವಸ್ಥಾನದಲ್ಲಿ ವಿಶೇಷಪೂಜೆ ಸಲ್ಲಿಸಿ, ಸಾರ್ವಜನಿಕರಿಗೆ ಸಜ್ಜಿಗೆ ಪ್ರಸಾದ ವಿತರಿಸಲಾಯಿತು. ಚಿತ್ರದಲ್ಲಿ ಬಿಜೆಪಿ ಮುಖಂಡ ಆರ್.ಪರಮೇಶ್, ಸುರೇಂದ್ರ, ಲಕ್ಷ್ಮೀ ನಾಗೇಶ್, ಶ್ರೀನಿವಾಸ್, ರಾಘವೇಂದ್ರ ಇನ್ನಿತರರನ್ನು ಕಾಣಬಹುದು.



ದಸರಾ ವಸ್ತುಪ್ರದರ್ಶನ ಮೈದಾನದಲ್ಲಿರುವ ಶ್ರೀ ವೀರಾಂಜನೇಯಸ್ವಾಮಿ ದೇವಸ್ಥಾನದಲ್ಲಿ ದಸರಾ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡರ ನೇತೃತ್ವದಲ್ಲಿ ವಿಶೇಷ ಪೂಜೆ. ಚಿತ್ರದಲ್ಲಿ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ್, ಇತಿಹಾಸ ತಜ್ಞ ಶೆಲ್ವಪಿಳ್ಳೈ ಅಯ್ಯಂಗಾರ್, ಹೊಟೇಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣ ಗೌಡ, ಲೇಖಕ ಶ್ರೀಕಂಠಕುಮಾರ್ ಇನ್ನಿತರರನ್ನು ಕಾಣಬಹುದು.

ಅಪಾರ ಭಕ್ತರಿಂದ ಬಸವನಪುರದ ಗುಡ್ಡದ ಶ್ರೀ ಮುತ್ತುರಾಯ ಸ್ವಾಮಿ ದರ್ಶನ



ಮೈಸೂರು, ಡಿ.5(ಎಸ್‌ಪಿಎನ್)– ಹನುಮ ಜಯಂತಿ ಹಿನ್ನೆಲೆಯಲ್ಲಿ ಮೈಸೂರಿನ ವಿಜಯನಗರ 4ನೇ ಹಂತದ ಬಸವನಪುರ ಗ್ರಾಮದಲ್ಲಿನ ಗುಡ್ಡದ ಶ್ರೀ ಮುತ್ತುರಾಯ ಸ್ವಾಮಿ ದೇವಸ್ಥಾನಕ್ಕೆ ಶಾಸಕ ಜಿ.ಟಿ.ದೇವೇಗೌಡ ಸೋಮವಾರ ಭೇಟಿ ನೀಡಿ, ವಿಶೇಷ ಪೂಜೆ ಸಲ್ಲಿಸಿದರು. ಸೋಮವಾರ ಬೆಳಗ್ಗೆಯಿಂದಲೇ ಶ್ರೀ ಮುತ್ತುರಾಯ ಸ್ವಾಮಿಗೆ ಅಭಿಷೇಕ, ಅಗ್ನಿಹೋತ್ರ, ಗಣಹೋಮ, ಪವಮಾನ ಹೋಮ, ನವಗ್ರಹ ಹೋಮ ಸೇರಿದಂತೆ ಇತರೆ ಪೂಜಾ ಕೈಂಕರ್ಯಗಳು ನೆರವೇರಿದವು.

ಭಕ್ತರು ಹರಕೆ ಪದಾರ್ಥಗಳನ್ನು ದೇವರಿಗೆ ಸಲ್ಲಿಸಿದರಲ್ಲದೆ, ವಿವಿಧ ಸಂಘ–ಸಂಸ್ಥೆಗಳಿಂದ ಉಚಿತ ಆರೋಗ್ಯ ತಪಾಸಣೆ, ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು.

ಭಕ್ತರ ದಂಡು: ಹನುಮ ಜಯಂತಿ ಹಿನ್ನೆಲೆಯಲ್ಲಿ ದಸರಾ ವಸ್ತು ಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಹೇಮಂತ್ ಕುಮಾರ್ ಗೌಡ, ಬಿಜೆಪಿ ಮುಖಂಡ ಜಯಪ್ರಕಾಶ್ ಗೌಡ, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ್, ಸೇರಿದಂತೆ ಇತರರು ಭೇಟಿ ನೀಡಿ, ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು.

ಈ ವೇಳೆ ಶ್ರೀ ಮುತ್ತುರಾಯ ಸೇವಾ ಟ್ರಸ್ಟ್ ಗೌರವಾಧ್ಯಕ್ಷ ಚಲುವೇಗೌಡ, ಅಧ್ಯಕ್ಷ ಬಿ.ಶ್ರೀನಿವಾಸ್, ಕಾರ್ಯದರ್ಶಿ ಮೊಗಣ್ಣೆಗೌಡ, ಖಜಾಂಚಿ ಶ್ರೀಕಾಂತ, ಸುತ್ತಮುತ್ತ ಲಿನ ಗ್ರಾಮಸ್ಥರಾದ ಮನು, ಲೋಕೇಶ್, ರವಿ, ಚೇತನ್, ಚಂದ್ರಶೇಖರ್, ಉಜ್ವಲ್, ಕೃಷ್ಣಪ್ಪ ಸೇರಿದಂತೆ ಇತರೆ ಮುಖಂಡರು ಉಪಸ್ಥಿತರಿದ್ದು, ದೇವಸ್ಥಾನಕ್ಕೆ ವಿವಿಧೆಡೆ ಯಿಂದ ಆಗಮಿಸಿದ ಭಕ್ತಾದಿಗಳಿಗೆ ದೇವರ ದರ್ಶನಕ್ಕೆ ವ್ಯವಸ್ಥೆ ಮಾಡಿದರು.

ಹನುಮ ಜಯಂತಿ: ಆಯುರ್ವೇದ ಸಸಿ ವಿತರಣೆ



ಮೈಸೂರು, ಡಿ.5– ಮೈಸೂರಿನ ಚಾಮರಾಜ ಕ್ಷೇತ್ರದ ರೈತ ಮೋರ್ಚಾ ವತಿಯಿಂದ ಹನುಮ ಜಯಂತಿ ಪ್ರಯುಕ್ತ 1000 ಆಯುರ್ವೇದ ಸಸಿಗಳನ್ನು ಸಾರ್ವಜನಿಕರಿಗೆ ವಿತರಿಸಲಾಯಿತು. ಮೈಸೂರಿನ ಒಂಟಿಕೊಪ್ಪಲಿನ ಚಂದ್ರಮೌಳೇಶ್ವರ ದೇವಸ್ಥಾನದ ಮುಂಭಾಗ ಶಾಸಕ ನಾಗೇಂದ್ರ ಕಾರ್ಯಕ್ರಮ ಉದ್ಘಾಟಿಸಿ ಭಕ್ತರಿಗೆ ವೀಳ್ಯದೆಲೆ ರಾಮ ತುಳಿಸಿ, ತುಳಸಿ, ಇನ್ಸುಲಿನ್, ಟೀಚರ್, ಗೋರಂಟಿ, ಕೆಮ್ಮು ದಮ್ಮು, ರೋಗಗಳಿಗೆ ಉಪಯುಕ್ತವಾಗುವಂತಹ ಒಂದು ಸಾವಿರ ಗಿಡಗಳನ್ನು ವಿತರಿಸಿದರು.

ಶಾಸಕ ನಾಗೇಂದ್ರ ಮಾತನಾಡಿ, ಹನುಮ ಜಯಂತಿಯ ದಿನದಂದು ಸಸಿಗಳನ್ನು ನೀಡಿರುವುದು ಮನಸ್ಸಿಗೆ ತುಂಬಾ ಸಂತೋಷವಾಗಿದೆ. ಸಾರ್ವಜನಿಕರು ಎಲ್ಲ ಉಪಯುಕ್ತ ವಾದ ಗಿಡಗಳನ್ನು ತಮ್ಮ ತಮ್ಮ ಮನೆಯ ಮೇಲೆ ಬೆಳೆಸಬೇಕು. ನಿಮ್ಮ ಆರೋಗ್ಯದ ಹಿತದೃಷ್ಟಿಯಿಂದ ಆಯುರ್ವೇದ ಸಸಿಗಳು ತುಂಬಾ ಉಪಯೋಗವಾಗುತ್ತವೆ. ಮುಂದಿನ ದಿನಗಳಲ್ಲಿ ಮೈಸೂರಿನ ಪ್ರತಿಯೊಂದು ಮನೆಯಲ್ಲೂ ಆಯುರ್ವೇದ ಗಿಡಗಳನ್ನು ಬೆಳೆಸುವಂತೆ ಕರೆ ನೀಡಿದರು. ಈ ವೇಳೆ ಕೆ.ದೇವರಾಜ್, ಮಧು ಎನ್.ಪೂಜಾರ್, ಪ್ರಮೀಳಾ ವೀರಭದ್ರ, ಸೋಮಶೇಖರ್ ರಾಜು, ಪುನೀತ್, ರಮೇಶ್‌ಗೌಡ, ಮಂಜು ನಾಥ್, ಚಿಕ್ಕವೆಂಕಟು, ಎಂ.ಕುಮಾರ್, ಗುರುದತ್, ಮಹೇಶ್ ಮತ್ತಿತರರು ಹಾಜರಿದ್ದರು.



ಮೈಸೂರಿನ ಅಗ್ರಹಾರ ತ್ಯಾಗರಾಜ ರಸ್ತೆಯಲ್ಲಿರುವ ಶ್ರೀ ಚಿಕ್ಕ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಹನುಮ ಜಯಂತಿ ಪ್ರಯುಕ್ತ ಸೋಮವಾರ ವಿಶೇಷ ಪೂಜೆ ನೆರವೇರಿದ ಬಳಿಕ ದೇವಸ್ಥಾನ ಸೇವಾ ಸಮಿತಿ ವತಿಯಿಂದ ಭಕ್ತರಿಗೆ ಪ್ರಸಾದ ವಿತರಿಸಲಾಯಿತು.



ಮೈಸೂರು ಕಾರ್ಯಸಿದ್ಧಿ ವೀರಾಂಜನೇಯ ಸ್ವಾಮಿ ದೇವಸ್ಥಾನ ಹಾಗೂ ಆಟೋ ಚಾಲಕರ ಮಾಲೀಕರ ಸಂಘದ ವತಿಯಿಂದ ಸೋಮವಾರ ಏರ್ಪಡಿಸಿದ್ದ ಹನುಮ ಜಯಂತಿ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದ ಸಾಧಕರಿಗೆ ಮಾಜಿ ಕಾರ್ಪೋರೇಟರ್ ಹಾಗೂ ಕೃಷ್ಣರಾಜ ಕ್ಷೇತ್ರದ ಕಾಂಗ್ರೆಸ್ ಮುಖಂಡ ಎಂ.ಪ್ರದೀಪ್‌ಕುಮಾರ್ ಸಮಾಜ ಸೇವಾ ರತ್ನ ಪ್ರಶಸ್ತಿ ನೀಡಿ, ಆತ್ಮೀಯವಾಗಿ ಗೌರವಿಸಿದರು. ಇದೇ ವೇಳೆ ಸಾರ್ವಜನಿಕರಿಗೆ ಅನ್ನಸಂತರ್ಪಣೆ ಕೂಡ ಮಾಡಲಾಯಿತು.

ಒಂದನೇ ಪುಟದಿಂದ

ಬೆಳವಾಡಿ ಶಿವಮೂರ್ತಿ

ಅದಕ್ಕೆ ಬದ್ಧರಾಗಬೇಕಾಗುತ್ತದೆ ಎಂದು ನಾನು ಹೇಳಿದ್ದೆ. ಸ್ನೇಹಿತರು ಕಾಂಗ್ರೆಸ್‌ಗೆ ಹೋಗಲು ತೀರ್ಮಾನಿಸಿದರು. ನನ್ನನ್ನೂ ಕರೆದರು. ಆದರೆ, ನಾನು ಜೆಡಿಎಸ್ ಬಿಡುವುದಿಲ್ಲ ಎಂದು ಹೇಳಿದ್ದೇನೆ. ಅವರನ್ನೂ ಕೂಡ ಪಕ್ಷಕ್ಕೆ ಬರುವಂತೆ ಕರೆಯುತ್ತಿದ್ದೇನೆ. ಕುಮಾರಸ್ವಾಮಿಯವರು ಕೂಡ ಅವರನ್ನು ಮರಳಿ ಪಕ್ಷಕ್ಕೆ ಕರೆತರುವಂತೆ ನನಗೆ ಹೇಳಿದ್ದಾರೆ ಎಂದರು.

ಜಿ.ಟಿ.ದೇವೇಗೌಡರಿಂದ ನನಗೆ ಯಾವುದೇ ರೀತಿಯ ಅನ್ಯಾಯ ಆಗಿಲ್ಲ ಎಂದು ಸ್ಪಷ್ಟಪಡಿಸಿದ ಶಿವಮೂರ್ತಿ, ನನ್ನ ಪತ್ನಿಯನ್ನು ಜಿಪಂ ಅಧ್ಯಕ್ಷರನ್ನಾಗಿ ಮಾಡಿದ್ದರು. ನಾನು ಜಿಪಂ ಚುನಾವಣೆಯಲ್ಲಿ ಸ್ಪರ್ಧಿಸಿದಾಗ ಜಿಟಿಡಿ, ಅವರ ಪುತ್ರ ಹರೀಶ್‌ಗೌಡ, ನನ್ನ ಪರವಾಗಿ ಕೆಲಸ ಮಾಡಿದ್ದಾರೆ. ಆದರೆ ಜನರು ನನಗೆ ಮತ ಕೊಡಲಿಲ್ಲ. ಹೀಗಾಗಿ ಸೋತಿದ್ದೇನೆ. ಮುಂಬರುವ ಚುನಾವಣೆಯಲ್ಲಿ ಜಿ.ಟಿ. ದೇವೇಗೌಡರಿಗೆ ಹ್ಯಾಟ್ರಿಕ್ ಗೆಲುವು ತಂದು ಕೊಡುವುದು ನನ್ನ ಉದ್ದೇಶ ಎಂದರು.

ಅವರಿಗೆ ಇನ್ನೂ ಹೆಚ್ಚಿನ ಅಧಿಕಾರ ಬೇಕಿರಬಹುದು: ಇದೇ ವೇಳೆ ಸುದ್ದಿಗಾರರೊಂದಿಗೆ ಜಿ.ಟಿ. ದೇವೇಗೌಡರು, ನಾನು ಶಿವಮೂರ್ತಿ ಅವರನ್ನು ಸೆಳೆದಿಲ್ಲ. ಅವರು ಕಳೆದ 40 ವರ್ಷದಿಂದ ಜೆಡಿಎಸ್‌ನಲ್ಲಿದ್ದಾರೆ. ಅದೇ ರೀತಿ ಈಗಲೂ ಇದ್ದಾರೆ ಎಂದರು. ನನ್ನ ವಿರುದ್ಧ ಅವರು ಗುಂಪು ಕಟ್ಟಲಿಲ್ಲ. ನಾನು ತಟಸ್ಥವಾಗಿದ್ದಾಗ ಪಕ್ಷ ಸಂಘಟನೆ ಮಾಡಲೇಬೇಕಾದ ಅನಿವಾರ್ಯತೆ ಇದ್ದುದ್ದರಿಂದ ಹೆಚ್.ಡಿ.ಕುಮಾರಸ್ವಾಮಿ ಅವರ ಸೂಚನೆ ಮೇರೆಗೆ ಶಿವಮೂರ್ತಿ ಪಕ್ಷ ಸಂಘಟನೆಗಾಗಿ ತಂಡ ಕಟ್ಟಿದರು.

ಹೆಚ್.ಡಿ. ದೇವೇಗೌಡರು, ಕುಮಾರಸ್ವಾಮಿ, ರೇವಣ್ಣ ಅವರುಗಳು ನಮ್ಮ ಮನೆಗೆ ಬಂದರು. ಹೆಚ್.ಡಿ. ದೇವೇಗೌಡರು ಅನಾರೋಗ್ಯದ ಸಂದರ್ಭದಲ್ಲೂ ನನ್ನ ಮನೆಗೆ ಬಂದು ಪಕ್ಷದಲ್ಲಿ ಮುಂದುವರಿಯುವಂತೆ ಹೇಳಿದಾಗ ಚಕಾರವೆತ್ತದೆ ನಾನು ಒಪ್ಪಿಕೊಂಡೆ. ಜೆಡಿಎಸ್‌ನಿಂದ ಯಾರನ್ನೂ ನಾನು ಹೊರ ಹಾಕುವುದಿಲ್ಲ. ನನ್ನ ವಿರುದ್ಧ ಎಷ್ಟೇ ಕೆಲಸ ಮಾಡಿದ್ದರೂ ಅವರನ್ನು ಪಕ್ಷದಿಂದ ತೆಗೆದಿಲ್ಲ ಎಂದರು. ಪಕ್ಷದ ಮೇಲೆ ಪ್ರೀತಿ, ಹೆಚ್.ಡಿ.ದೇವೇಗೌಡರು ಮತ್ತು ಕುಮಾರಸ್ವಾಮಿಯವರ ಮೇಲೆ ನಂಬಿಕೆ ಇರುವವರು ಹೈಕಮಾಂಡ್ ನನ್ನ ಮನೆಗೆ ಬಂದಾಗಲೇ ಮನೆಗೆ ಬರಬೇಕಾಗಿತ್ತು. ಆದರೆ, ಬರಲಿಲ್ಲ. ಅವರು ಅಧಿಕಾರ ಅನುಭವಿಸಿದ್ದಾರೆ. ಇನ್ನೂ ಹೆಚ್ಚಿನ ಅಧಿಕಾರ ಬೇಕೆಂದು ಅವರಿಗೆ ಅನ್ನಿಸಿರಬಹುದು. ಎಂಎಲ್ಎ ಮಾಡುತ್ತೇನೆ ಎಂದು ಸಿದ್ದರಾಮಯ್ಯ ಹೇಳಿದ್ದಾರೆ. ಹೀಗಾಗಿ ಅವರ ಬಳಿಗೆ ಹೋಗಿದ್ದಾರೆ. ಅವರು ನನ್ನ ವಿರುದ್ಧ ಸ್ಪರ್ಧಿಸಲೂಬಹುದು. ಆದರೆ, ಜನರು ತೀರ್ಮಾನ ಮಾಡುತ್ತಾರೆ ಎಂದರಲ್ಲದೇ, ಈಗಲೂ ಕೂಡ ಅವರೊಂದಿಗೆ ಮಾತುಕತೆ ನಡೆಸಲು ನಾನು ಸಿದ್ಧನಾಗಿದ್ದೇನೆ ಎಂದರು. ಪ್ರಶ್ನೆಯೊಂದಕ್ಕೆ ಉತ್ತರಿಸಿದ ಗೌಡರು, ಅವರುಗಳು ಮೀಡಿಯಾದಲ್ಲಿದ್ದಾರೆಯೇ ಹೊರತು, ಜನರೊಂದಿಗಿಲ್ಲ ಎಂದರು.

ಬಿಲ್ ಪಾವತಿಗೆ ನೀರಸ ಪ್ರತಿಕ್ರಿಯೆ

ಅವಕಾಶ ನೀಡಿ ಕೌನ್ಸಿಲ್ ಸಭೆಯಲ್ಲಿ ನಿರ್ಣಯ ಕೈಗೊಂಡು ನಂತರ ಜಾರಿಗೊಳಿಸಲಾಗಿತ್ತು. ಆದರೆ ಪ್ರಸಕ್ತ ವರ್ಷದ ಜುಲೈನಿಂದ ನವೆಂಬರ್ ಮಾಹೆವರೆಗೆ 1,674 ಗ್ರಾಹಕರು ಮಾತ್ರ ಈ ಅವಕಾಶವನ್ನು ಬಳಸಿಕೊಂಡಿದ್ದಾರೆ ಎಂದು ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಜಿ. ಲಕ್ಷ್ಮೀಕಾಂತ ರೆಡ್ಡಿ ತಿಳಿಸಿದ್ದಾರೆ.

5 ತಿಂಗಳಲ್ಲಿ 4 ಕೋಟಿ: ಜುಲೈ ತಿಂಗಳಲ್ಲಿ 36 ನೀರಿನ ಬಳಕೆದಾರರು 6,80,724 ರೂ., ಆಗಸ್ಟ್‌ನಲ್ಲಿ 123 ಮಂದಿ 22,93,973 ರೂ., ಸೆಪ್ಟೆಂಬರ್‌ನಲ್ಲಿ 366 ಮಂದಿ 84,34,063 ರೂ., ಅಕ್ಟೋಬರ್‌ನಲ್ಲಿ 491 ಮಂದಿ 1,21,05,813 ರೂ. ಹಾಗೂ ನವೆಂಬರ್ ಮಾಹೆಯಲ್ಲಿ 658 ಮಂದಿ 1,65,46,294 ರೂ.ಗಳ ಬಾಕಿ ನೀರಿನ ತೆರಿಗೆಯ ಅಸಲನ್ನು 'ಒನ್ ಟೈಮ್ ಸೆಟಲ್‌ಮೆಂಟ್'ನಡಿ ಪಾವತಿಸಿದ್ದಾರೆ. ಅಂದರೆ ಕಳೆದ 5 ತಿಂಗಳಲ್ಲಿ ಒಟ್ಟು 1,674 ನೀರು ಬಳಕೆದಾರರಿಂದ ಒಟ್ಟು 4,00,60,867 ರೂ. ಪಾವತಿಯಾಗಿದೆ. ಇದಕ್ಕೆ ಸಂಬಂಧಿಸಿದ ಒಟ್ಟು 2,01,83,381 ರೂ. ಬಡ್ಡಿ ಹಣ ಬೆಯನ್ಸ್‌ನಲ್ಲಿ ಉಳಿದಿದೆ ಎಂದು ವಿವರಿಸಿದರು.

ಸರ್ಕಾರ ತೀರ್ಮಾನ: ಕೈಗಾರಿಕೆ ಮತ್ತು ವಾಣಿಜ್ಯ ಸಂಪರ್ಕ ಹೊರತುಪಡಿಸಿ ಕೇವಲ ಗೃಹಬಳಕೆ ನೀರಿನ ಸಂಪರ್ಕ ಹೊಂದಿರುವವರಿಗೆ ಮಾತ್ರ ಬಡ್ಡಿ ಸ್ಥಿರೀಕರಣದೊಂದಿಗೆ ಒಂದೇ ಬಾರಿ ಬಿಲ್ ಪಾವತಿಸುವ ಅವಕಾಶ ಒದಗಿಸಲಾಗಿದೆ. ಆದರೆ ಬಡ್ಡಿ ಮನ್ನಾ ಮಾಡುವ ಅಥವಾ ರಿಯಾಯ್ತಿ ನೀಡುವ ಸಂಬಂಧ ಕೌನ್ಸಿಲ್ ಸಭೆಯಲ್ಲಿ ನಿರ್ಣಯ ಕೈಗೊಂಡು ಬಳಿಕ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಆ ಪ್ರಸ್ತಾವನೆಯನ್ನು ಪರಿಶೀಲನೆ ನಡೆಸಿ ಸರ್ಕಾರ ತೀರ್ಮಾನಿಸುವವರೆಗೆ ನೀರಿನ ತೆರಿಗೆ ಬಾಕಿ ಮೇಲೆ ವಿಧಿಸಿರುವ ಬಡ್ಡಿ ಹೊರತುಪಡಿಸಿ ಅಸಲು ಹಣ ಪಾವತಿಸುವಂತೆ ಆಯುಕ್ತ ಲಕ್ಷ್ಮೀಕಾಂತ ರೆಡ್ಡಿ ತಿಳಿಸಿದ್ದಾರೆ.

74 ಕೋಟಿ ರೂ.ಬಡ್ಡಿ: ಒಟ್ಟು 220 ಕೋಟಿ ರೂ. ಬಾಕಿಯಲ್ಲಿ 146 ಕೋಟಿ ರೂ. ನೀರಿನ ಮೂಲ ತೆರಿಗೆಯಾಗಿದ್ದು ಇನ್ನುಳಿದ 74 ಕೋಟಿ ರೂ. ಬಾಕಿ ಮೇಲೆ ವಿಧಿಸಿರುವ ಬಡ್ಡಿಯಾಗಿದೆ. ಗೃಹ ಬಳಕೆದಾರರ ಸುಮಾರು 108 ಕೋಟಿ ರೂ. ಬಾಕಿಯ ಮೇಲಿನ ಬಡ್ಡಿ ಮನ್ನಾ ಮಾಡುವ ಸಂಬಂಧ ರಾಜ್ಯ ಸರ್ಕಾರ ನಿರ್ಧಾರ ಕೈಗೊಳ್ಳಬೇಕಿದೆ ಎಂದರು.

110 ಎಂಎಲ್‌ಡಿ ಲೆಕ್ಕವಿಲ್ಲ: ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 1,80,000 ನೀರಿನ ಸಂಪರ್ಕ ಇವೆ. ಇದರಲ್ಲಿ 40,000 ಅನಧಿಕೃತ ಸಂಪರ್ಕವಾಗಿದ್ದು, 12,000 ದೋಷಪೂರಿತ ಮೀಟರ್ ಪತ್ತೆಯಾಗಿವೆ. ಇದರಿಂದ ನೀರಿನ ಸೋರಿಕೆ ಜೊತೆಗೆ ಪಾಲಿಕೆ ಆದಾಯಕ್ಕೂ ಖೋತಾ ಆಗಿ ನಗರ ನಿರ್ವಹಣೆಗೆ ಸಮಸ್ಯೆಯಾಗಿದೆ. ನಿತ್ಯ 270 ಮಿಲಿಯನ್ ಲೀಟರ್(ಎಂಎಲ್‌ಡಿ) ನೀರು ಮೈಸೂರು ನಗರಕ್ಕೆ ಸರಬರಾಜಾಗುತ್ತಿದ್ದು, ಅದರಲ್ಲಿ 160 ಮಿಲಿಯನ್ ಲೀಟರ್ ಲೆಕ್ಕ ಮಾತ್ರ ಸಿಗುತ್ತಿದೆ. ಉಳಿದ ನೀರು ಅನಧಿಕೃತವಾಗಿ ಬಳಸಲಾಗುತ್ತಿದೆ. ನೀರನ್ನು ಮಿತವಾಗಿ ಬಳಸುವುದರ ಜೊತೆಗೆ ಸರಿಯಾಗಿ ತೆರಿಗೆ ಪಾವತಿಸಿದರೆ ಮಾತ್ರ ನಾಗರಿಕರಿಗೆ ಉತ್ತಮ ಸೇವೆ ಒದಗಿಸಲು ಮೈಸೂರು ಮಹಾನಗರ ಪಾಲಿಕೆಗೆ ಸಾಧ್ಯವಾಗುತ್ತದೆ ಎಂದು ಮೇಯರ್ ಶಿವಕುಮಾರ್ ಮತ್ತು ಆಯುಕ್ತ ಜಿ.ಲಕ್ಷ್ಮೀಕಾಂತ ರೆಡ್ಡಿ ತಿಳಿಸಿದ್ದಾರೆ.

ಕೆಲವು ಗೃಹ ಬಳಕೆಗೆ ಅಸಾಧಾರಣ ನೀರಿನ ಬಿಲ್!

ನಮಗೆ ಅವಕಾಶವಿಲ್ಲ ಎಂದು ನಮೂದಿಸಲಾಗಿದೆ. ಈ ಬಗ್ಗೆ ದೂರು ನೀಡಿ, ಒತ್ತಡ ಹೇರಿದ್ದರ ಪರಿಣಾಮ ವಾಟರ್ ವರ್ಕ್ಸ್ ಅಧಿಕಾರಿಗಳು ಬಂದು ಮೀಟರ್ ಪರಿಶೀಲಿಸಿದ್ದರಾದರೂ, ಅಸಾಧಾರಣ ನೀರಿನ ಬಿಲ್ ಸರಿಪಡಿಸಿಲ್ಲ. ಆದ್ದರಿಂದ ನಮಗೆ ಬಿಲ್ ಪಾವತಿಸಲೂ ಸಾಧ್ಯವಾಗಿಲ್ಲ. ಅಸಾಧಾರಣ ಬಿಲ್ ನೀಡಿರುವ ಬಗ್ಗೆ ಪರಿಶೀಲಿಸಿ ಸಮಸ್ಯೆಯನ್ನು ಸರಿಪಡಿಸುವರೋ? ಇಲ್ಲವೇ ಬಿಲ್‌ನಲ್ಲಿ ನೀಡಿರುವುದನ್ನೂ ಪಾವತಿಸಬೇಕೇ? ಎಂಬ ಗೊಂದಲವಿದೆ. ಇನ್ನು ಡಿಸೆಂಬರ್ ತಿಂಗಳ ಬಿಲ್ ಎಷ್ಟಿರುವುದೋ? ಎಂದು ಮತ್ತೊಬ್ಬರು ಆತಂಕ ವ್ಯಕ್ತಪಡಿಸಿದ್ದಾರೆ.

ಅದೇ ರೀತಿ ಮೈಸೂರಿನ ಹಲವು ವಸತಿ ಬಡಾವಣೆಗಳಲ್ಲಿ ಮೀಟರ್ ಓಡುತ್ತಿಲ್ಲ ಎಂದು ಅಂದಾಜು ಬಿಲ್ ನೀಡಲಾಗುತ್ತಿದೆ. ಗ್ರಾಹಕರಿಂದ ದೂರು ಕೇಳಿಬಂದ ತಕ್ಷಣವೇ ಅಧಿಕಾರಿಗಳು ಸ್ಪಂದಿಸುವುದಿಲ್ಲ ಎಂದು ಕೆಲವರು ಬೇಸರ ವ್ಯಕ್ತಪಡಿಸಿದ್ದಾರೆ.

ಒಂದನೇ ಪುಟದಿಂದ

ಸಮುದಾಯಗಳ ವಿಶೇಷ ಅಧಿವೇಶನ

ಎಂದು ಆಗ್ರಹಿಸಿದರು. ಸಂವಿಧಾನದಲ್ಲಿ ಆರ್ಥಿಕವಾಗಿ ಹಿಂದುಳಿದ ವರ್ಗಕ್ಕೆ ಮೀಸಲಾತಿ ನೀಡುವುದಕ್ಕೆ ಅವಕಾಶ ನೀಡಿಲ್ಲ. ಆದರೂ, ಮೇಲ್ವರ್ಗದ ಹಿಂದುಳಿದವರಿಗೆ ಶೇ.10ರಷ್ಟು ಮೀಸಲಾತಿ ನೀಡಲಾಗಿದೆ. ಜನಸಂಖ್ಯೆಯಲ್ಲಿ ಶೇ.3–4ರಷ್ಟು ಜನ ಇರುವ ಈ ವರ್ಗಕ್ಕೆ ಮೀಸಲಾತಿ ನೀಡಿರುವುದು ಅನುಮಾನಕ್ಕೆ ಎಡೆಮಾಡಿಕೊಟ್ಟಿದೆ. ಇದಕ್ಕೆ ನಮ್ಮ ವಿರೋಧವಿಲ್ಲ. ಆದರೆ, ಶೇ.60ರಷ್ಟು ಇರುವ ಹಿಂದುಳಿದ ವರ್ಗಗಳ ಸಮುದಾಯಗಳಿಗೆ ಶೇ.15ರಷ್ಟು ಮೀಸಲಾತಿ ನೀಡಲಾಗಿದೆ. 200ಕ್ಕೂ ಹೆಚ್ಚು ಜಾತಿ ಇರುವ ಈ ವರ್ಗಗಳಿಗೆ ಇದು ಸಾಲುವುದಿಲ್ಲ. ಈ ಹಿಂದೆಯೇ ಮಂಡಲ್ ವರದಿಯಲ್ಲಿ ಹಿಂದುಳಿದ ವರ್ಗಗಳಿಗೆ ಶೇ.27ರಷ್ಟು ಮೀಸಲಾತಿ ನೀಡಬೇಕು ಎಂದು ಉಲ್ಲೇಖಿಸಲಾಗಿದೆ. ಪ್ರವರ್ಗ 1ರ ಸಮುದಾಯಗಳಿಗೆ ನೀಡಿರುವ ಶೇ.4ರ ಮೀಸಲಾತಿ ಸೌಲಭ್ಯವನ್ನು ಶೇ.9ಕ್ಕೆ ಹೆಚ್ಚಿಸಬೇಕು ಎಂದು ಒತ್ತಾಯಿಸಿದರು.

ಪ್ರವರ್ಗ 2 'ಎ'ಗೆ ಪಂಚಮಸಾಲಿ ಸೇರಿಸಲು ವಿರೋಧ: ಪಂಚಮಸಾಲಿ ಸಮುದಾಯ ಆರ್ಥಿಕವಾಗಿ, ಸಾಮಾಜಿಕವಾಗಿ ಸದೃಢವಾಗಿದೆ. ಇದನ್ನು ಪ್ರವರ್ಗ 2'ಎ'ಗೆ ಸೇರಿಸುವಂತೆ ಕೇಳುವುದಕ್ಕೆ ನಮ್ಮ ವಿರೋಧವಿದೆ. ಆದರೆ, ಅವರು ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿಗೆ ಹೋರಾಟ ನಡೆಸಿದರೆ ಅದಕ್ಕೆ ನಮ್ಮ ಸಹಮತವಿದೆ. ಪ್ರಭಾವಿ ಸಮುದಾಯಗಳು ಮೀಸಲಾತಿ ಕೇಳೋದು ಸಂವಿಧಾನದ ಆಶಯಕ್ಕೆ ಧಕ್ಕೆಯುಂಟು ಮಾಡುವಂತಿದೆ. ಹಿಂದುಳಿದ ವರ್ಗಗಳಲ್ಲಿ ಸಣ್ಣ ಪುಟ್ಟ ಸಮುದಾಯಗಳು ಇಂದಿಗೂ ಸಮಾಜದ ಮುಖ್ಯವಾಹಿನಿಗೆ ಬರಲು ಸಾಧ್ಯವಾಗದೇ ಸಂಕಷ್ಟದ ಸ್ಥಿತಿಯಲ್ಲಿವೆ. ಇದುವರೆಗೆ ಗ್ರಾ.ಪಂ ಸದಸ್ಯರಾಗಿಯೂ ಆಯ್ಕೆಯಾಗಿಲ್ಲದ ಹಲವು ಸಮುದಾಯಗಳಿವೆ. ಪರಿಸ್ಥಿತಿ ಹೀಗಿದ್ದರೂ ಹಿಂದುಳಿದ ವರ್ಗಗಳಿಗೆ ನೀಡಲಾಗುವ ಮೀಸಲಾತಿಯನ್ನು ಪ್ರಭಾವಿ ಸಮುದಾಯಕ್ಕೆ ಹಂಚಿಕೆ ಮಾಡುವುದು ಸರಿಯಲ್ಲ. ಸವಿತ, ಮಡಿವಾಳ ಸಮುದಾಯಗಳು ಪರಿಶಿಷ್ಟ ಜಾತಿಗೆ ಸೇರಿಸುವಂತೆ ಸಾಕಷ್ಟು ಹೋರಾಟ ಮಾಡುತ್ತಿವೆ. ಅದಕ್ಕೆ ಸಮಿತಿ ರಚಿಸಿ, ಪರಿಸ್ಥಿತಿ ಅವಲೋಕಿಸಿ ಸೂಕ್ತ ನಿರ್ಧಾರ ತೆಗೆದುಕೊಂಡು ಶೋಷಿತ ಸಮುದಾಯಗಳಿಗೆ ನ್ಯಾಯ ದೊರಕಿಸಿಕೊಡಬೇಕು ಎಂದು ಆಗ್ರಹಿಸಿದರು.

ಹಿಂದುಳಿದ ವರ್ಗಗಳ ಅವಕಾಶ ಕಸಿಯುವ ಸಂಚು ನಡೆಸಲಾಗುತ್ತಿದೆ. ಹಿಂದುಳಿದ ವರ್ಗಗಳನ್ನು ಗುರಿಯಾಗಿಸಿಕೊಂಡು ಪೂರ್ಣ ಪ್ರಮಾಣದಲ್ಲಿ ಮೀಸಲಾತಿ ರದ್ದುಗೊಳಿಸುವ ಹುನ್ನಾರ ನಡೆಸಲಾಗುತ್ತಿದೆ. ಇದು ಆರ್‌ಎಸ್‌ಎಸ್ ಅಜೆಂಡಾವಾಗಿದ್ದು, ವರ್ಗ ಸಂಘರ್ಷ ಉಂಟು ಮಾಡಿ ಮೀಸಲಾತಿಯನ್ನೇ ರದ್ದು ಮಾಡಲು ಸದ್ದಿಲ್ಲದೆ ಸಂಚು ನಡೆಸಲಾಗುತ್ತಿದೆ ಎಂದು ಆರೋಪಿಸಿದರು. ಶತಮಾನಗಳಿಂದಲೂ ಅಸಮಾನತೆ ಶೋಷಿತ ಸಮುದಾಯವನ್ನು ಕಾಡುತ್ತಿದೆ. ಇಂದಿಗೂ ಹಲವೆಡೆ ಶೋಷಿತ ಸಮುದಾಯದವರನ್ನು ದೇವಾಲಯಕ್ಕೆ ಸೇರಿಸುತ್ತಿಲ್ಲ. ಮಡೆಸ್ನಾನ, ಎಡೆಸ್ನಾನ, ಪಂಕ್ತಿಭೇದ ಮಾಡಲಾಗುತ್ತಿದೆ. ದಲಿತ ಮಹಿಳೆ ನೀರು ಕುಡಿದರೆ ತೊಂಬೆಯನ್ನು ಗಂಜಲ ಹಾಕಿ ಶುದ್ಧೀಕರಿಸಲಾಗಿದೆ. ಪಾನಿಪುರಿ ತಿಂದ ಕಾರಣಕ್ಕೆ ದಲಿತ ಯುವಕನನ್ನು ಕೊಲೆ ಮಾಡಲಾಗಿದೆ. ಗುಲಾಮಗಿರಿ ಪದ್ಧತಿ ಜಾರಿಗೊಳಿಸುವ ಸಂಚನ್ನು ಆರ್‌ಎಸ್‌ಎಸ್ ಬಯಸುತ್ತಿದೆ. ಎಸ್‌ಸಿ, ಎಸ್ಟಿ, ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ನೀಡುತ್ತಿದ್ದ ವಿದ್ಯಾರ್ಥಿ ವೇತನ ಸ್ಥಗಿತಗೊಳಿಸಲಾಗಿದೆ. ಅಲ್ಲದೆ, ಒಮ್ಮೆ ವಿದ್ಯಾರ್ಥಿನಿಲಯದ ಸೌಲಭ್ಯ ಪಡೆದವರಿಗೆ ಮತ್ತೊಂದು ಪದವಿ ಮಾಡಲು ಸೌಲಭ್ಯ ನಿರಾಕರಿಸುವ ಆದೇಶ ಮಾಡಲಾಗಿದೆ ಎಂದು ದೂರಿದರು.

ವಿಧಾನಪರಿಷತ್ ಸದಸ್ಯ ಡಾ. ಡಿ.ತಿಮ್ಮಯ್ಯ ಮಾತನಾಡಿ, ರಾಜ್ಯದಲ್ಲಿ ಹಿಂದುಳಿದ ವರ್ಗ ಹಾಗೂ ಶೋಷಿತ ಸಮುದಾಯಗಳ ಪರವಾಗಿ ಗಟ್ಟಿಯಾಗಿ ಮಾತನಾಡುವ ಏಕೈಕ ವ್ಯಕ್ತಿ ಎಂದರೆ ಸಿದ್ದರಾಮಯ್ಯನವರೇ ಆಗಿದ್ದಾರೆ. ಎಲ್ಲೆಡೆ ಸಿದ್ದರಾಮಯ್ಯ ಅವರಿಗೆ ಜನಮನ್ನಣೆ ವ್ಯಕ್ತವಾಗುತ್ತಿದೆ. ಇದನ್ನು ಸಹಿಸದೆ ಬಿಜೆಪಿ ನಾಯಕರು ಸಿದ್ದರಾಮಯ್ಯ ಅವರನ್ನು ಗುರಿಯಾಗಿಸಿಕೊಂಡು ದಾಳಿ ಮಾಡುತ್ತಿದ್ದಾರೆ. ಸಿದ್ದರಾಮಯ್ಯ ಶಕ್ತಿ ಕುಗ್ಗಿಸಿದರೆ ಅಹಿಂದ ಧ್ವನಿ ಕುಗ್ಗುತ್ತದೆ ಎಂದು ಭಾವಿಸಿ ಸಂಚು ನಡೆಸಲಾಗುತ್ತಿದೆ. ಇದನ್ನು ಹಿಂದುಳಿದ ವರ್ಗ, ಶೋಷಿತ ಸಮುದಾಯ ಅರ್ಥ ಮಾಡಿಕೊಳ್ಳಬೇಕು ಎಂದರು.

ಮಾಜಿ ಮೇಯರ್ ಅನಂತು ಮಾತನಾಡಿ, ಮಾರಕ ಯೋಜನೆ, ಕಾರ್ಯಕ್ರಮ ಜಾರಿಗೊಳಿಸಿದರೂ ಹಿಂದುಳಿದ ವರ್ಗಗಳನ್ನು ಸಮಾಧಾನ ಮಾಡಬಹುದು ಎಂದು ಬಿಜೆಪಿ ಮತ್ತು ಆರ್‌ಎಸ್‌ಎಸ್ ನಾಯಕರು ತಿಳಿದುಕೊಂಡಿದ್ದಾರೆ. ಈ ಮೂಲಕ ನಮ್ಮ ಹೋರಾಟಗಳನ್ನು ಸಾಯಿಸುತ್ತಿದ್ದಾರೆ. ಈ ಹಿಂದೆ ನಾನು ಕೂಡ ಆರ್‌ಎಸ್‌ಎಸ್‌ನಲ್ಲಿದ್ದೆ. ನಮ್ಮನ್ನು ಗಲಾಟೆಗೆ, ಕಲ್ಲು ತೂರಾಟಕ್ಕೆ ಪ್ರಚೋದಿಸುತ್ತಿದ್ದರು. ಇದರಿಂದ ಸಾಕಷ್ಟು ಕೇಸ್ ನಮ್ಮ ಮೇಲಿದೆ. ಹಿಂದುಳಿದ ವರ್ಗಗಳಲ್ಲಿ ಒಗ್ಗಟ್ಟಿಲ್ಲ. ಅದರ ಫಲ ಬಿಜೆಪಿಗೆ ಸಿಕ್ಕುತ್ತಿದೆ. ಹಿಂದುಳಿದ ವರ್ಗಗಳ ಏಕೈಕ ನಾಯಕ ಸಿದ್ದರಾಮಯ್ಯ ಅವರಿಗೆ ಶಕ್ತಿ ತುಂಬಲು ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಒಗ್ಗಟ್ಟು ತೋರಿಸಬೇಕು. 2023ರಲ್ಲಿ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗದಿದ್ದರೆ ಇನ್ನು ಶೋಷಿತ ಸಮುದಾಯ ಶಾಶ್ವತವಾಗಿ ತಲೆತಗ್ಗಿಸಿಕೊಂಡು ಇರಬೇಕಾದ ದುಸ್ಥಿತಿ ಎದುರಾಗಲಿದೆ ಎಂದು ವಿಷಾದಿಸಿದರು.

ಪಾಲಿಕೆಯ ಮಾಜಿ ಸದಸ್ಯ ಡಿ.ನಾಗಭೂಷಣ್ ಮಾತನಾಡಿ, ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಸೌಲಭ್ಯ ಹೆಚ್ಚಳಕ್ಕೆ ಆಗ್ರಹಿಸಿ ಸಮಾವೇಶ ಮಾಡಲು ಈ ಹಿಂದೆ ನಿರ್ಧರಿಸಲಾಗಿತ್ತು. ಅದನ್ನು ಬಿಜೆಪಿಯ ಹಿಂದುಳಿದ ವರ್ಗದ ನಾಯಕರೊಬ್ಬರು ತಡೆದರು. ಈಗ ಹೋರಾಟ ಮಾಡಬೇಕಾದ ಅನಿವಾರ್ಯತೆ ಇದೆ. ಎಸ್‌ಸಿ, ಎಸ್ಟಿ ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಸ್ಥಗಿತಗೊಳಿಸಲಾಗಿದೆ. ವಿದ್ಯಾರ್ಥಿಗಳನ್ನು ಒಗ್ಗೂಡಿಸಿಕೊಂಡು ಹಿಂದುಳಿದ ವರ್ಗ ಸಂಘಟಿತವಾಗಿ ಮಾಜಿ ಸಿಎಂ ಸಿದ್ದರಾಮಯ್ಯ ಅವರಿಗೆ ಶಕ್ತಿ ತುಂಬಬೇಕು ಎಂದು ಮನವಿ ಮಾಡಿದರು.

ಎಸ್‌ಡಿಪಿಐ ರಾಜ್ಯ ಉಪಾಧ್ಯಕ್ಷ ಪುಟ್ಟನಂಜಯ್ಯ ಮಾತನಾಡಿ, ಈ ಹಿಂದೆ ಗೂಡ್ಸೆ, ಮಹಾತ್ಮ ಗಾಂಧೀಜಿ ಅವರ ಕಾಲಿಗೆ ಬಿದ್ದು, ನಂತರ ಮೇಲೆದ್ದು ಗುಂಡು ಹಾರಿಸಿದರು. ಈಗ ಪ್ರಧಾನಿ ಮೋದಿ ಸಂವಿಧಾನದ ಪ್ರತಿಗೆ ನಮಸ್ಕರಿಸಿ, ನಂತರ ಸಂವಿಧಾನದ ಆಶಯಕ್ಕೆ ಗುಂಡು ಹೊಡೆಯುತ್ತಿದ್ದಾರೆ. ಬಿಜೆಪಿಯೇತರರೂ ಯಾವುದೇ ಹುದ್ದೆಯಲ್ಲಿದ್ದರೂ ಬಿಜೆಪಿ ಸರ್ಕಾರದಲ್ಲಿ ಏನೂ ಅಲುಗಾಡಿಸಲು ಆಗದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದರು. ಸಭೆಯ ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ಪ್ರದೇಶ ಕುರುಬರ ಸಂಘದ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ಮಾತನಾಡಿ, ಹಿಂದುಳಿದ ವರ್ಗಕ್ಕೆ ಸೇರಿದ ಯಾವುದೇ ಸಮುದಾಯಕ್ಕೆ ಅನ್ಯಾಯ, ದೌರ್ಜನ್ಯವಾದರೂ ಅದಕ್ಕೆ ಕರ್ನಾಟಕ ಪ್ರದೇಶ ಕುರುಬರ ಸಂಘ ಸ್ಪಂದಿಸಿ ನ್ಯಾಯ ಕೇಳುವ ಹೋರಾಟದಲ್ಲಿ ಭಾಗಿಯಾಗಲಿದೆ. ಪ್ರಸ್ತುತ ಸಂದರ್ಭದಲ್ಲಿ ಶೋಷಿತ ಸಮುದಾಯಗಳ ಸ್ಥಿತಿಗತಿಯನ್ನು ಅವಲೋಕಿಸಬೇಕು. ದೇಶದಲ್ಲಿ 8–9 ವರ್ಷದ ಹಿಂದೆ ಶೋಷಿತ ಸಮುದಾಯದ ಪರಿಸ್ಥಿತಿ ಹೇಗಿತ್ತು? ಈಗ ಹೇಗಿದೆ ಎಂದು ಅವಲೋಕಿಸಬೇಕು. ಹಿಂದುಳಿದ ವರ್ಗಗಳ ಹಿತ ಯಾರು ಕಾಪಾಡುತ್ತಾರೆ ಎಂದು ಮನವರಿಕೆ ಮಾಡಿಕೊಳ್ಳಬೇಕು. ಸ್ವಾಭಿಮಾನಿ ಬದುಕು ಹಾಗೂ ಗೌರವದಿಂದ ಬದುಕಲು ಯಾವ ಪಕ್ಷ ಕಾರ್ಯಕ್ರಮ ರೂಪಿಸುತ್ತದೆ ಎಂದು ಅರಿತುಕೊಳ್ಳಬೇಕು. 2023ರ ಚುನಾವಣೆ ಹಿಂದುಳಿದ ವರ್ಗ, ಶೋಷಿತ ಸಮುದಾಯಕ್ಕೆ ಅಗ್ನಿಪರೀಕ್ಷೆ. ನಮ್ಮ ಹಕ್ಕನ್ನು ಕಸಿದುಕೊಳ್ಳುತ್ತಿರುವವರಿಗೆ ತಕ್ಕ ಉತ್ತರ ನೀಡಲು ಮುಂದಿನ ಚುನಾವಣೆ ಉತ್ತಮ ವೇದಿಕೆಯಾಗಿದೆ. ಪಕ್ಷಭೇದ ಮರೆತು ಹಿಂದುಳಿದ ವರ್ಗ ಮತ್ತು ಶೋಷಿತ ಸಮುದಾಯದ ಹಿತಕಾಯಲು ಬದ್ಧವಾಗಿರುವ ಪಕ್ಷದ ಅಭ್ಯರ್ಥಿಯನ್ನು ಬೆಂಬಲಿಸುವಂತೆ ಮನವಿ ಮಾಡಿದರು. ಸಭೆಯಲ್ಲಿ ವಿವಿಧ ಸಮುದಾಯಗಳ ಮುಖಂಡರಾದ ಹಿನಕಲ್ ಪ್ರಕಾಶ್, ಹಿನಕಲ್ ಉದಯ್, ಶ್ರೀನಿವಾಸ್, ಸಂದೇಶ್, ಛಾಯಾ, ಮಹೇಂದ್ರ ಕಾಗಿನೆಲೆ, ಎಸ್.ಆರ್.ರವಿ, ಎನ್.ಆರ್.ನಾಗೇಶ್, ಯೋಗೇಶ್ ಉಪ್ಪಾರ್, ಹೆಚ್.ಎಸ್.ಪ್ರಕಾಶ್ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಕಾಂಗ್ರೆಸ್ ಕಾರ್ಯತಂತ್ರ

ಅಭ್ಯರ್ಥಿ ಆಯ್ಕೆ ಮಾಡು ವುದು ಮತ್ತು ಟಿಕೆಟ್ ದೊರೆಯದವರಿಗೆ ಸಮಾಧಾನಪಡಿಸಿ, ಪಕ್ಷದ ಪರ ಕೆಲಸ ಮಾಡುವಂತೆ ಅವರ ಮನವೊಲಿಸುವ ಕಾರ್ಯ ನಡೆಯಲಿದೆ. ರಾಜ್ಯದ ಉಸ್ತುವಾರಿ ಹೊಣೆ ಹೊತ್ತ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸುರ್ಜೇವಾಲ ಸಾರಥ್ಯದಲ್ಲಿ ಸಭೆ ನಡೆಯ ಲಿದ್ದು, ರಾಜ್ಯಾಧ್ಯಕ್ಷ ಡಿ.ಕೆ. ಶಿವಕುಮಾರ್, ವಿಧಾನಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಸೇರಿದಂತೆ ಪ್ರಮುಖ ನಾಯಕರು ಭಾಗವಹಿಸಲಿದ್ದಾರೆ. ಪೂರ್ವ ಸಮೀಕ್ಷೆಯಲ್ಲಿ ಬಂದಿರುವ ವರದಿಯನ್ನಾಧಾರವಾಗಿಟ್ಟುಕೊಂಡು ನಿಮ್ಮ ಕ್ಷೇತ್ರದಲ್ಲಿ ಇಂತಹವರಿಗೆ ಜನ ಬೆಂಬಲವಿದೆ. ನಾವು ಅವರನ್ನೇ ಅಭ್ಯರ್ಥಿಯನ್ನಾಗಿ ಪರಿಗಣಿಸಬೇಕೆಂದು ವರಿಷ್ಠರಿಗೆ ಶಿಫಾರಸು ಮಾಡುತ್ತೇವೆ.

ನಿಮಗೆ ಸ್ಥಳೀಯವಾಗಿ ಮತದಾರರ ಬೆಂಬಲ ಇಲ್ಲದಿರುವುದರಿಂದ ನೀವು ಉಳಿದ ಅನ್ಯ ಚುನಾವಣೆಗಳ ಕಡೆ ಗಮನ ಹರಿಸಿ, ಇದೀಗ ಪಕ್ಷದ ಅಭ್ಯರ್ಥಿ ಪರ ಒಗ್ಗಟ್ಟಿನಿಂದ ಕೆಲಸಮಾಡಿ ಎಂದು ಟಿಕೆಟ್ ದೊರೆಯದ ಆಕಾಂಕ್ಷಿಗಳಿಗೆ ನಾಯಕರು ವಾಸ್ತವಾಂಶವನ್ನು ವಿವರಿಸಿ, ಅವರ ಮನವೊಲಿಸಲಿದ್ದಾರೆ.

2023ರ ಚುನಾವಣೆಯಲ್ಲಿ ನಮ್ಮ ಪಕ್ಷಕ್ಕೆ ಒಳ್ಳೆಯ ಭವಿಷ್ಯವಿದೆ. ಇಂತಹ ಭವಿಷ್ಯವನ್ನು ನಾವುಗಳು ಹಾಳು ಮಾಡಿಕೊಳ್ಳಬಾರದು. ಅಭ್ಯರ್ಥಿ ಯಾರೇ ಆಗಲಿ, ಅವರ ಪರ ಕೆಲಸ ಮಾಡಿ, ಪಕ್ಷವನ್ನು ಮೊದಲು ಅಧಿಕಾರಕ್ಕೆ ತರೋಣ, ನಂತರ ಅದರಲ್ಲಿ ನಾವೆಲ್ಲಾ ಭಾಗಿಯಾಗೋಣ ಎಂದು ತಿಳಿಹೇಳಲೆಂದೇ ಸಭೆ ಕರೆಯಲಾಗಿದೆ.

ಪ್ರತಿ ದಿನ ಒಂದ ರಿಂದ ಮೂರು ಜಿಲ್ಲೆಗಳ ವ್ಯಾಪ್ತಿಯಲ್ಲಿ ಬರುವ ಪ್ರತಿ ವಿಧಾನಸಭಾ ಕ್ಷೇತ್ರದ ಆಕಾಂಕ್ಷಿಗಳ ಜೊತೆ ನಾಯಕರು ಸಮಾಲೋಚನೆ ನಡೆಸಲಿದ್ದಾರೆ. ಪೂರ್ವ ಸಮೀಕ್ಷೆ ವರದಿಯ ಆಧಾರದ ಮೇಲೆ ಹಾಲಿ ಶಾಸಕರನ್ನು ಹೊರತುಪಡಿಸಿ ಉಳಿದ ನೂರೈವತ್ತಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಯಾರಿಗೆ ಟಿಕೆಟ್ ಕೊಡಬೇಕು ಎಂಬ ಕುರಿತು ಕೆಪಿಸಿಸಿ ಪ್ರಾಥಮಿಕ ಚರ್ಚೆ ನಡೆಸಿದೆ. ಆದರೆ ಚುನಾವಣಾ ಕಣದಲ್ಲಿ ಮುಂದಿರುವವರು ಯಾರು ಎಂಬುದರ ಆಧಾರದ ಮೇಲೆ ಟಿಕೆಟ್ ಹಂಚಿಕೆ ಕಾರ್ಯವನ್ನು ಪೂರ್ಣಗೊಳಿಸಿದರೆ, ಸ್ಪರ್ಧಿಸಲು ಪಕ್ಷದ ಟಿಕೆಟ್ ಸಿಗದವರು ಅಸಮಾಧಾನಗೊಳ್ಳುತ್ತಾರೆ. ಈ ಪೈಕಿ ಹಲವರು ಬೇರೆ ಪಕ್ಷಗಳಿಗೆ ಹೋಗುವ ಇಲ್ಲವೇ ಬಂಡಾಯ ಅಭ್ಯರ್ಥಿಯಾಗಿ ಕಣಕ್ಕಿಳಿಯುವ ಸಾಧ್ಯತೆಗಳು ಸ್ಪಷ್ಟವಾಗಿವೆ. ಹೀಗಾಗಿ ಆಯಾ ಕ್ಷೇತ್ರದಲ್ಲಿ ಯಾರಿಗೆ ಪಕ್ಷದ ಟಿಕೆಟ್ ನೀಡುತ್ತೇವೆ ಎಂಬುದನ್ನು ನಿರ್ಧರಿಸುವ ಮುನ್ನ ಬೇರೆ ಪಕ್ಷಗಳಿಗೆ ಹೋಗುವ, ಬಂಡಾಯವೇಳುವ ಸಾಧ್ಯತೆ ಇರುವವರನ್ನು ಕರೆಸಿ ಚರ್ಚಿಸುವುದು ಕೆಪಿಸಿಸಿ ಯೋಚನೆಯಾಗಿದೆ.

ಡಿ.8ರಿಂದ 'ಮೈಬಿಲ್ಡ್ 2022' ವಸ್ತು ಪ್ರದರ್ಶನ

ಮಹಾರಾಜ ಕಾಲೇಜು ಮೈದಾನದಲ್ಲಿ ಐದು ದಿನ ಕಟ್ಟಡ ನಿರ್ಮಾಣ ಸಾಮಗ್ರಿ, ತಂತ್ರಜ್ಞಾನದ ಸಮಗ್ರ ನೋಟ ಅನಾವರಣ



ಮೈಸೂರು,ಡಿ.5(ಪಿಎಂ)– ಮೈಸೂರು ಸೇರಿದಂತೆ ಯಾವುದೇ ಬಗೆಯ ಕಟ್ಟಡದ ನಿರ್ಮಾಣ ಸಾಮಗ್ರಿ, ತಂತ್ರಜ್ಞಾನದ ಬೃಹತ್ ವಸ್ತು ಪ್ರದರ್ಶನ 'ಮೈಬಿಲ್ಡ್ 2022' ಡಿ.8ರಿಂದ 12ರವರೆಗೆ ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ನಡೆಯಲಿದೆ. ನಿರ್ಮಾಣ ಸಾಮಗ್ರಿಗಳು, ಸಲಕರಣೆಗಳು, ಅತ್ಯಾಧುನಿಕ ತಂತ್ರಜ್ಞಾನಗಳು ಮತ್ತು ರಿಯಲ್ ಎಸ್ಟೇಟ್‌ನ ಇತ್ತೀಚಿನ ಬೆಳವಣಿಗೆಯ ಸಮಗ್ರ ಮಾಹಿತಿ ಇಲ್ಲಿ ಒಂದೇ ಸೂರಿನಡಿ ಲಭ್ಯವಾಗಲಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಮೈಬಿಲ್ಡ್ 22ರ ಅಧ್ಯಕ್ಷ ಮಹಾಬಲೇಶ್ವರ ಭೈರಿ, ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ (ಬಿಎಐ) ಮೈಸೂರು ಘಟಕದಿಂದ ಕಳೆದ 21 ವರ್ಷಗಳಿಂದ ಸತತವಾಗಿ ಈ ವಸ್ತು ಪ್ರದರ್ಶನ ಆಯೋಜಿಸುತ್ತಾ ಬರಲಾಗಿದೆ. ಮೊದಲಿಗೆ ಸಣ್ಣ ಪ್ರಮಾಣದಲ್ಲಿ ಪ್ರಾರಂಭವಾದ ಈ ವಸ್ತು ಪ್ರದರ್ಶನವು ಇಂದು ಬೃಹದಾಕಾರವಾಗಿ ಬೆಳೆದು, ಮೈಸೂರಿನ ಪ್ರತಿಷ್ಠಿತ ಹಾಗೂ ಹೆಮ್ಮೆಯ ವಸ್ತು ಪ್ರದರ್ಶನ ಎಂಬ ಹೆಸರು ಗಳಿಸಿದೆ ಎಂದು ತಿಳಿಸಿದರು.

ಈ ಬಾರಿಯ 22ನೇ ವರ್ಷದ ಪ್ರದರ್ಶನದಲ್ಲಿ ಇತ್ತೀಚಿನ ಆವಿಷ್ಕಾರಗೊಂಡಿರುವ ಕಟ್ಟಡ ನಿರ್ಮಾಣ ಸಾಮಗ್ರಿಗಳ ಸಮಗ್ರ ಪರಿಚಯದೊಂದಿಗೆ ನಿರ್ಮಾಣ ಕ್ಷೇತ್ರದ ಸಮಗ್ರ ನೋಟ ದೊರೆಯಲಿದೆ. 5 ದಿನಗಳ ಈ ಪ್ರದರ್ಶನಕ್ಕೆ ಮೈಸೂರು ಮತ್ತು ಸುತ್ತಮುತ್ತಲಿನ ಜನತೆ ಭೇಟಿ ನೀಡಿ ಕಟ್ಟಡ ಸಾಮಗ್ರಿಗಳ ಮಾಹಿತಿ ಪಡೆಯಬಹುದು. ದೇಶ–ವಿದೇಶಗಳ ಕಟ್ಟಡ ಸಾಮಗ್ರಿಗಳು ಹಾಗೂ ಅವುಗಳ ವೈಶಿಷ್ಟ್ಯದ ಸಮಗ್ರ ನೋಟ ಇರಲಿದ್ದು, ಸೌರಶಕ್ತಿ ಯೋಜನೆ, ವಿದ್ಯುತ್ ಉಪಕರಣಗಳು, ಕಟ್ಟಡ ನಿರ್ಮಾಣದ ಯಂತ್ರೋಪಕರಣಗಳು, ಜಲಸಂರಕ್ಷಣಾ ವಿಧಾನಗಳು, ನೆಲಹಾಸು, ಛಾವಣಿ ಸಾಮಗ್ರಿಗಳು, ಮರಳು, ಜಲ್ಲಿ ಸೇರಿದಂತೆ ಕಟ್ಟಡ ಸಾಮಗ್ರಿಗಳ ಬೃಹತ್ ಪ್ರದರ್ಶನ ಇಲ್ಲಿ ತೆರೆದುಕೊಳ್ಳಲಿದೆ ಎಂದು ವಿವರಿಸಿದರು.

ಪ್ರತಿವರ್ಷದಂತೆ ನಮ್ಮ ಬಿಎಐನ ಸದಸ್ಯರ ತಂಡದ ಸಹಕಾರದಿಂದ ವ್ಯವಸ್ಥಿತವಾಗಿ ಪ್ರದರ್ಶನ ನಡೆಯಲಿದೆ. ಬಿಎಐನ ಮಹಿಳಾ ಘಟಕ ಸ್ಫೂರ್ತಿ ಸಂಸ್ಥೆಯೂ ಹೆಚ್ಚಿನ ಸಹಕಾರ ನೀಡಿದೆ. ಪ್ರತಿದಿನ ಸಂಜೆ ಮನರಂಜನೆ ಕಾರ್ಯಕ್ರಮ ನಡೆಯಲಿದೆ. ಅಲ್ಲದೆ, ಪ್ರತಿದಿನ ಸಂಜೆ 6.30ರಿಂದ 8.30ರವರೆಗೆ ಸಾಂಸ್ಕೃತಿಕ ಕಾರ್ಯಕ್ರಮ ಇರಲಿದ್ದು, ಮೈಸೂರಿನ ಯುವ ಗಾಯಕರಿಗೆ ಪ್ರೋತ್ಸಾಹ ನೀಡಲು 'ವಾಯ್ಸ್ ಆಫ್ ಮೈಬಿಲ್ಡ್–22' ಗಾಯನ ಸ್ಪರ್ಧೆ ಏರ್ಪಡಿಸಲಾಗಿದೆ. ವಿಜೇತರಿಗೆ ಬಹುಮಾನ ವಿತರಣೆ ಮಾಡಲಾಗುವುದು ಎಂದರು.

> ಈ ಬಾರಿಯ ಪ್ರದರ್ಶನಕ್ಕೆ 20 ರೂ. ಪ್ರವೇಶ ಶುಲ್ಕ ನಿಗದಿಪಡಿಸಲಾಗಿದೆ. ಬೆಳಗ್ಗೆ 10ರಿಂದ ರಾತ್ರಿ 9ರವರೆಗೆ ಸಾರ್ವಜನಿಕರು ಭೇಟಿ ನೀಡಬಹುದು. ಇಲ್ಲಿ ಆಕರ್ಷಕ ಕಟ್ಟಡ ಸಾಮಗ್ರಿಗಳ ಪರಿಚಯ, ಸಂಗೀತ ರಸಮಂಜರಿ, ಶುಚಿ–ರುಚಿಯಾದ ತಿಂಡಿ–ತಿನಿಸುಗಳನ್ನು ಸವಿಯುವ ಅವಕಾಶ ದೊರೆಯಲಿದೆ. ಒಟ್ಟು 156 (ಡೈಮಾಂಡ್ 54, ಪ್ಲಾಟಿನಂ 102) ಮಳಿಗೆಗಳು ಇರಲಿವೆ. ಪ್ರದರ್ಶನದಲ್ಲಿ ಖರೀದಿಗೆ ಬುಕ್ ಮಾಡಿಕೊಳ್ಳಲು ಅವಕಾಶವಿದ್ದು, ಅಲ್ಲಿಯೇ ನೇರವಾಗಿ ಖರೀದಿಗೆ ಅವಕಾಶವಿಲ್ಲ. ಪ್ರತಿ ವರ್ಷ ಡಿಸೆಂಬರ್ ತಿಂಗಳಲ್ಲಿ ಮೈಬಿಲ್ಡ್ ಆಯೋಜನೆ ಮಾಡಲಾಗುತ್ತದೆ. ಕೋವಿಡ್ ಕಾರಣಕ್ಕೆ 2021ರ ಪ್ರದರ್ಶನವನ್ನು 2022ರ ಮಾರ್ಚ್‌ನಲ್ಲಿ ಆಯೋಜಿಸಲಾಗಿತ್ತು.
> -ಮಹಾಬಲೇಶ್ವರ ಭೈರಿ

ಉದ್ಘಾಟನೆ: ಡಿ.8ರಂದು ಬೆಳಗ್ಗೆ 11ಕ್ಕೆ ಮೈಸೂರಿನ ಶ್ರೀರಾಮಕೃಷ್ಣ ವಿದ್ಯಾಶಾಲೆಯ ಕರಸ್ಪಾಂಡೆಂಟ್ ಶ್ರೀ ಸ್ವಾಮಿ ಯುಕ್ತೇಶಾನಂದ ಮಹಾರಾಜ್ ಪ್ರದರ್ಶನಕ್ಕೆ ಚಾಲನೆ ನೀಡಲಿದ್ದಾರೆ. ಡಿ.12ರ ಸಂಜೆ 4ಕ್ಕೆ ಪ್ರದರ್ಶನದ ಸಮಾರೋಪ ಸಮಾರಂಭ ನಡೆಯಲಿದ್ದು, ಮುಖ್ಯ ಅತಿಥಿಯಾಗಿ ಬೆಂಗಳೂರು ಅಲ್ಟ್ರಾಟೆಕ್ ಸಿಮೆಂಟ್ ಕಂಪನಿ ಪ್ರಾದೇಶಿಕ ಮುಖ್ಯಸ್ಥ (ತಾಂತ್ರಿಕ ಗ್ರಾಹಕ ಪರಿಹಾರಗಳು) ಅಶೋಕ್ ರೆಡ್ಡಿ ಭಾಗವಹಿಸಲಿದ್ದಾರೆ. ಅತಿಥಿಯಾಗಿ ಮೈಸೂರು ಬಿಲ್ಡರ್ಸ್ ಚಾರಿಟೇಬಲ್ ಟ್ರಸ್ಟ್‌ನ ವ್ಯವಸ್ಥಾಪಕ ಟ್ರಸ್ಟಿ ಎ.ವಿ.ಶ್ರೀಧರ್ ಪಾಲ್ಗೊಳ್ಳಲಿದ್ದಾರೆ ಎಂದು ಹೇಳಿದರು. ಬಿಎಐ ಮೈಸೂರು ಘಟಕದ ಅಧ್ಯಕ್ಷ ಆರ್.ರಘುನಾಥ್, ಗೌರವ ಕಾರ್ಯದರ್ಶಿ ವಿ.ಶ್ರೀನಾಥ್, ಮೈಬಿಲ್ಡ್ 22ರ ಕಾರ್ಯದರ್ಶಿ ಕೆ.ಟಿ.ಗೋವಿಂದರಾಜು ಗೋಷ್ಠಿಯಲ್ಲಿದ್ದರು.

ಬಿಜೆಪಿಯೇತರ ಮತದಾರರ ಹೆಸರು ಕೈಬಿಟ್ಟಿರುವ ಶಂಕೆ

ಹೈಕೋರ್ಟ್ ನ್ಯಾಯಮೂರ್ತಿಗಳ ನೇತೃತ್ವದಲ್ಲಿ ತನಿಖೆಗೆ ಎಸ್‌ಡಿಪಿಐ ಒತ್ತಾಯ



ಮೈಸೂರು,ಡಿ.5(ಪಿಎಂ)– ಮತದಾರರ ಪಟ್ಟಿ ಪರಿಷ್ಕರಣೆಯಲ್ಲಿ ಬಿಜೆಪಿಯೇತರ ಮತದಾರರ ಹೆಸರುಗಳನ್ನು ಕೈಬಿಟ್ಟಿರುವ ಶಂಕೆ ದಟ್ಟವಾಗಿದೆ. ಹಾಗಾಗಿ ರಾಜ್ಯದ 27 ಲಕ್ಷಕ್ಕೂ ಅಧಿಕ ಮತದಾರರ ಕೈಬಿಟ್ಟಿರುವ ಸಂಬಂಧ ಹೈಕೋರ್ಟ್ ಹಾಲಿ ನ್ಯಾಯಮೂರ್ತಿಗಳ ನೇತೃತ್ವದಲ್ಲಿ ತನಿಖೆಗೆ ಆದೇಶಿಸಬೇಕು ಎಂದು ಎಸ್‌ಡಿಪಿಐ ಒತ್ತಾಯಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಎಸ್‌ಡಿಪಿಐ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್, ಬಿಜೆಪಿ ಸರ್ಕಾರದ ಕುಮ್ಮಕ್ಕಿನಿಂದ ರಾಜ್ಯದಲ್ಲಿ 27 ಲಕ್ಷ ಮತದಾರರನ್ನು ಅಕ್ರಮವಾಗಿ ಪಟ್ಟಿಯಿಂದ ಕೈಬಿಡಲಾಗಿದೆ. ಇಷ್ಟು ದೊಡ್ಡ ಸಂಖ್ಯೆಯಲ್ಲಿ ಹೆಸರು ಕೈಬಿಟ್ಟಿರುವುದು ಅತೀ ದೊಡ್ಡ ಹಗರಣ. ಮುಖ್ಯಮಂತ್ರಿಗಳು ಆಗಾಗ್ಗೆ ಧಮ್ಮಿದ್ರೆ–ತಾಕತ್ತಿದ್ರೆ ಎಂದು ಮಾತನಾಡುತ್ತಾರೆ. ಅವರಿಗೆ ಅದಿದ್ದರೆ ಈ ಪ್ರಕರಣವನ್ನು ಹೈಕೋರ್ಟ್ ನ್ಯಾಯಮೂರ್ತಿಗಳ ನೇತೃತ್ವದಲ್ಲಿ ತನಿಖೆಗೆ ಆದೇಶಿಸಲಿ ಎಂದು ಸವಾಲು ಹಾಕಿದರು.

ಮೈಸೂರು ಜಿಲ್ಲೆಯಲ್ಲಿಯೂ 1,45,908 ಮತದಾರರನ್ನು ಪಟ್ಟಿಯಿಂದ ಕೈಬಿಡಲಾಗಿದೆ. ಈ ಸಂಬಂಧವೂ ತನಿಖೆ ನಡೆಯಬೇಕು. ಜೊತೆಗೆ ಮತದಾರರ ಪಟ್ಟಿ ಸಂಬಂಧ ಹಕ್ಕು ಮತ್ತು ಆಕ್ಷೇಪಣೆಗೆ ಡಿ.8ರವರೆಗೆ ಕೊಟ್ಟಿರುವ ಅವಕಾಶವನ್ನು ಇನ್ನೂ 2 ತಿಂಗಳ ಕಾಲ ವಿಸ್ತರಿಸಬೇಕು ಎಂದು ಒತ್ತಾಯಿಸಿದರು.

ಮೈಸೂರು ಜಿಲ್ಲೆಯಲ್ಲಿ ಪಟ್ಟಿಯಿಂದ ಮತದಾರರ ಹೆಸರು ಕೈಬಿಟ್ಟಿರುವ ಸಂಬಂಧ ಜಿಲ್ಲಾಧಿಕಾರಿಗಳು ಈಗಾಗಲೇ ಸ್ಪಷ್ಟೀಕರಣ ನೀಡಿರುವ ಬಗ್ಗೆ ಪ್ರತಿಕ್ರಿಯಿಸಿ, 1 ಲಕ್ಷದ 45 ಸಾವಿರಕ್ಕೂ ಹೆಚ್ಚು ಮತದಾರರ ಹೆಸರು ಕೈಬಿಟ್ಟಿರುವ ಸಂಬಂಧ ಕೇವಲ ಸ್ಪಷ್ಟನೆ ನೀಡಿದರೆ ಸಾಲದು. ಯಾವ ಆಧಾರದಲ್ಲಿ ಕೈಬಿಡಲಾಗಿದೆ ಎಂಬುದನ್ನು ಇನ್ನಷ್ಟು ದೃಢೀಕರಿಸಿ, ಸ್ಪಷ್ಟನೆ ನೀಡಬೇಕು ಎಂದು ಹೇಳಿದರು.


ನಿನ್ನೆ ಶ್ರೀರಂಗಪಟ್ಟಣದಲ್ಲಿ ಹನುಮ ಜಯಂತಿ ಹೆಸರಿನಲ್ಲಿ ಜಾಮಿಯಾ ಮಸೀದಿಗೆ ಮುತ್ತಿಗೆ ಹಾಕಲು ಯತ್ನಿಸಿರುವುದು ಅಕ್ಷಮ್ಯ ಮತ್ತು ಖಂಡನೀಯ. ಜೊತೆಗೆ ಮುಸ್ಲಿಮ್ ಮನೆಯ ಮೇಲಿದ್ದ ದರ್ಗಾದ ಹಸಿರು ಧ್ವಜ ತೆಗೆದು, ಕೇಸರಿ ಧ್ವಜ ನೆಟ್ಟಿರುವುದು ಪೊಲೀಸರ ಸಮ್ಮುಖದಲ್ಲೇ ನಡೆದಿದೆ. ಇದು ಅತ್ಯಂತ ಖಂಡನೀಯ. ಇದೇ ರೀತಿ ಒಬ್ಬ ಮುಸ್ಲಿಮ್ ವ್ಯಕ್ತಿ ಹಿಂದೂ ಬಾಂಧವರ ಮನೆ ಮೇಲೆ ಹತ್ತಿ ಕೇಸರಿ ಧ್ವಜ ಕಿತ್ತು ಹಸಿರು ಬಾವುಟ ಹಾರಿಸಿದ್ದರೆ ಪರಿಸ್ಥಿತಿ ಏನಾಗುತ್ತಿತ್ತು ಎಂದು ಪ್ರಶ್ನಿಸಿದರಲ್ಲದೆ, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು.

ಕೇಂದ್ರ ಸರ್ಕಾರವು ಎಸ್‌ಸಿ, ಎಸ್‌ಟಿ, ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ ರದ್ದುಗೊಳಿಸಿರುವ ಕ್ರಮ ದೇಶದ ದೊಡ್ಡ ದುರಂತ. ಕೂಡಲೇ ಇದನ್ನು ಸರ್ಕಾರ ಸರಿಪಡಿಸಿಕೊಳ್ಳಬೇಕು ಎಂದು ಆಗ್ರಹಿಸಿದರು. ಎಸ್‌ಡಿಪಿಐ ರಾಜ್ಯ ಉಪಾಧ್ಯಕ್ಷ ದೇವನೂರು ಪುಟ್ಟನಂಜಯ್ಯ, ರಾಜ್ಯ ಸಮಿತಿ ಸದಸ್ಯ ಅಮ್ಜದ್ ಖಾನ್, ಜಿಲ್ಲಾಧ್ಯಕ್ಷ ರಫತ್‌ಖಾನ್, ಉಪಾಧ್ಯಕ್ಷ ಎಸ್.ಸ್ವಾಮಿ ಗೋಷ್ಠಿಯಲ್ಲಿದ್ದರು.



ಮೈಸೂರು ಹನುಮಂತೋತ್ಸವ ಸಮಿತಿ ವತಿಯಿಂದ ನಡೆಯಲಿರುವ ಹನುಮ ಜಯಂತಿಯ ಶ್ರೀ ಆಂಜನೇಯ ಸ್ವಾಮಿಯ ಮೆರವಣಿಗೆಯ ಕಾರ್ಯಕ್ರಮದ ಪೋಸ್ಟರ್ ಅನ್ನು ಶಾಸಕ ಎಸ್.ಎ.ರಾಮದಾಸ್ ಬಿಡುಗಡೆ ಮಾಡಿದರು. ಈ ವೇಳೆ ಖ್ಯಾತ ವಕೀಲ ಸಿ.ವಿ.ಕೇಶವ ಮೂರ್ತಿ, ಕೆ.ಆರ್.ಕ್ಷೇತ್ರದ ಉಪಾಧ್ಯಕ್ಷ ಸಂತೋಷ್(ಶಂಬು), ಆಶ್ರಯ ಸಮಿತಿ ಸದಸ್ಯ ಹೇಮಂತ್, ಎನ್.ಆರ್.ಕ್ಷೇತ್ರದ ಎಸ್.ಸಿ.ಮೋರ್ಚಾದ ಪ್ರಧಾನ ಕಾರ್ಯದರ್ಶಿ ವಿನೋದ್ ಕುಮಾರ್ ಹಾಗೂ ಹನುಮಂತೋತ್ಸವ ಸಮಿತಿ ಸದಸ್ಯರು ಹಾಜರಿದ್ದರು.

ಡಿ.19ರಂದು ನವದೆಹಲಿಯಲ್ಲಿ ರೈತ ಘರ್ಜನ್ ರ‍್ಯಾಲಿ



ಮೈಸೂರು,ಡಿ.5(ಪಿಎಂ)–ಕೃಷಿ ಉತ್ಪನ್ನಗಳಿಗೆ ವೆಚ್ಚದ ಆಧಾರದಲ್ಲಿ ಲಾಭದಾಯಕ ಬೆಲೆ ನಿಗದಿ ಮಾಡುವುದೂ ಸೇರಿದಂತೆ ವಿವಿಧ ಬೇಡಿಕೆ ಈಡೇರಿಸಲು ಆಗ್ರಹಿಸಿ ಭಾರತೀಯ ಕಿಸಾನ್ ಸಂಘದ ವತಿಯಿಂದ ಡಿ.19ರಂದು ನವದೆಹಲಿಯ ರಾಮಲೀಲಾ ಮೈದಾನದಲ್ಲಿ ರೈತ ಘರ್ಜನ್ ರ‍್ಯಾಲಿ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ದಕ್ಷಿಣ ಪ್ರಾಂತ ಸಂಘಟನಾ ಕಾರ್ಯದರ್ಶಿ ನಾರಾಯಣಸ್ವಾಮಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕೃಷಿ ಯಂತ್ರೋಪಕರಣಗಳಿಗೆ ಜಿಎಸ್‌ಟಿ ರದ್ದುಪಡಿಸಬೇಕು. ಕಿಸಾನ್ ಸನ್ಮಾನ್ ನಿಧಿಯ ಮೊತ್ತ ದ್ವಿಗುಣಗೊಳಿಸಬೇಕು. ಟನ್ ಕಬ್ಬಿಗೆ 4 ಸಾವಿರ ರೂ. ನಿಗದಿ ಮಾಡಬೇಕು ಎಂಬುದೂ ಸೇರಿದಂತೆ ಹಲವು ರೈತಪರ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಈ ರ‍್ಯಾಲಿ ನಡೆಸಲಾಗುತ್ತಿದೆ. ಮೈಸೂರು ಜಿಲ್ಲೆಯಲ್ಲಿ ಡಿ.10ರವರೆಗೆ ರ‍್ಯಾಲಿ ಸಂಬಂಧ ಜಾಗೃತಿ ಮೂಡಿಸಲಾಗುವುದು ಎಂದರು. ಸಂಘದ ಜಿಲ್ಲಾಧ್ಯಕ್ಷ ಗುರುಪ್ರಸಾದ್, ಪ್ರಧಾನ ಕಾರ್ಯದರ್ಶಿ ರವಿ ಗಂಡತ್ತೂರು, ಮಹಿಳಾ ಪ್ರಮುಖ್ ನಾಗವೇಣಿ, ಜಿಲ್ಲಾ ಪ್ರಮುಖ್ ಅಶೋಕ್ ಗೋಷ್ಠಿಯಲ್ಲಿದ್ದರು.

ಇಂದಿನಿಂದ 11ರವರೆಗೆ ಮೈಸೂರಿನ ಪುರಭವನದಲ್ಲಿ ವಿವಿಧ ನಾಟಕ ಪ್ರದರ್ಶನ



ಮೈಸೂರು,ಡಿ.5(ಪಿಎಂ)– ರಾಮನಗರದ ಅರ್ಧನಾರೀಶ್ವರ ಕಲಾಭಿವೃದ್ಧಿ ಟ್ರಸ್ಟ್, ಬೆಂಗಳೂರಿನ ರೇಣುಕಾಂಬ ಕಲಾ ಸಂಘದ ಜಂಟಿ ಆಶ್ರಯದಲ್ಲಿ ಡಿ.6ರಿಂದ 11ರವರೆಗೆ ಮೈಸೂರಿನ ಪುರಭವನದಲ್ಲಿ ನಾಟಕ ಪ್ರದರ್ಶನಗಳನ್ನು ಆಯೋಜಿಸಲಾಗಿದೆ ಎಂದು ಟ್ರಸ್ಟ್‌ನ ಅಧ್ಯಕ್ಷೆ ಸ್ವಪ್ನ ನಾಗರಾಜ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಮ್ಮ ಈ ಎರಡೂ ಸಂಘಟನೆಗಳು ಮಂಗಳಮುಖಿಯರ ಸಂಘಟನೆಗಳಾಗಿದ್ದು, ಕಲೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಅಭಿರುಚಿ ಹೊಂದಿರುವ ಸಮಾನಮನಸ್ಕ ಮಂಗಳಮುಖಿಯರು ಈ ಸಂಘಟನೆಗಳಲ್ಲಿ ತೊಡಗಿಸಿಕೊಂಡಿದ್ದೇವೆ ಎಂದರು.

ನಮ್ಮ ಸಂಘಟನೆಗಳ ವತಿಯಿಂದ ಆಯೋಜಿಸಿರುವ ಈ ನಾಟಕ ಪ್ರದರ್ಶನದಲ್ಲಿ ಸ್ಥಳೀಯ ನಾಟಕ ತಂಡಗಳ ಕಲಾವಿದರು ಪ್ರದರ್ಶನ ನೀಡಲಿದ್ದಾರೆ. ಪ್ರತಿದಿನ ಬೆಳಗ್ಗೆ 11ಕ್ಕೆ ನಾಟಕಗಳು ಪ್ರಾರಂಭಗೊಳ್ಳಲಿವೆ. ಪ್ರವೇಶ ಉಚಿತವಿದೆ. ಡಿ.6ರಂದು ರೇಣುಕಾಚಾರ್ಯ ಗುರುಮೂರ್ತಿ ತಂಡದಿಂದ 'ಕುರುಕ್ಷೇತ್ರ' ಪ್ರದರ್ಶನಗೊಳ್ಳಲಿದೆ. ಅಂತೆಯೇ ಡಿ.7ರಂದು ಪಂಡಿತ್ ರಾಜಶೇಖರ ತಂಡದಿಂದ 'ದಕ್ಷಯಜ್ಞ', ಡಿ.8ರಂದು ಡಾ.ಟಿ.ಎಲ್.ರಮೇಶ್ ತಂಡದಿಂದ 'ಶ್ರೀಕೃಷ್ಣ ಸಂಧಾನ', ಡಿ.9ರಂದು ಮೂರ್ತಿ ತಂಡದಿಂದ 'ದಕ್ಷಯಜ್ಞ' ಮತ್ತು ಡಿ.11ರಂದು ನಂದೀಶ್ ತಂಡದಿಂದ 'ಭಕ್ತಪ್ರಹ್ಲಾದ' ನಾಟಕಗಳ ಪ್ರದರ್ಶನ ನಡೆಯಲಿವೆ ಎಂದು ವಿವರಿಸಿದರು.

ಡಿ.6ರಂದು ಸಂಜೆ 4ಕ್ಕೆ ಉದ್ಘಾಟನೆಯ ಸಭಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದಲ್ಲಿ ನಂಜನಗೂಡು ಶರಣಸಂಗಮ ಮಠದ ಶ್ರೀ ಪಟ್ಟದ ನಾಗರಾಜ ಸ್ವಾಮೀಜಿ, ಮೇಲುಕೋಟೆಯ ಶ್ರೀ ಇಳೈಆಳ್ವಾರ್ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಅತಿಥಿಗಳಾಗಿ ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷರೂ ಆದ ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷ ಜಿ.ಡಿ.ಹರೀಶ್‌ಗೌಡ, ರಂಗಭೂಮಿ ಕಲಾವಿದ ಹುಯಿಲಾಳು ರಾಮಸ್ವಾಮಿ ಸೇರಿದಂತೆ ಮತ್ತಿತರರು ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು. ರೇಣುಕಾಂಬ ಕಲಾ ಸಂಘದ ಸದಸ್ಯೆ ಮಹೇಶ್ವರಿ ಪಾಟೀಲ್ ಗೋಷ್ಠಿಯಲ್ಲಿದ್ದರು.

ಜೆಡಿಯು ಅಧ್ಯಕ್ಷರಾಗಿ ರಾಜೀವ್ ರಂಜನ್ ಅವಿರೋಧವಾಗಿ ಮರು ಆಯ್ಕೆ

ಪಾಟ್ನಾ: ಲಲನ್ ಸಿಂಗ್ ಎಂದು ಖ್ಯಾತಿ ಪಡೆದಿರುವ ಜನತಾ ದಳ–ಯುನೈಟೆಡ್ (ಜೆಡಿಯು) ಅಧ್ಯಕ್ಷ ರಾಜೀವ್ ರಂಜನ್ ಸಿಂಗ್ ಅವರು ಮತ್ತೆ ಮೂರು ವರ್ಷಗಳ ಅವಧಿಗೆ ಜೆಡಿಯು ಅಧ್ಯಕ್ಷರಾಗಿ ಸೋಮವಾರ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಪಕ್ಷದ ಪ್ರಮುಖ ನಾಯಕ ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ಆಪ್ತರಾಗಿರುವ ಸಿಂಗ್ ಅವರು ಮಾತ್ರ ಚುನಾವಣಾ ಕಣದಲ್ಲಿದ್ದರು ಮತ್ತು ನಾಮಪತ್ರ ಹಿಂಪಡೆಯಲು ಸೋಮವಾರ ಕೊನೆಯ ದಿನವಾಗಿತ್ತು. ಸಿಂಗ್ ಅವರು ಜೆಡಿಯು ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಜೆಡಿಯು ಪ್ರಧಾನ ಕಾರ್ಯದರ್ಶಿ ಅಫಕ್ ಅಹ್ಮದ್ ಖಾನ್ ಹೇಳಿದ್ದಾರೆ. ಈ ಹಿಂದೆ ಕೇಂದ್ರ ಸಚಿವರಾಗಿದ್ದ ಆರ್‌ಸಿಪಿ ಸಿಂಗ್ ರಾಜೀನಾಮೆ ನೀಡಿದ ನಂತರ ಜುಲೈ 2021 ರಲ್ಲಿ ಲಲನ್ ಸಿಂಗ್ ಅವರು ಪಕ್ಷದ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡಿದ್ದರು. ಹೊಸದಾಗಿ ಆಯ್ಕೆಯಾದ ಜೆಡಿಯು ರಾಷ್ಟ್ರೀಯ ಮಂಡಳಿಯು ಲಲನ್ ಸಿಂಗ್ ಅವರ ಆಯ್ಕೆಯನ್ನು ಅನುಮೋದಿಸಲು ಡಿಸೆಂಬರ್ 10 ರಂದು ಪಾಟ್ನಾದಲ್ಲಿ ಸಭೆ ಸೇರಲಿದೆ ಎಂದು ಪಕ್ಷದ ನಾಯಕರು ತಿಳಿಸಿದ್ದಾರೆ.

ಜೆಡಿಎಸ್ ಪದಾಧಿಕಾರಿಗಳಿಗೆ ನೇಮಕಾತಿ ಪತ್ರ ವಿತರಣೆ



ಮೈಸೂರು, ಡಿ.5(ಎಂಕೆ)– ನಗರದ ಶೇಷಾದ್ರಿ ಅಯ್ಯರ್ ರಸ್ತೆಯಲ್ಲಿರುವ ಜೆಡಿಎಸ್ ಕಚೇರಿಯಲ್ಲಿ ಚಾಮರಾಜ ವಿಧಾನ ಸಭಾ ಕ್ಷೇತ್ರದ ವಾರ್ಡ್ ಅಧ್ಯಕ್ಷರಿಗೆ ನೇಮಕಾತಿ ಪತ್ರ ವಿತರಣೆ ಮಾಡಲಾಯಿತು.

ಜೆಡಿಎಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ಲಿಂಗಪ್ಪ ನೂತನ ವಾರ್ಡ್ ಅಧ್ಯಕ್ಷರುಗಳಿಗೆ ನೇಮಕಾತಿ ಪತ್ರ ವಿತರಣೆ ಮಾಡಿದರು. ಚಾಮರಾಜ ವಿಧಾನಸಭಾ ಕ್ಷೇತ್ರದ ವಾರ್ಡ್ ನಂ.1ರ ಅಧ್ಯಕ್ಷರಾಗಿ ಮಲ್ಲಿಕಾರ್ಜುನ, 2ನೇ ವಾರ್ಡ್‌ಗೆ ಎನ್.ಆನಂದ್, 3ನೇ ವಾರ್ಡ್‌ಗೆ ಕುಮಾರಸ್ವಾಮಿ, 4ನೇ ವಾರ್ಡ್‌ಗೆ ಡಾ.ನರಸಿಂಹೇಗೌಡ, 5ನೇ ವಾರ್ಡ್‌ಗೆ ರಘು, 6ನೇ ವಾರ್ಡ್‌ಗೆ ಹನುಮೇಗೌಡ, 7ನೇ ವಾರ್ಡ್‌ಗೆ ಚಿಕ್ಕತಮ್ಮಯ್ಯ, 18ನೇ ವಾರ್ಡ್‌ಗೆ ಸಿದ್ದರಾಜು, 19ನೇ ವಾರ್ಡ್‌ಗೆ ಮದನ್ ಮಹದೇಶ್, 20ನೇ ವಾರ್ಡ್‌ಗೆ ಹೆಚ್.ಸಿದ್ದೇಗೌಡ, 21ನೇ ವಾರ್ಡ್‌ಗೆ ರಾಮೇಗೌಡ, 22ನೇ ವಾರ್ಡ್‌ಗೆ ಹೇಮಂತ್‌ಕುಮಾರ್, 24ನೇ ವಾರ್ಡ್‌ಗೆ ಸತೀಶ್‌ಗೌಡ, 25ನೇ ವಾರ್ಡ್‌ಗೆ ಮುಬಾರಕ್, 26ನೇ ವಾರ್ಡ್‌ಗೆ ಮಹಮದ್ ಸಲೀಂ, 40ನೇ ವಾರ್ಡ್‌ಗೆ ಸುರೇಶ್‌ಗೋಲ್ಡ್, 41ನೇ ವಾರ್ಡ್‌ಗೆ ದರ್ಶಿತ್ ದೀಪು ಹಾಗೂ 42ನೇ ವಾರ್ಡ್‌ಗೆ ಸಂದೇಶ್ ಅವರನ್ನು ವಾರ್ಡ್‌ನ ಅಧ್ಯಕ್ಷರನ್ನಾಗಿ ನೇಮಕಗೊಳಿಸಿ ಪತ್ರ ನೀಡಲಾಯಿತು.

ಬಳಿಕ ಲಿಂಗಪ್ಪ ಮಾತನಾಡಿ, 2023ರ ವಿಧಾನಸಭಾ ಚುನಾವಣೆ ಸಮೀಪಿಸುತ್ತಿದ್ದು, ಜೆಡಿಎಸ್ ಮುಖಂಡರು, ಪದಾಧಿಕಾರಿಗಳು, ಕಾರ್ಯಕರ್ತರು ಪಕ್ಷ ಸಂಘಟನೆಯಲ್ಲಿ ಸಕ್ರಿಯವಾಗಿ ತೊಡಗಿಕೊಳ್ಳುವಂತೆ ಸೂಚಿಸಿದರು. ಜೆಡಿಎಸ್ ನಗರಾಧ್ಯಕ್ಷ ಕೆ.ಟಿ.ಚೆಲುವೇಗೌಡ, ಮುಖಂಡ ಹೆಚ್.ಕೆ.ರಾಮು, ಮಾಜಿ ಮೇಯರ್ ರವಿಕುಮಾರ್, ಪಾಲಿಕೆ ಸದಸ್ಯರಾದ ಕೆ.ವಿ.ಶ್ರೀಧರ್, ಪ್ರೇಮಾ ಶಂಕರೇಗೌಡ, ಫಾಲ್ಕನ್ ಬೋರೇಗೌಡ, ಚಾಮರಾಜ ಕ್ಷೇತ್ರದ ಅಧ್ಯಕ್ಷ ಪಿ.ಮಂಜುನಾಥ್ ಮತ್ತಿತರರು ಉಪಸ್ಥಿತರಿದ್ದರು.

ರಂಗಾಯಣ ಬಹುರೂಪಿಗೆ ರೂಪುಗೊಳ್ಳುತ್ತಿದೆ

ಹತ್ತು-ಹಲವು ಕಾರ್ಯಕ್ರಮಕ್ಕೆ ಭರದ ಸಿದ್ಧತೆ



ಮೈಸೂರು, ಡಿ.5(ಎಂಕೆ)– ಮೈಸೂರು ರಂಗಾಯಣ ಆವರಣದಲ್ಲಿ ಹಬ್ಬದ ವಾತಾವರಣ ಮನೆ ಮಾಡಿದ್ದು, ಬಹುರೂಪಿ ರಾಷ್ಟ್ರೀಯ ರಂಗೋತ್ಸವದ ಸಿದ್ಧತೆ ಭರದಿಂದ ಸಾಗಿದೆ.

'ಭಾರತೀಯತೆ' ಶೀರ್ಷಿಕೆಯಡಿ ಡಿ.8ರಿಂದ ಆರಂಭಗೊಳ್ಳುವ ಬಹುರೂಪಿ ರಾಷ್ಟ್ರೀಯ ರಂಗೋತ್ಸವದಲ್ಲಿ ದೇಶದ ಬಹುಸಂಸ್ಕೃತಿಯ ಅನಾವರಣವಾಗಲಿದೆ. 20 ನಾಟಕಗಳು, ಜಾನಪದ ಕಲಾ ಪ್ರದರ್ಶನ, ರಾಷ್ಟ್ರೀಯ ಚಲನಚಿತ್ರೋತ್ಸವ, ರಾಷ್ಟ್ರೀಯ ವಿಚಾರ ಸಂಕಿರಣ, ಪುಸ್ತಕ ಪ್ರದರ್ಶನ, ಕರಕುಶಲ ಪ್ರದರ್ಶನ, ದೇಸಿ ಆಹಾರ ಮೇಳ, ಪ್ರಾತ್ಯಕ್ಷಿಕೆಗಳು, ಚಿತ್ರಕಲಾ ಶಿಬಿರ ಸೇರಿದಂತೆ ಹತ್ತು–ಹಲವಾರು ಕಾರ್ಯಕ್ರಮಗಳಿಗೆ ವೇದಿಕೆ ಸಿದ್ಧವಾಗುತ್ತಿದೆ.

ರಂಗಾಯಣದ ಮುಖ್ಯ ದ್ವಾರದ ಬಳಿ ಮಳಿಗೆಗಳು ನಿರ್ಮಾಣವಾಗುತ್ತಿದ್ದು, 30ಕ್ಕೂ ಹೆಚ್ಚು ಪುಸ್ತಕ, ಕರಕುಶಲ ಹಾಗೂ ದೇಸಿ ಆಹಾರ ಮಳಿಗೆ ಸೇರಿದಂತೆ ವಿವಿಧ ಬಗೆಯ ಮಳಿಗೆಗಳ ನಿರ್ಮಾಣ ಕಾರ್ಯ ಬಿರುಸಾಗಿ ಸಾಗಿದೆ. ರಂಗಾಯಣದ ಮುಖ್ಯ ಗೇಟ್(ಸ್ವಾಗತ ಕಮಾನು)ಗೆ ಬಹುರೂಪಿ ರಾಷ್ಟ್ರೀಯ ರಂಗೋತ್ಸವಕ್ಕೆ ಸ್ವಾಗತ ಕೋರುವ ಬೃಹತ್ ಫ್ಲೆಕ್ಸ್‌ಗಳನ್ನು ಕಟ್ಟಲಾಗುತ್ತಿದ್ದು, ನೋಡುಗರನ್ನು ಸೆಳೆಯುವಂತಿವೆ.

ಪ್ರಚಾರ ವಾಹನಕ್ಕೆ ಚಾಲನೆ: 'ಮನೆ ಮನೆಗೆ ರಂಗಾಯಣ, ಮನ ಮನಕ್ಕೆ ಬಹುರೂಪಿ' ಶೀರ್ಷಿಕೆಯಡಿ ಹಮ್ಮಿಕೊಂಡಿರುವ ಬಹುರೂಪಿ ರಾಷ್ಟ್ರೀಯ ರಂಗೋತ್ಸವದ ಪ್ರಚಾರ ವಾಹನಕ್ಕೆ ಚಾಲನೆ ನೀಡಲಾಯಿತು. ಮೇಯರ್ ಶಿವಕುಮಾರ್, ಸಾಹಿತಿ ಪ್ರಧಾನ ಗುರುದತ್ ಅವರಿಗೆ ಆಹ್ವಾನ ನೀಡಿದ ಬಳಿಕ ಖ್ಯಾತ ಭರತನಾಟ್ಯ ಕಲಾವಿದೆ ವಸುಂಧರ ದೊರೆಸ್ವಾಮಿ ಅವರನ್ನು ಬಹುರೂಪಿಗೆ ಆತ್ಮೀಯವಾಗಿ ಸ್ವಾಗತಿಸಲಾಯಿತು.

ಮೇಯರ್ ಭೇಟಿ: ರಂಗಾಯಣಕ್ಕೆ ಸೋಮವಾರ ಭೇಟಿ ನೀಡಿದ ಮೇಯರ್ ಶಿವಕುಮಾರ್ ಸ್ಥಳ ಪರಿಶೀಲನೆ ನಡೆಸಿದರಲ್ಲದೆ ರಂಗಾಯಣಕ್ಕೆ ಅಗತ್ಯ ಸಹಕಾರ ನೀಡುವುದಾಗಿ ತಿಳಿಸಿದರು. ಪಾಲಿಕೆ ವತಿಯಿಂದ ಕುಡಿಯುವ ನೀರಿನ ವ್ಯವಸ್ಥೆ, ಸ್ವಚ್ಛತೆ ಹಾಗೂ ಸಂಜೆ ವೇಳೆ ಸೊಳ್ಳೆಗಳು ಬಾರದಂತೆ ಫಾಗಿಂಗ್ ಸೇರಿದಂತೆ ಅಗತ್ಯ ಅನುಕೂಲ ಮಾಡಿಕೊಡಲಾಗುವುದು ಎಂದು ತಿಳಿಸಿದರು. ಈ ವೇಳೆ ಪಾಲಿಕೆ ಉಪ ಆಯುಕ್ತೆ ಸವಿತಾ, ಆರೋಗ್ಯಾಧಿಕಾರಿ ಡಾ.ನಾಗರಾಜು ಮತ್ತಿತರರಿದ್ದರು.

ಕಲಾವಿದರ ನಿರಂತರ ಅಭ್ಯಾಸ: ಒಂದೆಡೆ ಬಹುರೂಪಿ ಸಿದ್ಧತೆಗಳು ನಡೆಯುತ್ತಿದ್ದರೆ, ಮತ್ತೊಂದೆಡೆ ರಂಗಾಯಣ ಕಲಾವಿದರು ನಾಟಕ ಅಭ್ಯಾಸದಲ್ಲಿ ನಿರತರಾಗಿದ್ದಾರೆ. 9 ಪ್ರದರ್ಶನ ಕಂಡಿರುವ 'ಟಿಪ್ಪು ನಿಜಕನಸುಗಳು' ನಾಟಕ ಬಹುರೂಪಿ ಪ್ರಮುಖ ಆಕರ್ಷಣೆಯಾಗಿದ್ದು, ಅದರ ನಡುವೆ ರಂಗಾಯಣದ ಭಾರತೀಯ ರಂಗವಿದ್ಯಾಲಯ ಕೇಂದ್ರದ ವಿದ್ಯಾರ್ಥಿಗಳು 'ಅಂಧ ಯುಗ' ನಾಟಕ ತರಬೇತಿ ನಡೆಸುತ್ತಿದ್ದಾರೆ.

ನಾಯಕ ಸಮುದಾಯಕ್ಕೆ ಮೀಸಲಾತಿ ಕಲ್ಪಿಸುವಲ್ಲಿ

ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಕೊಡುಗೆ ಅಪಾರ

ರಾಜನಹಳ್ಳಿ ಶ್ರೀ ಮಹರ್ಷಿ ವಾಲ್ಮೀಕಿ ಮಹಾ ಸಂಸ್ಥಾನದ ಪೀಠಾಧ್ಯಕ್ಷ ಪ್ರಸನ್ನಾನಂದ ಮಹಾ ಸ್ವಾಮೀಜಿ ಸ್ಮರಣೆ

ಹುಣಸೂರು, ಡಿ.5– ರಾಜ್ಯದಲ್ಲಿ ನಾಯಕ ಸಮುದಾಯಕ್ಕೆ ಮೀಸಲಾತಿ ಕಲ್ಪಿಸಲು ಶ್ರಮಿಸಿದವರಲ್ಲಿ ಜೆಡಿಎಸ್ ವರಿಷ್ಠ, ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಕೊಡುಗೆ ಅಪಾರವಿದೆ ಎಂದು ರಾಜನಹಳ್ಳಿ ಶ್ರೀ ಮಹರ್ಷಿ ವಾಲ್ಮೀಕಿ ಮಹಾ ಸಂಸ್ಥಾನದ ಪೀಠಾಧ್ಯಕ್ಷ ಪ್ರಸನ್ನಾನಂದ ಮಹಾ ಸ್ವಾಮೀಜಿ ಸ್ಮರಿಸಿದ್ದಾರೆ.

ಹಳೇ ಮೈಸೂರು ಪ್ರಾಂತ್ಯದ ನಾಯಕ ಸಮುದಾಯದ ಸಂಘಟನೆ, ಅವರ ಒಳಿತಿಗಾಗಿ ಮಾಜಿ ಶಾಸಕ ದಿ.ಎಸ್.ಚಿಕ್ಕಮಾದು ಶ್ರಮಿಸಿದ್ದಾರೆಂದು ಸ್ಮರಿಸಿದರು. ಪಟ್ಟಣದ ಕಲ್ಕುಣಿಕೆಯ ನಾಯಕ ಸಮುದಾಯ ಭವನದಲ್ಲಿಂದು ರಾಜನಹಳ್ಳಿಯಲ್ಲಿ ಫೆ.8 ಮತ್ತು 9ರಂದು ನಡೆಯುವ 5ನೇ ವರ್ಷದ ಮಹರ್ಷಿ ವಾಲ್ಮೀಕಿ ಜಾತ್ರೆಗೆ ಆಹ್ವಾನ ಕೋರಿ, ಭಿತ್ತಿಪತ್ರ ಬಿಡುಗಡೆ ಮಾಡಿದ ನಂತರ ಮಾತನಾಡಿದ ಅವರು, ನಮ್ಮ ಸಮುದಾಯದ ಮೀಸಲಾತಿಗಾಗಿ ಹೆಚ್.ಡಿ.ದೇವೇಗೌಡರು ಸಂಸದರಾಗಿ ಅಂದಿನ ಪ್ರಧಾನಮಂತ್ರಿ ಚಂದ್ರಶೇಖರ್ ಅವರ ಬಳಿ ಪ್ರಸ್ತಾಪ ಮಾಡಿದ್ದರು. ತಾವು ಪ್ರಧಾನಿಯಾಗಿದ್ದಾಗಲೂ ವಿಶೇಷ ಆಸ್ಥೆ ವಹಿಸಿದ್ದರು. ಮಾಜಿ ಸಚಿವರಾದ ಜಿ.ಟಿ. ದೇವೇಗೌಡ, ಎಚ್.ವಿಶ್ವನಾಥ್ ಸಹ ನಮಗೆ ಸಾಥ್ ನೀಡಿದ್ದಾರೆ. ಅಲ್ಲದೆ ಚಿಕ್ಕಮಾದು ಅವರ ಕೊಡುಗೆ ಸಮುದಾಯಕ್ಕೆ ಬಹಳ ಅಪಾರವಾಗಿದೆ ಎಂದರು.



ಫೆ.8 ಮತ್ತು 9ರಂದು ರಾಜನಹಳ್ಳಿಯಲ್ಲಿ ನಡೆಯುವ 5ನೇ ವರ್ಷದ ಜಾತ್ರೆಗೆ ರಾಜ್ಯದ ಮೂಲೆ–ಮೂಲೆಯಿಂದ ಸಮುದಾಯದವರು ಬರುತ್ತಾರೆ, ತಾವೆಲ್ಲರೂ ಆಗಮಿಸಿ ಕಾರ್ಯಕ್ರಮವನ್ನು ಯಶಸ್ವಿ ಗೊಳಿಸಬೇಕೆಂದು ಸಮುದಾಯದ ಬಾಂಧವರಿಗೆ ಕರೆ ನೀಡಿದರು.

ಸ್ವಾಮೀಜಿಗೆ ಗೌರವ ಸಮರ್ಪಣೆ: ಡಿಸಿಸಿ ಬ್ಯಾಂಕ್ ಅಧ್ಯಕ್ಷರೂ ಹಾಗೂ ರಾಜ್ಯ ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷ ಜಿ.ಡಿ.ಹರೀಶ್‌ಗೌಡ ಮತ್ತು ಮಾಜಿ ಶಾಸಕ ದಿ.ಎಸ್. ಚಿಕ್ಕಮಾದು ಅವರ ಪುತ್ರಿ ರಂಜಿತಾ ಚಿಕ್ಕಮಾದು ಅವರು ಪ್ರತ್ಯೇಕವಾಗಿ ಇಬ್ಬರು ರಾಜನಹಳ್ಳಿ ಶ್ರೀ ಮಹರ್ಷಿ ವಾಲ್ಮೀಕಿ ಮಹಾಸಂಸ್ಥಾನದ ಪೀಠಾಧ್ಯಕ್ಷ ಪ್ರಸನ್ನಾನಂದ ಮಹಾ ಸ್ವಾಮೀಜಿ ಅವರನ್ನು ಗೌರವಿಸಿ, ಅಭಿನಂದಿಸಿದರು.

ಸಮಾಜ ಸೇವಕ ದೇವರಾಜ ಒಡೆಯರ್, ತಾಲೂಕು ನಾಯಕರ ಸಂಘದ ಅಧ್ಯಕ್ಷ ಅಣ್ಣಯ್ಯನಾಯಕ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ದೇವರಾಜ್, ನಗರಸಭೆ ಉಪಾಧ್ಯಕ್ಷೆ ಆಶಾಕೃಷ್ಣನಾಯಕ, ಮುಖಂಡರಾದ ಕಾಟನಾಯ್ಕ, ಲೋಕೇಶ್, ಜಗದೀಶ್, ಗವಿನಾಯಕ, ಮಯೂರ, ರಮೇಶ್, ಬನ್ನಿಕುಪ್ಪೆ ಮಹದೇವ್, ನಗರಸಭೆ ಸದಸ್ಯ ದೇವನಾಯ್ಕ, ಸುರೇಂದ್ರ, ಸತೀಶ್ ಪಾಪಣ್ಣ, ಬಸವಲಿಂಗಯ್ಯ, ಅಸ್ವಾಳು ಕೆಂಪೇಗೌಡ, ಗರಡಿಮನೆ ಪ್ರಸನ್ನ ಕುಮಾರ್, ಪೈಲ್ವಾನ್ ರಾಕೇಶ್ ಸೇರಿದಂತೆ ಸಮುದಾಯದ ನೂರಾರು ಮುಖಂಡರು ಭಾಗವಹಿಸಿದ್ದರು.

ರೈತರು ಸಕಾಲಕ್ಕೆ ಸಾಲ ಮರು ಪಾವತಿಸಿ: ಸದಾನಂದ



ಮಲ್ಕುಂಡಿ, ಡಿ.5– ರೈತರು ಸಹಕಾರ ಸಂಘದಲ್ಲಿ ಪಡೆದ ಸಾಲವನ್ನು ಸಕಾಲಕ್ಕೆ ಮರು ಪಾವತಿಸಿದಾಗ ಮಾತ್ರ ಸಂಘ ಲಾಭ ಕಾಣಲು ಸಾಧ್ಯ ಎಂದು ಎಂಸಿಡಿಸಿಸಿ ಬ್ಯಾಂಕ್ ನಿರ್ದೇಶಕ ಬಿ.ಎನ್. ಸದಾನಂದ ತಿಳಿಸಿದರು.

ಇಲ್ಲಿಗೆ ಸಮೀಪದ ಕಸುವಿನಹಳ್ಳಿ ಗ್ರಾಮದಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನಬಾರ್ಡ್ ಎಂಎಸ್‌ಸಿ ಯೋಜನೆಯಡಿ ನಿರ್ಮಿಸಿರುವ ವಾಣಿಜ್ಯ ಮಳಿಗೆಗಳನ್ನು ಉದ್ಘಾಟಿಸಿ ಮಾತನಾಡಿದ ಅವರು, ರೈತರು ಕೃಷಿ ಜೊತೆಗೆ ಹೈನುಗಾರಿಕೆಗೂ ಹೆಚ್ಚಿನ ಒತ್ತು ನೀಡಿದರೆ ಆರ್ಥಿಕವಾಗಿ ಸಬಲರಾಗಬಹುದು. ದೇಶದಲ್ಲಿ ಹೈನುಗಾರಿಕೆ ಒಂದು ದೊಡ್ಡ ಉದ್ಯಮವಾಗಿ ಬೆಳೆಯುತ್ತಿದೆ. ನಮ್ಮ ಸಹಕಾರ ಸಂಘದಿಂದ ರೈತರ ಅನುಕೂಲಕ್ಕಾಗಿ ಕಡಿಮೆ ದರದಲ್ಲಿ ಸಾಲ ನೀಡಲಾಗುತ್ತಿದೆ. ರೈತರು ಸಹಕಾರ ಸಂಘದಿಂದ ಬರುವ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಎಂಸಿಡಿಸಿಸಿ ಬ್ಯಾಂಕ್ ನಿರ್ದೇಶಕರಾದ ಕುರಹಟ್ಟಿ ಕೆ.ಜಿ.ಮಹೇಶ್, ಎಸ್.ಎಂ.ಕೆಂಪಣ್ಣ, ಸಂಘದ ಅಧ್ಯಕ್ಷ ಕೆ.ಎನ್.ಚಿನ್ನಸ್ವಾಮಿ, ಉಪಾಧ್ಯಕ್ಷ ಆರ್.ಅರುಣ್ ಕುಮಾರ್, ನಿರ್ದೇಶಕರಾದ ಕೆ.ಎಂ.ಮಲ್ಲೇಶ್, ಎಸ್.ಪುಟ್ಟಸ್ವಾಮಿ, ಕೆ.ಎಂ.ಶಿವಪ್ಪ, ಕೆ.ಎಂ.ಶಿವಮೂರ್ತಿ, ಜಿ.ಮಂಜೇಶ್ ಕುಮಾರ್, ಮಂಜುಳ, ನೀಲಮ್ಮ, ನಡಕೇರಯ್ಯ, ನಾಗರಾಜಚಾರ್, ಸಿದ್ದನಾಯಕ, ಬ್ಯಾಂಕ್ ಪ್ರತಿನಿಧಿ ಹೆಚ್.ಎಲ್.ಕೃಷ್ಣ, ಸಿಇಓ ಶಿವಕುಮಾರ್, ಸಿಬ್ಬಂದಿ ಶಿವಪಾದ, ಗುತ್ತಿಗೆದಾರ ಜಗದೀಶ್ ಸೇರಿದಂತೆ ಇತರರಿದ್ದರು.

ಬೆಟ್ಟದಪುರ: ವಿಜೃಂಭಣೆಯ ಹನುಮ ಜಯಂತಿ

ಬೆಟ್ಟದಪುರ, ಡಿ.5– ಗ್ರಾಮದ ಬೆಟ್ಟದ ಏಣಿ ಆಂಜನೇಯಸ್ವಾಮಿ, ಸುಳೆಕೋಟೆ ಗ್ರಾಮದ ಆಂಜನೇಯಸ್ವಾಮಿ ಹಾಗೂ ಚಾಮರಾಜಕೋಟೆ ಹೊಳೆ ಆಂಜನೇಯ ಸ್ವಾಮಿ ದೇವಾಲಯಗಳಲ್ಲಿ ಹನುಮ ಜಯಂತಿ ವಿಜೃಂಭಣೆಯಿಂದ ನಡೆಯಿತು.

ಹನುಮ ಜಯಂತಿ ಅಂಗವಾಗಿ ಬೆಟ್ಟದಪುರ ಇತಿಹಾಸ ಪ್ರಸಿದ್ಧ ಶ್ರೀಏಣಿ ಆಂಜನೇಯಸ್ವಾಮಿ ದೇವಾಲಯವನ್ನು ವಿವಿಧ ಹೂ ಹಾಗೂ ಬಣ್ಣ ಬಣ್ಣದ ದೀಪಗಳಿಂದ ಅಲಂಕರಿಸಲಾಗಿತ್ತು. ಮುಂಜಾನೆಯಿಂದಲೇ ದೇವರಿಗೆ ಅಭಿಷೇಕ ಸೇರಿದಂತೆ ವಿವಿಧ ಪೂಜಾ ಕೈಂಕರ್ಯಗಳು ನಡೆದವು. ಬಳಿಕ ದೇವಾಲಯಕ್ಕೆ ಆಗಮಿಸಿದ ಸಾವಿರಾರು ಭಕ್ತರು ಪೂಜೆ ಸಲ್ಲಿಸಿ, ದೇವರ ದರ್ಶನ ಪಡೆದು ಪುನೀತರಾದರು. ಇದೇ ವೇಳೆ ಭಕ್ತರಿಗೆ ಅನ್ನದಾನ ಏರ್ಪಡಿಸಲಾಗಿತ್ತು. ಬಳಿಕ ಚನ್ನೇಗೌಡನಕೊಪ್ಪಲು ಯುವಕರು ಆಂಜನೇಯಸ್ವಾಮಿ ಉತ್ಸವ ಮೂರ್ತಿಯನ್ನು ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಿದರು. ಈ ವೇಳೆ ಬೆಟ್ಟದಪುರ ಠಾಣೆ ಎಸ್‌ಐ ಪ್ರಕಾಶ ಎತ್ತಿನಮನಿ ಬಿಗಿ ಪೊಲೀಸ್ ಬಂದೋಬಸ್ತ್ ಕೈಗೊಂಡಿದ್ದರು. ಮಾಜಿ ಸಚಿವ ವಿಜಯಶಂಕರ್, ಬಿಜೆಪಿ ಮುಖಂಡ ಕೆಎನ್.ಸೋಮಶೇಖರ್, ಮನ್‌ಮುಲ್ ಅಧ್ಯಕ್ಷ ಪಿ.ಎಂ.ಪ್ರಸನ್ನ, ಕೆಪಿಸಿಸಿ ಸದಸ್ಯ ನಿತಿನ್ ವೆಂಕಟೇಶ್, ಗ್ರಾಪಂ ಸದಸ್ಯರು, ಚನ್ನೇಗೌಡನಕೊಪ್ಪಲು ಗ್ರಾಮಸ್ಥರು ಇನ್ನಿತರರಿದ್ದರು. ಇಲ್ಲಿಗೆ ಸಮೀಪದ ಸೂಳೆಕೋಟೆ ಗ್ರಾಮದ ಪ್ರಸಿದ್ಧ ಯಾತ್ರಾಸ್ಥಳ ಪ್ರಸನ್ನ ಆಂಜನೇಯಸ್ವಾಮಿ ದೇವಾಲಯದಲ್ಲೂ ಹನುಮ ಜಯಂತಿ ಆಚರಿಸಲಾಯಿತು. ದೇವಸ್ಥಾನ ಸಮಿತಿ ಅಧ್ಯಕ್ಷ ಸಿಂಗ್ರಿಶೆಟ್ಟರ ಅಧ್ಯಕ್ಷತೆಯಲ್ಲಿ ಹನುಮ ಜಯಂತೋತ್ಸವ ಪೂಜಾ ಕಾರ್ಯ ನಡೆದವು.



ವಿಶ್ವಾಸವಿಟ್ಟು ಟಿಕೆಟ್ ನೀಡಿದರೆ ಅಚ್ಚರಿ ಫಲಿತಾಂಶ ನೀಡುವೆ

ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ ಕೆ.ಚಿನ್ನಸ್ವಾಮಿ ವಿಶ್ವಾಸ



ತಿ.ನರಸೀಪುರ, ಡಿ.5– ವಿಧಾನಸಭೆಯಲ್ಲಿ ಜಂಟಿ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿ ನಿವೃತ್ತನಾಗಿರುವ ನಾನು ಜನಸೇವೆ ಮಾಡುವ ಉದ್ದೇಶದೊಂದಿಗೆ ತಿ.ನರಸೀಪುರದಿಂದ ಕಾಂಗ್ರೆಸ್ ಟಿಕೆಟ್ ಬಯಸಿ ಅರ್ಜಿ ಸಲ್ಲಿಸಿರುವುದಾಗಿ ಮೂಗೂರು ಕೆ.ಚಿನ್ನಸ್ವಾಮಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್‌ನಲ್ಲಿ ದಶಕಕ್ಕೂ ಹೆಚ್ಚು ಕಾಲ ಸಕ್ರಿಯ ಕಾರ್ಯಕರ್ತನಾಗಿ ದುಡಿದಿದ್ದು, ಕ್ಷೇತ್ರದ ಜನರ ವಿಶ್ವಾಸ ಗಳಿಸಿದ್ದೇನೆ. ಹೈಕಮಾಂಡ್ ನನ್ನ ಮೇಲೆ ವಿಶ್ವಾಸ ಇಟ್ಟು ಟಿಕೆಟ್ ನೀಡಿದ್ದೆ ಆದಲ್ಲಿ ಅಚ್ಚರಿಯ ಫಲಿತಾಂಶ ನೀಡುತ್ತೇನೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸ್ಥಳೀಯ ನಿವಾಸಿಯಾದ ನಾನು ವಿಧಾನಸಭೆಯಲ್ಲಿ ಜಂಟಿ ಕಾರ್ಯದರ್ಶಿಯಾಗಿದ್ದುಕೊಂಡೆ ನನ್ನ ಕೈಲಾದ ಸೇವೆ ಮಾಡಿದ್ದೇನೆ. ಕ್ಷೇತ್ರದಲ್ಲಿ ಈವರೆಗೂ ಸ್ಥಳೀಯರಿಗೆ ಶಾಸಕರಾಗುವ ಅವಕಾಶ ದೊರಕಿಲ್ಲ. ಹಾಗಾಗಿ ಸ್ಥಳೀಯನೇ ಆಗಿ ಕ್ಷೇತ್ರದಲ್ಲಿ ಜನರ ಪ್ರೀತಿ ವಿಶ್ವಾಸ ಗಳಿಸಿರುವ ನನಗೆ ಕಾಂಗ್ರೆಸ್ ಹೈಕಮಾಂಡ್ ಪಕ್ಷದ ಟಿಕೆಟ್ ನೀಡಬೇಕು ಎಂದು ಮನವಿ ಮಾಡಿದರು.

ಚುನಾವಣೆ ಹಿನ್ನೆಲೆಯಲ್ಲಿ ಕ್ಷೇತ್ರದ ಕಾಂಗ್ರೆಸ್ ಮುಖಂಡರನ್ನು ಭೇಟಿಯಾಗಿ ಸಲಹೆ ಸೂಚನೆ ಪಡೆದು, ಟಿಕೆಟ್‌ಗಾಗಿ ಅರ್ಜಿ ಸಲ್ಲಿಸಿದ್ದೇನೆ. ಅಲ್ಲದೇ ಮತದಾರರನ್ನು ಭೇಟಿ ಮಾಡಿ ಅವರ ಆಶೀರ್ವಾದ ಪಡೆಯುತ್ತಿದ್ದೇನೆ. ಕ್ಷೇತ್ರದಲ್ಲಿ ನನ್ನದೇ ಆದ ಓಟ್ ಬ್ಯಾಂಕ್ ಇದೆ. ಅವರೆಲ್ಲರೂ ನನ್ನನ್ನೇ ಬೆಂಬಲಿಸುತ್ತಾರೆ ಎನ್ನುವ ನಂಬಿಕೆ ಇದ್ದು, ಚುನಾವಣೆಯಲ್ಲಿ ಗೆಲ್ಲುವ ಸಂಪೂರ್ಣ ವಿಶ್ವಾಸ ಇದೆ. ಟಿಕೆಟ್ ಸಂಬಂಧ ಕೆಪಿಸಿಸಿ ಕಾರ್ಯಾಧ್ಯಕ್ಷ ಧ್ರುವನಾರಾಯಣ್ ಅವರಿಗೆ ಮನವಿ ಮಾಡಿದ್ದೇನೆ. ಅವರಿಂದ ಯಾವುದೇ ಸಕಾರಾತ್ಮಕ ಪ್ರತಿಕ್ರಿಯೆ ಬಾರದಿದ್ದರೂ, ಚುನಾವಣೆಗೆ ಸ್ಪರ್ಧಿಸುವ ನನ್ನ ಬಯಕೆಗೆ ತಣ್ಣೀರೆರಚಿಲ್ಲ ಎಂದರು.

ರಾಜಕೀಯ ಅಧಿಕಾರ ಇಲ್ಲದೇ ಜನಸೇವೆ ಕಷ್ಟ: ಪ್ರಸ್ತುತ ರಾಜಕೀಯ ಅಧಿಕಾರವಿಲ್ಲದೇ ಯಾವುದೇ ಕೆಲಸ ಮಾಡಲು ಸಾಧ್ಯವಿಲ್ಲ. ಹಾಗಾಗಿ ಚುನಾವಣೆಯಲ್ಲಿ ಸ್ಪರ್ಧಿಸಿ ಜನಸೇವೆ ಮಾಡುವ ಆಶಯ ಹೊಂದಿದ್ದೇನೆ. ಕ್ಷೇತ್ರದಲ್ಲಿ ಮೊದಲಿಗೆ ಯುವಕರಿಗೆ ಉದ್ಯೋಗ ದೊರಕಿಸಿ ಕೊಡಬೇಕೆಂಬ ಬಯಕೆ ಹೊಂದಿದ್ದು, ಅದಕ್ಕಾಗಿ ಕ್ಷೇತ್ರದಲ್ಲಿ ಸಣ್ಣ ಕೈಗಾರಿಕೆ ಸ್ಥಾಪಿಸಬೇಕೆನ್ನುವ ಮಹದಾಸೆ ನನ್ನದು. ಇನ್‌ಫೋಸಿಸ್ ಸುಧಾಮೂರ್ತಿ, ವಿಪ್ರೋ ಮುಂತಾದ ದೈತ್ಯ ಐಟಿ ಬಿಟಿ ಕಂಪನಿಗಳೊಂದಿಗೆ ಮಾತುಕತೆ ನಡೆಸಿ ಇಲ್ಲಿಗೆ ಸ್ಮಾಲ್‌ಸ್ಕೇಲ್ ಹಾಗೂ ಮೀಡಿಯಂ ಸ್ಕೇಲ್ ಕೈಗಾರಿಕೆ ತರಬೇಕೆನ್ನುವ ಆಶಯ ಹೊಂದಿರುವುದಾಗಿ ತಿಳಿಸಿದರು.

ಮುಂಗಾರಲ್ಲಿ 31, ಹಿಂಗಾರಿನಲ್ಲಿ 2 ಪ್ರಸ್ತಾವನೆ ತಿರಸ್ಕಾರ

ನಂಜನಗೂಡು, ಡಿ.5– ಪ್ರಧಾನಮಂತ್ರಿ ಫಸಲ್ ಭೀಮಾ ಯೋಜನೆಯಡಿ 2020–21ನೇ ಸಾಲಿನ ಮುಂಗಾರು ಮತ್ತು ಹಿಂಗಾರು ಹಂಗಾಮಿನ ಬೆಳೆ ವಿಮೆಗೆ ನೋಂದಣಿಯಾದ ಪ್ರಸ್ತಾವನೆಗಳೊಂದಿಗೆ ಬೆಳೆ ಸಮೀಕ್ಷೆಯಲ್ಲಿ ದಾಖಲಾದ ದತ್ತಾಂಶ ಮತ್ತು ಛಾಯಾಚಿತ್ರದೊಂದಿಗೆ ಹೋಲಿಸಿದಾಗ ತಾಳೆಯಾಗದ ಮುಂಗಾರು ಹಂಗಾಮಿನ 31 ಹಾಗೂ ಹಿಂಗಾರು ಹಂಗಾಮಿನ 2 ಪ್ರಸ್ತಾವನೆಗಳನ್ನು ತಿರಸ್ಕರಿಸಲಾಗಿದೆ.

ಈ ಬಗ್ಗೆ ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ಹೋಬಳಿ ಮಟ್ಟದ ರೈತ ಸಂಪರ್ಕ ಕೇಂದ್ರ ಮತ್ತು ಗ್ರಾಪಂಗಳಲ್ಲಿ ಪ್ರಕಟಿಸಲಾಗಿದೆ. ಆದ್ದರಿಂದ ಮುಂದಿನ 15 ದಿನಗಳೊಳಗೆ ವಿಮಾ ಅರ್ಜಿಗಳು ತಿರಸ್ಕೃತಗೊಂಡಿರುವ ಬಗ್ಗೆ ರೈತರಿಂದ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿದ್ದು, ಬೆಳೆ ವಿಮೆಗೆ ನೋಂದಣಿಯಾಗಿರುವ ಬೆಳೆ ಬೆಳೆದಿರುವ ಕುರಿತು ಅಗತ್ಯ ದಾಖಲಾತಿಗಳೊಡನೆ ಕೃಷಿ ಇಲಾಖೆಗೆ ಸಲ್ಲಿಸುವುದು. 15 ದಿನಗಳೊಳಗೆ ಯಾವುದೇ ಆಕ್ಷೇಪಣೆ ಬಂದಿಲ್ಲದಿದ್ದರೆ ಎಲ್ಲಾ ಪ್ರಸ್ತಾವನೆ ತಿರಸ್ಕೃತಗೊಳಿಸಲಾಗುವುದು ಎಂದು ಸಹಾಯಕ ಕೃಷಿ ನಿರ್ದೇಶಕ ದೀಪಕ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೋಟೆಯಲ್ಲಿ ಮಹಿಳಾ ಘಟಕದ ಸಂಘಟನಾ ಸಭೆ



ಹೆಚ್.ಡಿ.ಕೋಟೆ, ಡಿ.5– ಪಟ್ಟಣದ ಜೆಡಿಎಸ್ ಕಚೇರಿಯಲ್ಲಿ ತಾಲೂಕು ಮಹಿಳಾ ಘಟಕದ ಸಂಘಟನೆ ಸಭೆ ನಡೆಯಿತು.

ಸಭೆಯಲ್ಲಿ ಮಾತನಾಡಿದ ಜೆಡಿಎಸ್ ಮುಖಂಡ ಜಯಪ್ರಕಾಶ್ ಚಿಕ್ಕಣ್ಣ, ರಾಜ್ಯದಲ್ಲಿ ಜೆಡಿಎಸ್ ಅಧಿಕಾರಕ್ಕೆ ಬಂದು ಕುಮಾರಸ್ವಾಮಿ ಮುಖ್ಯಮಂತ್ರಿಯಾಗಲು ಶಕ್ತಿಮೀರಿ ಶ್ರಮಿಸಬೇಕು. ಹೀಗಾಗಿ ಪ್ರತಿಯೊಬ್ಬರೂ ಪಕ್ಷ ಸಂಘಟನೆಯಲ್ಲಿ ತೊಡಗಬೇಕು ಎಂದ ಅವರು, ನನ್ನ ತಂದೆ ಚಿಕ್ಕಣ್ಣ ಹಾಗೂ ಪಕ್ಷದ ಕಾರ್ಯಕರ್ತರು ತಾಲೂಕಿನ ಪ್ರತಿಯೊಂದು ಗ್ರಾಮಗಳಿಗೂ ಭೇಟಿ ನೀಡಿ ಪಕ್ಷ ಸಂಘಟಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದೇವೆ ಎಂದರು.

ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣ, ತಾಲೂಕು ಜೆಡಿಎಸ್ ಅಧ್ಯಕ್ಷ ರಾಜೇಂದ್ರ, ಸರಗೂರು ತಾಲೂಕು ಅಧ್ಯಕ್ಷ ಗೋಪಾಲಸ್ವಾಮಿ, ಜೆಡಿಎಸ್ ಹಿರಿಯ ಮುಖಂಡ ನರಸಿಂಹೇಗೌಡ, ಉಪಾಧ್ಯಕ್ಷ ಶಫೀವುಲ್ಲಾ, ಟೌನ್ ಅಧ್ಯಕ್ಷ ವೇಣು, ಪ್ರಧಾನ ಕಾರ್ಯದರ್ಶಿ ಶಿವಕುಮಾರ್ ಪುರಸಭೆ ಅಧ್ಯಕ್ಷೆ ಅನಿತಾ, ಮಾಜಿ ಅಧ್ಯಕ್ಷೆ ಶಿವಮ್ಮ, ಸರೋಜಮ್ಮ, ಚಾ. ನಂಜುಂಡಮೂರ್ತಿ, ಸೂರಿ, ರತ್ನಮ್ಮ, ಮೀನಾ ಕುಮಾರಿ, ರೇಣುಕ, ಪವಿತ್ರ ರಾಜಮ್ಮ ಚಿನ್ನಮ್ಮ, ಕಲ್ಪನಾ, ಕವಿತಾ, ಲಕ್ಷ್ಮಿ, ಮೀನಾ, ಸವಿತಾ, ಲೋಕೇಶ್ವರಿ, ನಾಗನಾಯಕ, ಶಿವರಾಜು, ಇನ್ನಿತರರಿದ್ದರು.

ಡಿ.25ಕ್ಕೆ, ಬೃಹತ್ ಉಚಿತ ಆರೋಗ್ಯ ತಪಾಸಣಾ ಶಿಬಿರ



ಸರಗೂರು, ಡಿ.5– ಗ್ರಾಮೀಣ ಜನರ ಆರೋಗ್ಯದ ಹಿತದೃಷ್ಟಿಯಿಂದ ಡಿ.25ರಂದು ಪಟ್ಟಣದಲ್ಲಿ ಬೃಹತ್ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿದೆ ಎಂದು ಜೆಎಸ್‌ಎಸ್ ಮಹಾ ವಿದ್ಯಾಪೀಠದ ಕಾರ್ಯದರ್ಶಿ ಪ್ರೊ. ಎಸ್.ಪಿ.ಮಂಜುನಾಥ್ ತಿಳಿಸಿದರು.

ಪಟ್ಟಣದ ಶಿವರಾತ್ರೀಶ್ವರ ಶಿವಾನುಭವ ಮಂದಿರದಲ್ಲಿ ನಡೆದ ಪೂರ್ವಭಾವಿ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರ ಆಶೀರ್ವಾದದೊಂದಿಗೆ ತಾಲೂಕಿನ ಬಡ ಜನರ ಅನುಕೂಲಕ್ಕಾಗಿ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಪ್ರತಿಯೊಬ್ಬರೂ ಇದರ ಸದುಪಯೋಗ ಪಡೆಯಬೇಕು ಎಂದರು.

ಮೈಸೂರಿನ ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಚಾರ್ಯ ಹೆಚ್. ಬಸವನಗೌಡಪ್ಪ ಹಾಗೂ ವೈದ್ಯಕೀಯ ಅಧೀಕ್ಷಕ ಡಾ.ಸಿ.ಪಿ.ಮಧು ಮಾತನಾಡಿ, ಪ್ರತಿ ತಿಂಗಳ 4ನೇ ಭಾನುವಾರ ಪಟ್ಟಣದಲ್ಲಿ ಉಚಿತ ತಪಾಸಣಾ ಶಿಬಿರ ನಡೆಯಲಿದೆ. ಈ ವೇಳೆ ಸಾಮಾನ್ಯ ಖಾಯಿಲೆಗಳಿಗೆ ಸಲಹೆ ಸೇರಿದಂತೆ ಹೃದಯ ಸಂಬಂಧಿ ಖಾಯಿಲೆ, ಬಿಪಿ, ಶುಗರ್, ಕಿವಿ, ಮೂಗು, ಗಂಟಲು, ಕಣ್ಣಿನ ಸಮಸ್ಯೆ, ಕೀಲುನೋವು ಮತ್ತು ಮೂಳೆ, ಚರ್ಮ ಸೇರಿದಂತೆ ಇನ್ನಿತರ ಸಮಸ್ಯೆಗಳ ತಪಾಸಣೆ ನಡೆಸಲಾಗುವುದು. ಈ ವೇಳೆ ಹೆಚ್ಚಿನ ಚಿಕಿತ್ಸೆ ಅಗತ್ಯವಿದ್ದಲ್ಲಿ ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ರಿಯಾಯಿತಿ ದರದಲ್ಲಿ ಚಿಕಿತ್ಸೆ ನೀಡಲಾಗುವುದು ಎಂದರು.

ಈ ವೇಳೆ ಜೆಎಸ್‌ಎಸ್ ಮಹಾವಿದ್ಯಾಪೀಠದ ವೈದ್ಯಕೀಯ ವಿಭಾಗದ ನಿರ್ದೇಶಕ ಆರ್.ಮಹೇಶ್, ಡಾ.ನವೀನ್ ನಿರಂಜನ್, ಡಾ.ಶಾಂತಮಲ್ಲಪ್ಪ, ಮಲ್ಲಿಕಾರ್ಜುನ್, ಜೀವನ್, ಶಿವಮಲ್ಲು, ಮಹೇಶ್, ಸ್ನೇಹ ಸ್ತ್ರೀ ಸಮಾಜದ ಅಧ್ಯಕ್ಷೆ ಸುಧಾ, ಮುಖಂಡರಾದ ಡಿ.ಜಿ ಶಿವರಾಜು, ನಟರಾಜು, ಆನಂದ್, ಗಣಪತಿ, ಎಸ್.ಎನ್. ಮೋಹನ್ ಕುಮಾರ್, ಗಿರೀಶ್, ಸಿದ್ದಪ್ಪ, ಗುರುಸ್ವಾಮಿ, ಶಿವಕುಮಾರ್, ಮಹದೇವಪ್ಪ, ಕೆಂಡಗಣ್ಣಸ್ವಾಮಿ, ಶಿವಪ್ಪ, ಜೆಎಸ್‌ಎಸ್ ಕಾಲೇಜಿನ ಪ್ರಾಚಾರ್ಯ ಕೆ.ಎಸ್.ಮಹದೇವಸ್ವಾಮಿ, ಪ್ರೌಢಶಾಲೆ ಮುಖ್ಯಶಿಕ್ಷಕ ಗಂಗಾಧರಯ್ಯ, ಪ್ರಾಥಮಿಕ ಶಾಲೆ ಮುಖ್ಯಶಿಕ್ಷಕ ಮಹಮದ್ ಅಂಜುಮ್ ಪಾಷ ಹಾಗೂ ಸಿಬ್ಬಂದಿ ಹಾಜರಿದ್ದರು.

ನಾಳೆ ಹುಣಸೂರಲ್ಲಿ ಅದ್ಧೂರಿ ಹನುಮ ಜಯಂತಿ: ಶೋಭಾಯಾತ್ರೆಯಲ್ಲಿ ಸಾವಿರಾರು ಮಂದಿ ಭಾಗಿ

ಮುಂಜಾಗ್ರತಾ ಕ್ರಮವಾಗಿ ಬಿಗಿ ಬಂದೋಬಸ್ತ್: ಎಸ್ಪಿ



ಹುಣಸೂರು, ಡಿ.5– ಕೊರೊನಾ ಹಿನ್ನೆಲೆಯಲ್ಲಿ ಕಳೆದ 2 ವರ್ಷಗಳಿಂದ ಹುಣಸೂರಿನಲ್ಲಿ ಸರಳವಾಗಿ ನಡೆಯುತ್ತಿದ್ದ ಹನುಮ ಜಯಂತಿ ಈ ಬಾರಿ ಡಿ.7 ರಂದು ನಗರದಲ್ಲಿ ಅದ್ಧೂರಿಯಾಗಿ ನಡೆಯಲಿದ್ದು, ಶೋಭಾಯಾತ್ರೆಯಲ್ಲಿ ಸಾವಿರಾರು ಮಂದಿ ಭಾಗವಹಿಸುವುದರಿಂದ ಮುಂಜಾಗ್ರತಾ ಕ್ರಮವಾಗಿ ಬಿಗಿ ಬಂದೋಬಸ್ತ್ ಕೈಗೊಂಡಿದ್ದೇವೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಚೇತನ್ ತಿಳಿಸಿದರು.

ನಗರದ ಡಿವೈಎಸ್ಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹನುಮ ಜಯಂತಿ ಅಂಗವಾಗಿ ಭದ್ರತೆಗಾಗಿ 1700ಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಅಲ್ಲದೇ 8 ಕೆಎಸ್‌ಆರ್‌ಪಿ ತುಕಡಿ, 9 ಡಿಆರ್ ತುಕಡಿಗಳು ಕಾರ್ಯ ನಿರ್ವಹಿಸಲಿವೆ. ಅಲ್ಲದೇ ನಗರ ವ್ಯಾಪ್ತಿಯಲ್ಲಿ ಶೋಭಾಯಾತ್ರೆ ಮೆರವಣಿಗೆ ಸಾಗುವ ದಾರಿ ಹಾಗೂ ನಿರ್ದಿಷ್ಟ ಪ್ರದೇಶಗಳಲ್ಲಿ 75 ಸಿಸಿ ಕ್ಯಾಮರಾಗಳನ್ನು ಅಳವಡಿಸಲಾಗಿದೆ. ನಗರ ಪ್ರವೇಶಿಸುವ 4 ಮಾರ್ಗ ಹಾಗೂ ಜಿಲ್ಲೆಯಿಂದ ಒಳಬರುವ 4 ಮಾರ್ಗ ಸೇರಿದಂತೆ 8 ಕಡೆ ಚೆಕ್‌ಪೋಸ್ಟ್ ನಿರ್ಮಿಸಲಾಗಿದ್ದು, ಎಲ್ಲಾ ವಾಹನಗಳನ್ನು ತಪಾಸಣೆಗೆ ಒಳಪಡಿಸಲಾಗುವುದು ಎಂದರು.

ಅಲ್ಲದೇ ಮುಂಜಾಗ್ರತಾ ಕ್ರಮವಾಗಿ ಡಿ.6 ಹಾಗೂ 7ರಂದು ಮದ್ಯ ಮಾರಾಟ ನಿಷೇಧಿಸಲಾಗಿದೆ. ಶೋಭಾಯಾತ್ರೆಯಲ್ಲಿ ಹನುಮ ಜಯಂತಿ ಆಚರಣಾ ಸಮಿತಿ ಅನುಮತಿ ಪಡೆದಿರುವ ವಾಹನಗಳಿಗೆ ಮಾತ್ರ ಮೆರವಣಿಗೆಯಲ್ಲಿ ತೆರಳಲು ಅವಕಾಶವಿದೆ. ಅನುಮತಿ ಇಲ್ಲದ ವಾಹನಗಳು ಯಾತ್ರೆಯಲ್ಲಿ ಸಂಚರಿಸಿದರೇ ಸೂಕ್ತ ಕ್ರಮ ಕೈಗೊಳ್ಳಲಾಗುವುದು. ಮೆರವಣಿಗೆಯು ಬೆಳಗ್ಗೆ 11ಕ್ಕೆ ಪ್ರಾರಂಭವಾಗಿ ಸಂಜೆ 5 ಗಂಟೆಗೆ ಮುಕ್ತಾಯವಾಗಬೇಕು ಎಂದರು.

ಶಾಲಾ–ಕಾಲೇಜಿಗೆ ರಜೆ ಘೋಷಿಸಲಾಗಿದ್ದು, ರಜಾ ದಿನದಲ್ಲಿ ಶಾಲಾ ಕಾಲೇಜು ನಡೆಸುವ ಮೂಲಕ ಸರಿದೂಗಿಸಲಾಗುವುದು. ನಗರ ಸೇರಿದಂತೆ ವಿವಿಧೆಡೆ 25 ಮಂದಿ ಚಲನವಲನದ ಮೇಲೆ ಪೊಲೀಸರು ಕಣ್ಣಿಡಲಿದ್ದು, ನಗರಕ್ಕೆ ಪ್ರವೇಶಿಸುವ ಎಲ್ಲರ ಮೇಲೂ ನಿಗಾ ವಹಿಸಲಾಗುವುದು. ಅನುಮಾನ ಕಂಡು ಬಂದರೆ ಅವರ ಮೇಲೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದರು.

ನಗರದಲ್ಲಿ ರಾಷ್ಟ್ರೀಯ ಹೆದ್ದಾರಿ 275 ಹಾದು ಹೋಗಿದ್ದು, ಪ್ರಯಾಣಿಕರಿಗೆ ಯಾವುದೇ ತೊಂದರೆಯಾಗದಂತೆ ಸುಗಮ ಸಂಚಾರಕ್ಕೆ ಕ್ರಮ ವಹಿಸಲಾಗಿದೆ. ಅಲ್ಲದೇ ಮೆರವಣಿಗೆ ಸಾಗುವ ರಸ್ತೆಗಳಲ್ಲಿ ಸಾರ್ವಜನಿಕ ಸಂಚಾರ ನಿರ್ಬಂಧಿಸಲಾಗಿದೆ. ನಗರಸಭೆಯಿಂದ ಅನುಮತಿ ಪಡೆದ ಸ್ಥಳಗಳಲ್ಲಿ ಮಾತ್ರ ಫ್ಲೆಕ್ಸ್ ಹಾಗೂ ಬಾವುಟ ಕಟ್ಟಬೇಕು. ಮೆರವಣಿಗೆಯು ನಗರದ ರಂಗನಾಥ ಬಡಾವಣೆಯಿಂದ ಹೊರಟು ಸಂವಿಧಾನ ಸರ್ಕಲ್, ಕೋಟೆ ಸರ್ಕಲ್, ಜೆ.ಎಲ್.ಬಿ.ರಸ್ತೆ, ಕಾರ್ಖಾನೆ ರಸ್ತೆ, ಬಜಾರ್ ರಸ್ತೆ, ಅಕ್ಷಯ ಭಂಡಾರ್, ಕಲ್ಪತರು ವೃತ್ತದ ಮೂಲಕ ಮಂಜುನಾಥಸ್ವಾಮಿ ದೇವಸ್ಥಾನ ತಲುಪಲಿದೆ ಎಂದರು.

ಸಭೆಯಲ್ಲಿ ಡಿಸಿ ಡಾ.ರಾಜೇಂದ್ರ ಎಸಿ ರುಚಿ ಬಿಂದಾಲ್, ಡಿವೈಎಸ್‌ಪಿ ರವಿಪ್ರಸಾದ್, ಪೌರಾಯುಕ್ತೆ ಮಾನಸ, ತಹಸೀಲ್ದಾರ್ ಡಾ.ಅಶೋಕ್ ಇನ್ನಿತರರಿದ್ದರು.

ವಿದ್ಯುತ್ ಸ್ಪರ್ಶ: ಜಾನುವಾರು ಸಾವು



ಹಿರೀಕ್ಯಾತನಹಳ್ಳಿ, ಡಿ.5– ವಿದ್ಯುತ್ ಸ್ಪರ್ಶದಿಂದ ಜಾನುವಾರು ಸಾವನ್ನಪ್ಪಿರುವ ಘಟನೆ ಗ್ರಾಮದಲ್ಲಿ ನಡೆದಿದೆ. ಗ್ರಾಮದ ನಿವಾಸಿ ರವಿ ಎಂಬುವರಿಗೆ ಸೇರಿದ 80 ಸಾವಿರ ರೂ. ಬೆಲೆ ಬಾಳುವ ಹೆಚ್‌ಎಫ್ ತಳಿಯ ಇಲಾತಿ ಹಸು ಅಸುನೀಗಿದೆ.

ರವಿ ಅವರು ತಮ್ಮ ಮನೆ ಹಿಂಭಾಗ ಪಾಳು ಬಿದ್ದ ಜಾಗದಲ್ಲಿ ಹಸುವನ್ನು ಮೇಯಲು ಕಟ್ಟು ಹಾಕಿದ್ದರು. ಮನೆ ಹಿಂಭಾಗದಲ್ಲಿದ್ದ ಟ್ರಾನ್ಸ್‌ಫಾರ್ಮರ್ ಪಕ್ಕದಲ್ಲಿ ಕಟ್ಟುವ ಸಮಯದಲ್ಲಿ ವಿದ್ಯುತ್ ಇಲ್ಲದಿದ್ದರಿಂದ ರೈತ ಪಾರಾಗಿದ್ದಾರೆ. ಸ್ವಲ್ಪ ಹೊತ್ತಿನ ನಂತರ ರೈತ ಹಸುವನ್ನು ನೋಡಲು ಹೋದಾಗ ಹಸು ವಿದ್ಯುತ್ ಸ್ಪರ್ಶಕ್ಕೀಡಾಗಿ ಮೃತಪಟ್ಟಿದೆ.

ಈ ಸಂಬಂಧ ಹುಣಸೂರು ಗ್ರಾಮಾಂತರ ಪೊಲೀಸ್ ಠಾಣೆಗೆ ರೈತ ದೂರು ನೀಡಿದ್ದಾರೆ. ಸ್ಥಳಕ್ಕೆ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಅಧಿಕಾರಿಗಳು ಭೇಟಿ ನೀಡಿ, ಸ್ಥಳ ಪರಿಶೀಲಿಸಿದರು.



ತಿ.ನರಸೀಪುರ ಪುರಸಭೆ 2ನೇ ವಾರ್ಡ್‌ನಲ್ಲಿ ಶುದ್ಧ ಕುಡಿಯುವ ನೀರಿನ ಘಟಕಕ್ಕೆ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಭೂಮಿ ಪೂಜೆ ನೆರವೇರಿಸಿದರು. ಈ ವೇಳೆ ಪುರಸಭಾ ಉಪಾಧ್ಯಕ್ಷೆ ನಾಗರತ್ನ, ಸದಸ್ಯರಾದ ಸಿಸ್ಟಮ್ ಸಿದ್ದು, ಎನ್.ಸೋಮು, ಟಿ.ಎಂ.ನಂಜುಂಡಸ್ವಾಮಿ, ಮೆಡಿಕಲ್ ನಾಗರಾಜು, ತುಂಬಲ ಪ್ರಕಾಶ್, ಕ್ಷೇತ್ರಾಧ್ಯಕ್ಷ ರಮೇಶ್ ಮುದ್ದೇಗೌಡ, ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ, ಅಮ್ಜದ್ ಖಾನ್, ಭಾಗ್ಯಮ್ಮ, ಮಹದೇವಮ್ಮ, ರಾಘವೇಂದ್ರ, ಗುತ್ತಿಗೆದಾರ ರಂಗಸ್ವಾಮಿರೆಡ್ಡಿ ಇತರರಿದ್ದರು.

ಮಲ್ಲೇಶ್ ನಿಧನ



ಬೆಟ್ಟದಪುರ, ಡಿ.5– ಗ್ರಾಮದ ನಿವಾಸಿ ಮಲ್ಲೇಶ್(40) ಸೋಮವಾರ ನಿಧನರಾದರು. ಮೃತರು ತಾಯಿ, ಪತ್ನಿ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗ್ರಾಮದಲ್ಲಿ ಸಂಜೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅಶ್ವಗಳ ಆಹಾರ ಮತ್ತಿತರೆ ಪದಾರ್ಥಗಳಿಗೆ ದರಪಟ್ಟಿ ಆಹ್ವಾನ

ಮೈಸೂರು, ಡಿ.5– ಕೆ.ಎ.ಆರ್.ಪಿ. ಮೌಂಟೆಡ್ ಕಂಪನಿ, ಮೈಸೂರು ಘಟಕದಲ್ಲಿನ ಅಶ್ವಗಳಿಗೆ 2022–23 ನೇ ಸಾಲಿನ ನಾಲ್ಕನೇ ತ್ರೈಮಾಸಿಕ ಅವಧಿಗೆ (01.01.2023 ರಿಂದ 31.03.2023 ರವರೆಗೆ) ಅವಶ್ಯವಿರುವ 11 ಬಗೆಯ ಅಶ್ವಗಳ ಆಹಾರ ಮತ್ತಿತರೆ ಪದಾರ್ಥಗಳಾದ ಹುರುಳಿಕಾಳು, ಗೋಧಿ ತೌಡು, ಡಿ.ಸಿ.ಓಟ್ಸ್, ಭತ್ತದ ಹುಲ್ಲು, ಅಗಸೆಬೀಜ, ಲೂಸನ್, ಕಾಡುಸೌದೆ, ಕುದುರೆಲಾಳ, ಕುದುರೆಲಾಳದ ಮೊಳೆ, ಹರಳುಪ್ಪು, ಇದ್ದಿಲು ಇವುಗಳನ್ನು ಪರಿಮಾಣಕ್ಕನುಗುಣವಾಗಿ ದರಪಟ್ಟಿಗಳ ಮುಖಾಂತರ ಖರೀದಿಸುವ ಸಂಬಂಧ ಇಚ್ಛೆಯುಳ್ಳ ಸಂಸ್ಥೆ ಮತ್ತು ವರ್ತಕರುಗಳಿಂದ ದರಪಟ್ಟಿಗಳನ್ನು ಆಹ್ವಾನಿಸಲಾಗಿದೆ.

ಅಶ್ವಗಳ ಆಹಾರ ಮತ್ತಿತರೆ ಪದಾರ್ಥಗಳನ್ನು ಸರಬರಾಜು ಮಾಡಲು ಇಚ್ಛೆಯುಳ್ಳವರು ಕಮಾಂಡೆಂಟ್‌ರವರ ಕಚೇರಿ, ಕೆ.ಎ.ಆರ್.ಪಿ. ಮೌಂಟೆಡ್ ಕಂಪನಿ, ಲಲಿತಮಹಲ್ ರಸ್ತೆ, ಮೈಸೂರು ವಿಳಾಸಕ್ಕೆ ಖುದ್ದಾಗಿ ಭೇಟಿ ನೀಡಬಹುದು ಅಥವಾ ಕಚೇರಿ ದೂರವಾಣಿ ಸಂಖ್ಯೆ:0821–2418154ರ ಮುಖಾಂತರ ಸಂಪರ್ಕಿಸಿ ವಿವರಗಳನ್ನು ಪಡೆದುಕೊಳ್ಳಬಹುದು.

ದರಪಟ್ಟಿಗಳನ್ನು ಡಿ.12ರ ಸಂಜೆ 5.30 ಗಂಟೆಯೊಳಗೆ ಸಲ್ಲಿಸಬೇಕು. ಅಂಗೀಕರಿಸಲ್ಪಟ್ಟ ದರಪಟ್ಟಿಗಳಲ್ಲಿ ನಮೂದಿಸಿರುವ ಆಹಾರ ಮತ್ತಿತರೆ ಪದಾರ್ಥಗಳ ಮಾದರಿಯನ್ನು ಪರಿಶೀಲಿಸಿ, ಆದೇಶವನ್ನು ನೀಡಲಾಗುವುದು ಎಂದು ಕೆ.ಎ.ಆರ್.ಪಿ. ಮೌಂಟೆಡ್ ಕಂಪನಿಯ ಕಮಾಂಡೆಂಟ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಲಾಲು ಪ್ರಸಾದ್ ಯಾದವ್ ಕಿಡ್ನಿ ಕಸಿ ಶಸ್ತ್ರ ಚಿಕಿತ್ಸೆ ಯಶಸ್ವಿ

ಪಾಟ್ನಾ: ಬಿಹಾರದ ಮಾಜಿ ಸಿಎಂ ಹಾಗೂ ಮಾಜಿ ಕೇಂದ್ರ ಸಚಿವ ಲಾಲು ಪ್ರಸಾದ್ ಯಾದವ್ ಅವರ ಕಿಡ್ನಿ ಕಸಿ ಶಸ್ತ್ರ ಚಿಕಿತ್ಸೆ ಯಶಸ್ವಿಯಾಗಿದೆ ಎಂದು ಪುತ್ರ ತೇಜಸ್ವಿ ಯಾದವ್ ಹೇಳಿದ್ದಾರೆ.

ಈ ಹಿಂದೆ ಕಿಡ್ನಿ ವೈಫಲ್ಯ ಸಮಸ್ಯೆಯಿಂದ ಬಳಲುತ್ತಿದ್ದ ಲಾಲು ಪ್ರಸಾದ್ ಯಾದವ್‌ರನ್ನು ಸಿಂಗಾಪುರದ ಮೌಂಟ್ ಎಲಿಜಬೆತ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅವರಿಗೆ ಅವರ ಮಗಳು ರೋಹಿಣಿ ಆಚಾರ್ಯ ಒಂದು ಕಿಡ್ನಿ ನೀಡಲು ಮುಂದಾಗಿದ್ದರು. ಇದೀಗ ಈ ಕಿಡ್ನಿ ಕಸಿ ಶಸ್ತ್ರಚಿಕಿತ್ಸೆ ನಡೆದಿದ್ದು, ಶಸ್ತ್ರ ಚಿಕಿತ್ಸೆ ಯಶಸ್ವಿಯಾಗಿದೆ ಎಂದು ಸಿಂಗಾಪುರದಲ್ಲಿರುವ ಅವರ ಪುತ್ರ ತೇಜಸ್ವಿ ಯಾದವ್ ಮಾಹಿತಿ ನೀಡಿದ್ದಾರೆ.

ಕಳೆದಿದೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ಸಂಜಯ್ ಡೆವೆಲಪರ್ಸ್‌ನವರು ಶ್ರೀಮತಿ ಕನ್ಯಾಕುಮಾರಿ ಎಂ.ಎಸ್. ರವರಿಗೆ ಕೆನ್ನಾಳು ಗ್ರಾಮದ ಜಯಂತಿನಗರ 47/ಬಿ ಸ್ವತ್ತಿಗೆ ಕ್ರಯಪತ್ರ ಸಂಖ್ಯೆ 2795/2015–16 ಜಕ್ಕನಹಳ್ಳಿಗೆ ಬೈಕಿನಲ್ಲಿ ಹೋಗುವ ಸಮಯದಲ್ಲಿ ಕಳೆದುಹೋಗಿದೆ. ಯಾರಿಗಾದರು ಸದರಿ ದಾಖಲೆಗಳು ಸಿಕ್ಕಿದಂತಹ ಪಕ್ಷದಲ್ಲಿ ಅದನ್ನು ಈ ಕೆಳಗೆ ತಿಳಿಸಿದ ವಿಳಾಸಕ್ಕೆ ತಲುಪಿಸಬೇಕೆಂದು ವಿನಂತಿ:

ಶ್ರೀ ಗೋವಿಂದೇ ಗೌಡ
ಬಿನ್ ಚಲುವೇ ಗೌಡ, ನೀಲನಹಳ್ಳಿ ಗ್ರಾಮ, ಮೇಲುಕೋಟೆ ಹೋಬಳಿ, ಪಾಂಡವಪುರ ತಾಲ್ಲೂಕು, ಮಂಡ್ಯ ಜಿಲ್ಲೆ.

ಎರಡನೇ ವರ್ಷದ ಸವಿನೆನಪು




ಶ್ರೀಮತಿ ಪುಟ್ಟಮ್ಮನವರು
(ಕೆ.ಆರ್. ಪೇಟೆ ಅಂಚಿಗರಹಳ್ಳಿ ಗ್ರಾಮದ ದಿ.ಕೃಷ್ಣೇಗೌಡರ ಧರ್ಮಪತ್ನಿ)

ನೀವು ನಮ್ಮನ್ನಗಲಿ ಇಂದಿಗೆ 2 ವರ್ಷ ಕಳೆದರೂ ನಿಮ್ಮ ನೆನಪು ನಮ್ಮ ಮನದಲ್ಲಿ ಹಚ್ಚಹಸಿರಾಗಿದೆ

ಸದಾ ನಿಮ್ಮ ನೆನಪಿನಲ್ಲಿರುವ,
ಮಗ: ಕೆ.ಚಂದ್ರಶೇಖರ್, ಗುತ್ತಿಗೆದಾರರು
ಮಗಳು: ಲಕ್ಷ್ಮೀ ಜಯಕೃಷ್ಣೇಗೌಡ, ಮಕ್ಕಳು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗ
ಹಳ್ಳದ ಮನುಗನಹಳ್ಳಿ, (ಭೈರವ ಫಾರಂ), ಮೈಸೂರು.

5ನೇ ವರ್ಷದ ಸವಿನೆನಪು



H.B.ಭೋರೇಗೌಡರು

ನೀವು ನಮ್ಮನ್ನಗಲಿ ಇಂದಿಗೆ 5 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ ದುಃಖತಪ್ತರು: ಕುಟುಂಬವರ್ಗ, ಹೊಸಹುಂಡಿ

14ನೇ ವರ್ಷದ ಸವಿನೆನಪು



ಶ್ರೀಮತಿ ಚನ್ನಮ್ಮ

,ಸದಾ ನಿಮ್ಮ ನೆನಪಿನಲ್ಲಿರುವ
ಪತಿ ಚನ್ನನಾಯಕ, ಹೆಣ್ಣು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಮತ್ತು ಕುಟುಂಬವರ್ಗದವರು

ಸವಿನೆನಪು



ಶ್ರೀಕಾಂತ್ .ಸಿ
ಸಂಸ್ಥಾಪಕರು: ಶ್ರೀ ಕನ್ಸಲ್ಟೆಂಟ್ಸ್, ಮೈಸೂರು

ನಿಮ್ಮೊಂದಿಗೆ ಕಳೆದ ಕ್ಷಣಗಳು ಅವಿಸ್ಮರಣೀಯ
ನೀವು ದೈಹಿಕವಾಗಿ ನಮ್ಮೊಂದಿಗಿಲ್ಲ, ಆದರೆ ಬಾಹ್ಯವಾಗಿ
ನೀವು ಮಾಡಿರುವ ಕೆಲಸಗಳಲ್ಲಿ ನಮ್ಮ ಜೊತೆಯೇ ಇರುವಿರಿ

ಸದಾ ನಿಮ್ಮ ನೆನಪಿನಲ್ಲಿರುವ:
ಶ್ರೀ ಕನ್ಸಲ್ಟೆಂಟ್ಸ್ ಮೈಸೂರು
ಮ್ಯಾನೇಜ್‌ಮೆಂಟ್ ಹಾಗೂ ಸಿಬ್ಬಂದಿವರ್ಗ

PUBLIC NOTICE

Notice is hereby given that my clients Dr. Dayananda K.M., S/o Sri Madaiah, R/at Kurubaradoddi Village, Atguru Hobli, Mandya and Mr. Kumara. G, S/o Gowdegowda, aged about 38 years, residing at No. 1311, 12th Cross Road, Vijayanagar 1st Stage, Mysore-17 intends to entered into the Joint Development Agreement in respect of the schedule properties belonging to Sri Bheemegowda and Smt. R. Rajani, both are jointly R/at #133/1, 9th Main, 4th Stage, Mahaveera Hostel Road, T.K. Layout, Mysore.

Any persons claiming right, title or interest in the said properties or any part thereof by way of sale, gift, lease, inheritance, exchange, mortgage, charge, lien, trust, possession, easement, attachment or otherwise how-so-ever are hereby required to make the same known to the undersigned at his office within 7 days fromt he date hereof, failing, which, the said transactions will be completed, without any reference in such claim and the same, if any shall be considered as waived.

SCHEDULE

1) All the piece and parcel of the agricultural land bearing Sy.No. 143/2, 136/2, 139/2, 47/1 and 137/2 with an extent of 7 Acre 32 guntas situated at Shanthipura Village, Kasaba Hobli, H.D. Kote Taluk, Mysore District and bounded by: East by: Property of Smt. Jayamma ; West by: H.D. Kote to Hunsur Main Road ; North by: Sy.No. 48 and Heeball Tank ; South by: H.D. Kote to Hunsur Main Road.

Sd/- Abhinandan, Advocate,
Office address: 7/4-E, 5th Main, 1st Cross, Jayanagara, Mysuru-14.
Mob: 9964426903, 8105796222.
Email: advabhinandan@gmail.com
Date: 5-12-2022

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರು ಈ ಕೆಳಗೆ ನಮೂದಿಸಿರುವ ಷೆಡ್ಯೂಲ್ ಸ್ವತ್ತನ್ನು ಅದರ ಮಾಲೀಕರಾದ ಲೇಟ್ ಮನೆಯಪಂಡ ಅಣ್ಣಯ್ಯ ಬೆಳ್ಳಿಯಪ್ಪ ಮತ್ತು ಶ್ರೀಮತಿ ಬೆಳ್ಳಿಯಪ್ಪ ರವರ ವಾರಸುದಾರರಾದ ಎಂ.ಬಿ. ತಿಮ್ಮಯ್ಯ, ನಾನು ತಿಮ್ಮಯ್ಯ, ಬಿ. ಪೊನ್ನಮ್ಮ ಗಣಪತಿ, ಪಿ. ತಂಗಮ್ಮ ಬೆಳ್ಳಿಯಪ್ಪ, ಸಿ.ಎಂ. ಚನ್ನಪ್ಪ, ನಿಖಿಲ್ ನಂಜಪ್ಪ ಚಿನ್ನಪ್ಪ ಚೌರೀರ ರವರಿಂದ ಖರೀದಿಸಲಿಚ್ಛಿಸಿರುತ್ತಾರೆ.

ಈ ಕೆಳಗೆ ನಮೂದಿಸಿರುವ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾರಿಗಾದರೂ, ಯಾವ ಇಲಾಖೆಗಾದರು ಅಥವಾ ಯಾವುದೇ ಸಂಸ್ಥೆಗಾದರು ಅಥವಾ ಇನ್ನಿತರ ಯಾರಿಗಾದರು ಹಕ್ಕು ಭಾದ್ಯತೆ ಅಥವಾ ಯಾವುದೇ ತಂಟೆತಕರಾರು ಇದ್ದಲ್ಲಿ ಈ ಪ್ರಕಟಣೆ ದಿನಾಂಕದಿಂದ 15 ದಿವಸಗಳೊಳಗೆ ಈ ಕೆಳಕಂಡ ವಿಳಾಸದಾರರಿಗೆ ಯಾವುದೇ ವ್ಯಕ್ತಿಗಳು ದಾಖಲೆಸಹಿತ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಮುಂದೆ ನಮ್ಮ ಕಕ್ಷಿದಾರರು ಮೇಲ್ಕಂಡ ಮಹನೀಯರಿಂದ ಸದರಿ ಷೆಡ್ಯೂಲ್ ಸ್ವತ್ತನ್ನು ಶುದ್ಧ ಕ್ರಯ ಪತ್ರದ ಮೂಲಕ ಕೆಳಕಂಡ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ತಂಟೆ ತಕರಾರು ಅಥವಾ ಹಕ್ಕು ಭಾದ್ಯತೆ ಇಲ್ಲವೆಂದು ತಿಳಿದು ನೋಂದಣಿ ಮಾಡಿಕೊಳ್ಳುವರೆಂದು ಈ ಮೂಲಕ ತಿಳಿಸಲಾಗಿದೆ.

ಷೆಡ್ಯೂಲ್

ಮೈಸೂರು ಸಿಟಿ, ವಾಣಿವಿಲಾಸ ಮೊಹಲ್ಲಾ, 4ನೇ ಮುಖ್ಯರಸ್ತೆಯಲ್ಲಿರುವ ಸಿಟಿ ಇಂಪ್ರೂಮೆಂಟ್ ಟ್ರಸ್ಟ್ ಬೋರ್ಡ್ ನಿಂದ ಮಂಜೂರಾಗಿ ಮಾರಾಟವಾಗಿರುವ ಸೈಟ್ ನಂ. 47, ಬ್ಲಾಕ್ ನಂ. 2 (ಎ) ಮನೆ ನಂ. 2752, ಹೊಸ ನಂ. 6 ಅಥವಾ ಡಿ–6 ವಿಸ್ತೀರ್ಣ 79 ಅಡಿ x 96 ಅಡಿ ಅಂದಾಜು 7,584 ಚದರಡಿ ಅಳತೆಯ ನಿವೇಶನ ಮತ್ತು ಇದರಲ್ಲಿ ಕಟ್ಟಿರುವ ಸುಮಾರು 2300 ಚದರಡಿಯ ಕಟ್ಟಡ ಇದಕ್ಕೆ ಚಕ್ಕುಬಂದಿ:

ಪೂರ್ವಕ್ಕೆ: ನಂ. 2775 ಡಿ–5 (ಸಿಐಟಿಬಿ ನಿವೇಶನ ಸಂಖ್ಯೆ 48) ; ಪಶ್ಚಿಮಕ್ಕೆ: ನಂ. ಡಿ–7 (ಸಿಐಟಿಬಿ ನಿವೇಶನ ಸಂಖ್ಯೆ 46) ; ಉತ್ತರಕ್ಕೆ: 4ನೇ ಮುಖ್ಯ ರಸ್ತೆ ; ದಕ್ಷಿಣಕ್ಕೆ: ಕನ್ಸರ್‌ವೆನ್ಸಿ.

Sd/- S. Umesh, Advocate,
'Madhav Bhavan',
#369, Jhansi Lakshmi Bai Road, Mysuru-570 005.
email: umeshadvocate1@gmail.com
Mob: 94483 42677

ದಿನಾಂಕ: 5–12–2022
ಮೈಸೂರು

25ನೇ ವರ್ಷದ ವಿವಾಹ ವಾರ್ಷಿಕೋತ್ಸವ



ಶ್ರೀಮತಿ ಶಾರದ ಶ್ರೀ ಜಗದೀಶ್
ಶುಭಕೋರುವವರು: ಎಂ.ಡಿ.ಸೋಮಣ್ಣ, ಮಂಜುಳ, ವರ್ಷಿಣಿ, ದರ್ಶನ್ ಚಾಮುಂಡಿಬೆಟ್ಟ

70ನೇ ವರ್ಷದ ಹುಟ್ಟುಹಬ್ಬದ ಶುಭಾಶಯಗಳು



ಶ್ರೀ ಯಜಮಾನ್ ಎಸ್. ಕೃಷ್ಣಶೆಟ್ಟಿ (Rtd. ASI)

ಜನುಮ ದಿನದ ಈ ಆನಂದ ಇರಲಿ ಎಂದೆಂದು ಬಾಳ ತುಂಬಾ ಹರಸಲಿ ಆ ದೇವರು ನೀವಿಡುವ ಪ್ರತಿ ಹೆಜ್ಜೆಯಲ್ಲೂ ಯಶಸ್ಸು ಸಿಗಲೆಂದು ಪ್ರಾರ್ಥಿಸುವ,
ಪತ್ನಿ ಶ್ರೀಮತಿ ಎನ್.ಎಸ್. ಲಲಿತಮ್ಮ ಸಹೋದರಿಯರು, ಸಹೋದರ, ಮಕ್ಕಳು, ಅಳಿಯಂದಿರು, ಸೊಸೆ, ಮೊಮ್ಮಕ್ಕಳು, ಅಪಾರ ಬಂಧು ಮಿತ್ರರು, ಸಿದ್ಧಲಿಂಗಪುರದ ಗ್ರಾಮಸ್ಥರು, ಮೈಸೂರು ತಾ॥
ಮೊಬೈಲ್: 9448600660



ಕರ್ನಾಟಕ ಸರ್ಕಾರ – ಹಿಂದೂ ಧಾರ್ಮಿಕ ದತ್ತಿ ಇಲಾಖೆ

ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯ, ನಂಜನಗೂಡು

ಚಿಕ್ಕಜಾತ್ರಾ ಮಹೋತ್ಸವ – 2022

ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯದಲ್ಲಿ 2022ರ ಶ್ರೀ ಚಿಕ್ಕಜಾತ್ರಾ ಮಹೋತ್ಸವದ ಪ್ರಯುಕ್ತ ಜರುಗುವ ಪ್ರಮುಖ ಧಾರ್ಮಿಕ ಕಾರ್ಯಕ್ರಮಗಳು:

1	ದಿ: 05–12–2022 ಸೋಮವಾರ	ಸಂಜೆ 7.00 ಗಂಟೆಗೆ	"ಶ್ರೀ ಶ್ರೀಕಂಠಮುಡಿ ಉತ್ಸವ"
2	ದಿ: 07–12–2022 ಬುಧವಾರ	ಸಂಜೆ 7.00 ಗಂಟೆಗೆ	"ಶ್ರೀ ಶಿವದೀಪೋತ್ಸವ"
3	ದಿ: 08–12–2022 ಗುರುವಾರ	ಬೆಳಿಗ್ಗೆ: 09–40ರಿಂದ 10–40 ಗಂಟೆಯೊಳಗೆ	"ಶ್ರೀ ಮನ್ಮಹಾರಥಾರೋಹಣ"
4	ದಿ: 10–12–2022 ಶನಿವಾರ	ಸಂಜೆ 7.00 ಗಂಟೆಗೆ	"ಕಪಿಲಾ ನದಿಯಲ್ಲಿ ತೆಪ್ಪೋತ್ಸವ"

ಚಿಕ್ಕಜಾತ್ರಾ ಮಹೋತ್ಸವಗಳಿಗೆ ನೀವು ಮತ್ತು ನಿಮ್ಮ ಪುತ್ರ, ಮಿತ್ರ, ಕಳತ್ರ ಬಂಧು ಜನ ಸಮೇತರಾಗಿ ಬಂದು ಶ್ರೀ ಶ್ರೀಯವರ ಸೇವೆಯ ಮಾಡಿ ಕೃತಾರ್ಥರಾಗಲು ವಿನಂತಿಸುತ್ತೇವೆ.

ವಿಶೇಷ ಮನವಿ: ದೇವಾಲಯದ ವತಿಯಿಂದ ಪ್ರತಿ ದಿನ ನಡೆಸಲ್ಪಡುತ್ತಿರುವ ಅನ್ನದಾಸೋಹಕ್ಕೆ ಸೇವಾರ್ಥ ರೂಪದಲ್ಲಿ ದವಸ ಧಾನ್ಯ ಮತ್ತು ಇತರೇ ಪದಾರ್ಥಗಳು ಹಾಗೂ ನಗದು ಕಾಣಿಕೆಯನ್ನು ಕೃತಜ್ಞತಾ ಪೂರ್ವಕವಾಗಿ ಸ್ವೀಕರಿಸಲಾಗುವುದು.

ಜೆ. ನಾಗಚಂದ್ರ ದೀಕ್ಷಿತ್, ಆಗಮಿಕರು, ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯ, ನಂಜನಗೂಡು.

ಎಂ. ಜಗದೀಶ್ ಕುಮಾರ್, ಕಾರ್ಯನಿರ್ವಾಹಕ ಅಧಿಕಾರಿ, ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯ, ನಂಜನಗೂಡು.

ಡಾ. ಬಿ.ಎಸ್. ಮಂಜುನಾಥಸ್ವಾಮಿ, ಕ.ಅ.ಸೇ. (ಆಯ್ಕೆ ಶ್ರೇಣಿ), ಆಡಳಿತಾಧಿಕಾರಿ ಹಾಗೂ ಅಪರ ಜಿಲ್ಲಾಧಿಕಾರಿ, ಮೈಸೂರು ಜಿಲ್ಲೆ, ಮೈಸೂರು.

ಡಾ. ರಾಜೇಂದ್ರ ಕೆ.ವಿ., ಐ.ಎ.ಎಸ್. ಜಿಲ್ಲಾಧಿಕಾರಿ, ಮೈಸೂರು ಜಿಲ್ಲೆ, ಮೈಸೂರು.

ಸಹಿ/– **ಕಾರ್ಯನಿರ್ವಾಹಕ ಅಧಿಕಾರಿ**, ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯ, ನಂಜನಗೂಡು.

ನಗರಸಭಾ ಕಾರ್ಯಾಲಯ, ಹುಣಸೂರು

CITY MUNICIPAL COUNCIL, HUNSUR MYSORE, Mysore District-571105

E-mail : itstaff_ulb_hunsur@yahoo.co.in ಫೋನ್: 08222-252048

ನಂ.ಹುನಕಾ/ವಿ.ನಿ/ಮಳಿಗೆ/ಪಿಆರ್/01/2021-22 ದಿನಾಂಕ: 23/11/2022

ಕರಡು ಬಹಿರಂಗ ಮರು ಹರಾಜು ಇಸ್ತಿಹಾರ್ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಹುಣಸೂರು ನಗರಸಭಾ ವ್ಯಾಪ್ತಿಗೆ ಒಳಪಡುವ ಸಂತೆ ಮೈದಾನದಲ್ಲಿ, ನಗರಸಭಾ ವತಿಯಿಂದ ವಿವಿಧ ಯೋಜನೆಯಡಿ ನಿರ್ಮಿಸಿರುವ ವಾಣಿಜ್ಯ ಮಳಿಗೆಗಳ ಬಾಡಿಗೆ ಅವಧಿಯು ಮುಕ್ತಾಯಗೊಂಡಿದ್ದು, ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು ರವರ **ಸುತ್ತೋಲೆ ಸಂಖ್ಯೆ: ನಅಇ/301/ಜಿಇಎಲ್/2017 ದಿನಾಂಕ: 19–07–2019** ರ ಅನ್ವಯ ಹಾಗೂ ದಿನಾಂಕ 21.09.2021 ರಂದು ನಡೆದ ಕೌನ್ಸಿಲ್ ಸಾಮಾನ್ಯ ವಿಷಯ ಸಂಖ್ಯೆ (34) ರ ರೀತ್ಯಾ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಮೈಸೂರು ಜಿಲ್ಲೆ ಮೈಸೂರು ರವರ ಆದೇಶ ಸಂಖ್ಯೆ:ಮುನಿಸಿ(3) ಮಳಿಗೆ/ಸಿ.ಆರ್–404/2020–21 ದಿನಾಂಕ 30.06.2021 ರಂತೆ ಮಾಹೆಯಾನ ಬಾಡಿಗೆ ಆಧಾರದ ಮೇರೆಗೆ 12 ವರ್ಷದ ಅವಧಿಗೆ ಮರು ಪಾವತಿಸುವ ರೂಪದಲ್ಲಿ ವಿಲೇವಾರಿ ಮಾಡಲು ತೀರ್ಮಾನಿಸಲಾಗಿದ್ದು, ದಿನಾಂಕ 22.02.2022 ಮತ್ತು 23.02.2022 ರಂದು ಬಹಿರಂಗ ಹರಾಜನ್ನು ಕರೆಯಲಾಗಿ ಯಾರು ಭಾಗವಹಿಸದ ಕಾರಣ, ದಿನಾಂಕ 04.08.2022 ರ ಕೌನ್ಸಿಲ್ ನಿರ್ಣಯ ಸಂಖ್ಯೆ (11)ರ ತೀರ್ಮಾನದ ರೀತ್ಯಾ, ಹಾಗೂ ಮರು ಹರಾಜಗಾದೆ ಉಳಿದಿದ್ದ ಕೋಳಿ ಮತ್ತು ಮೀನಿನ ಅಂಗಡಿಗೆ ಕಾಯ್ದಿರಿಸಿದ ಮಳಿಗೆಗಳು 1, 2, 3, 4, 5 ಹಾಗೂ 2022–23ನೇ ಸಾಲಿನ ವಾರ್ಷಿಕ ಹರಾಜಿನಲ್ಲಿ ಮೇಕೆ ಮಾಂಸ ಮಾರಾಟ ಮಳಿಗೆ ಸಂಖ್ಯೆ.09 (1) ಮಾಡಲು 50 ಸಂಖ್ಯೆ ಮಳಿಗೆಗಳ ಪೈಕಿ 29 ಹಾಗೂ 37 ಸಂಖ್ಯೆ ಮಳಿಗಗಳ ಪೈಕಿ 22, 25 ಹಾಗೂ ದೇವಿ ಪ್ರಸಾದ್ ಎದುರು ಇರುವ 07 ವಾಣಿಜ್ಯ ಮಳಿಗೆಗಳ ಪೈಕಿ 04, 05, 06 ಸದರಿ ಮಳಿಗೆಗಳಲ್ಲಿ ವಾಣಿಜ್ಯ/ತರಕಾರಿ ವ್ಯಾಪಾರ ನಡೆಸಲು ಹಕ್ಕು ಪಡೆಯುವ ಆಸಕ್ತರು ದಿನಾಂಕ 27.12.2022 ರ ಸಂಜೆ 5–00 ಗಂಟೆಯೊಳಗಾಗಿ ಠೇವಣಿ ಮೊತ್ತವನ್ನು ಪೌರಾಯುಕ್ತರು ನಗರಸಭೆ ಹುಣಸೂರು ರವರ ಹೆಸರಿನಲ್ಲಿ ಡಿ.ಡಿ ಖರೀದಿಸಿ ಕಛೇರಿಗೆ ನೀಡುವುದು. ಹಾಗೂ ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಕಂದಾಯ ಶಾಖೆಯ ಸಿಬ್ಬಂದಿ, ನಗರಸಭೆ, ಹುಣಸೂರು ಇವರನ್ನು ಸಂಪರ್ಕಿಸಬಹುದಾಗಿದೆ.

ಸಂತೆ ಮೈದಾನದಲ್ಲಿರುವ 50 ವಾಣಿಜ್ಯ ಮಳಿಗೆಗಳ ಪೈಕಿ ಮಳಿಗೆ ಸಂಖ್ಯೆ.29 ರ ವಿವರ

ಕ್ರ.ಸಂ	ಮಳಿಗೆ ಸಂಖ್ಯೆ ಹಾಗೂ ವರ್ಗ	ಮಳಿಗೆಯ ವಿಸ್ತೀರ್ಣ ಅಡಿಗಳಲ್ಲಿ	ಮಳಿಗೆಗೆ ನಿಗಧಿಪಡಿಸಿರುವ ಬಡ್ಡಿ ರಹಿತ ಠೇವಣಿ ಮೊತ್ತ	ನಿಗಧಿಸಿದ ಕನಿಷ್ಠ ಮಾಸಿಕ ಬಾಡಿಗೆ (ರೂ.ಗಳಲ್ಲಿ) (ಸೇವಾ ತೆರಿಗೆ ಪ್ರತ್ಯೇಕ)	ಹರಾಜು ವಿಧಾನ	ಹರಾಜಿನಲ್ಲಿ ಭಾಗವಹಿಸುವವರು ಡಿ.ಡಿ ಪಡೆದು ಸಲ್ಲಿಸಬೇಕಾಗಿರುವ ಮೊತ್ತ	ಹರಾಜು ಸ್ಥಳ, ಸಮಯ & ದಿನಾಂಕ
1	29 (ಸಾಮಾನ್ಯ)	9x9.3 ಅಡಿ	50,000–00	305–00	ಬಹಿರಂಗ ಹರಾಜು	20,000–00	ನಗರಸಭಾ ಕಛೇರಿಯ ಸಭಾಂಗಣದಲ್ಲಿ ದಿನಾಂಕ 28.12.2022 ರ ಸಮಯ ಬೆಳಿಗ್ಗೆ 10.30 ರಿಂದ ಪ್ರಾರಂಭ

ಸಂತೆ ಮೈದಾನದಲ್ಲಿರುವ 37 ವಾಣಿಜ್ಯ ಮಳಿಗೆಗಳ ಪೈಕಿ ಮಳಿಗೆ ಸಂಖ್ಯೆ 22, 25, ರ ವಿವರ

ಕ್ರ.ಸಂ	ಮಳಿಗೆ ಸಂಖ್ಯೆ ಹಾಗೂ ವರ್ಗ	ಮಳಿಗೆಯ ವಿಸ್ತೀರ್ಣ ಅಡಿಗಳಲ್ಲಿ	ಮಳಿಗೆಗೆ ನಿಗಧಿಪಡಿಸಿರುವ ಬಡ್ಡಿ ರಹಿತ ಠೇವಣಿ ಮೊತ್ತ	ನಿಗಧಿಸಿದ ಕನಿಷ್ಠ ಮಾಸಿಕ ಬಾಡಿಗೆ (ರೂ.ಗಳಲ್ಲಿ) (ಸೇವಾ ತೆರಿಗೆ ಪ್ರತ್ಯೇಕ)	ಹರಾಜು ವಿಧಾನ	ಹರಾಜಿನಲ್ಲಿ ಭಾಗವಹಿಸುವವರು ಡಿ.ಡಿ ಪಡೆದು ಸಲ್ಲಿಸಬೇಕಾಗಿರುವ ಮೊತ್ತ	ಹರಾಜು ಸ್ಥಳ, ಸಮಯ & ದಿನಾಂಕ
1	25 (ಸಾಮಾನ್ಯ)	10x9	50,000–00	500–00	ಬಹಿರಂಗ ಹರಾಜು	20,000–00	ನಗರಸಭಾ ಕಛೇರಿಯ ಸಭಾಂಗಣದಲ್ಲಿ ದಿನಾಂಕ 28.12.2022 ಮುಂದುವರೆದ ಸಮಯ
2	22(ಪರಿಶಿಷ್ಟ ಜಾತಿ)	10x9	50,000–00	500–00	ಬಹಿರಂಗ ಹರಾಜು	20,000–00	ನಗರಸಭಾ ಕಛೇರಿಯ ಸಭಾಂಗಣದಲ್ಲಿ ದಿನಾಂಕ 28.12.2022 ಮುಂದುವರೆದ ಸಮಯ

ಸರ್ಕಾರ ಮಾರ್ಗಸೂಚಿ ಅನುಸಾರ ಪರಿಶಿಷ್ಟ ಜಾತಿಯ ವರ್ಗದವರಿಗೆ ಮೀಸಲಿರಿಸಿದ್ದು ಹರಾಜಿನಲ್ಲಿ ಭಾಗವಹಿಸಬಹುದಾಗಿದೆ. (ಜಾತಿ ದೃಡೀಕರಣ ಪತ್ರವನ್ನು ಕಡ್ಡಾಯವಾಗಿ ಹಾಜರುಪಡಿಸುವುದು.)

ನಗರಸಭೆಯ ಬಿ.ಎಂ ರಸ್ತೆ ದೇವಿ ಪ್ರಸಾದ್ ಹೋಟೆಲ್ ಎದುರು ಇರುವ 07 ನೂತನ ವಾಣಿಜ್ಯ ಮಳಿಗೆಗಳ ಪೈಕಿ ಮಳಿಗೆ ಸಂಖ್ಯೆ 04, 05, 06 ವಾಣಿಜ್ಯ ಮಳಿಗೆಗಳ ವಿವರ.

ಕ್ರ.ಸಂ	ಮಳಿಗೆ ಸಂಖ್ಯೆ ಹಾಗೂ ವರ್ಗ	ಮಳಿಗೆಯ ವಿಸ್ತೀರ್ಣ ಅಡಿಗಳಲ್ಲಿ	ಮಳಿಗೆಗೆ ನಿಗಧಿಪಡಿಸಿರುವ ಕನಿಷ್ಠ ಠೇವಣಿ ಮೊತ್ತ	ನಿಗಧಿಸಿದ ಕನಿಷ್ಠ ಮಾಸಿಕ ಬಾಡಿಗೆ (ರೂಗಳಲ್ಲಿ)	ಹರಾಜು ವಿಧಾನ	ಹರಾಜಿನಲ್ಲಿ ಭಾಗವಹಿಸುವವರು ಡಿ.ಡಿ ಪಡೆದು ಸಲ್ಲಿಸಬೇಕಾಗಿರುವ ಮೊತ್ತ	ಹರಾಜು ಸ್ಥಳ, ಸಮಯ & ದಿನಾಂಕ
1	4 (ಅಂಗವಿಕಲರಿಗೆ ಮಾತ್ರ)	21.3 x 6	2,18,000–00	2400–00 (ಸೇವಾ ತೆರಿಗೆ ಪ್ರತ್ಯೇಕ)	ಬಹಿರಂಗ ಹರಾಜು	55,000–00	ನಗರಸಭಾ ಕಛೇರಿಯ ಸಭಾಂಗಣದಲ್ಲಿ ದಿನಾಂಕ 28.12.2022 ಮುಂದುವರೆದ ಸಮಯ
2	5 (ಸಾಮಾನ್ಯ)	21.3 x 10.3	3,75,000–00	4050–00 (ಸೇವಾ ತೆರಿಗೆ ಪ್ರತ್ಯೇಕ)	"—"	95,000–00	
3	6 (ಸಾಮಾನ್ಯ)	21.3 x 10.3	3,75,000–00	4050–00 (ಸೇವಾ ತೆರಿಗೆ ಪ್ರತ್ಯೇಕ)	"—"	95,000–00	

ನಗರಸಭೆಯ ಸಂತೇ ಮೈದಾನದ ಕಸಾಯಿ ಖಾನೆ ಪಕ್ಕದಲ್ಲಿ ನಿರ್ಮಿಸಿರುವ 05 ನೂತನ ಮಳಿಗೆಗಳು

(ಈ ಕೆಳಕಂಡ 05 ಮಳಿಗೆಗಳಲ್ಲಿ 02 ಮಳಿಗೆಗಳನ್ನು ಮೀನು ಮಾರಾಟಕ್ಕೆ, 03 ಮಳಿಗೆಗಳನ್ನು ಕೋಳಿ ಮಾಂಸ ಮಾರಾಟಕ್ಕೆ ಕಾಯ್ದಿರಿಸಲಾಗಿದೆ)

ಕ್ರ.ಸಂ	ಮಳಿಗೆ ಸಂಖ್ಯೆ	ಅಳತೆ	ಹರಾಜಿನಲ್ಲಿ ಭಾಗವಹಿಸಲು ಮೂಲಕ ಪ್ರತಿ ಮಳಿಗೆಗೆ ಕಟ್ಟಬೇಕಾಗಿರುವ ಠೇವಣಿ ಮೊತ್ತ	ನಿಗಧಿಸಿದ ಕನಿಷ್ಠ ಮಾಸಿಕ ಬಾಡಿಗೆ (ರೂಗಳಲ್ಲಿ)	ಹರಾಜು ವಿಧಾನ	ಹರಾಜಿನಲ್ಲಿ ಭಾಗವಹಿಸುವವರು ಡಿ.ಡಿ ಪಡೆದು ಸಲ್ಲಿಸಬೇಕಾಗಿರುವ ಮೊತ್ತ	ಹರಾಜು ಸ್ಥಳ, ಸಮಯ & ದಿನಾಂಕ
1	1 ಸಾಮಾನ್ಯ	8.6 x 12	1,50,000–00	1785–00 (ಸೇವಾ ತೆರಿಗೆ ಪ್ರತ್ಯೇಕ)	ಬಹಿರಂಗ ಹರಾಜು	32,000–00	ನಗರಸಭಾ ಕಛೇರಿಯ ಸಭಾಂಗಣದಲ್ಲಿ ದಿನಾಂಕ 28.12.2022 ಮುಂದುವರೆದ ಸಮಯ
2	2 ಸಾಮಾನ್ಯ	8.6 x 12	1,50,000–00	1785–00 (ಸೇವಾ ತೆರಿಗೆ ಪ್ರತ್ಯೇಕ)	"—"	32,000–00	
3	3 ಸಾಮಾನ್ಯ	8.6 x 12	1,50,000–00	1785–00 (ಸೇವಾ ತೆರಿಗೆ ಪ್ರತ್ಯೇಕ)	"—"	32,000–00	
4	4 ಸಾಮಾನ್ಯ	8.6 x 12	1,50,000–00	1785–00 (ಸೇವಾ ತೆರಿಗೆ ಪ್ರತ್ಯೇಕ)	"—"	32,000–00	
5	5 ಪರಿಶಿಷ್ಟ ಜಾತಿ & ಪ.ಪಂಗಡ	8.6 x 12	1,50,000–00	1785–00 (ಸೇವಾ ತೆರಿಗೆ ಪ್ರತ್ಯೇಕ)	"—"	32,000–00	

ಸರ್ಕಾರದ ಮಾರ್ಗಸೂಚಿ ಅನುಸಾರ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡ ವರ್ಗದವರಿಗೆ ಮೀಸಲಿರಿಸಬೇಕಾಗಿರುವುದರಿಂದ ಮಳಿಗೆ ನಂ.05 ಪರಿಶಿಷ್ಟ ಜಾತಿ ರವರಿಗೆ ಮತ್ತು ಪರಿಶಿಷ್ಟ ಪಂಗಡದವರು ಹರಾಜಿನಲ್ಲಿ ಭಾಗವಹಿಸಬಹುದಾಗಿದೆ. (ಜಾತಿ ದೃಢೀಕರಣ ಪತ್ರವನ್ನು ಹಾಜರುಪಡಿಸುವುದು)
ಷರತ್ತು: 5 ಮಳಿಗೆಗಳ ರೋಲಿಂಗ್ ಶೆಟ್ಟರ್‌ನ್ನು ಪಶ್ಚಿಮ ದಿಕ್ಕಿನಿಂದ ಪೂರ್ವ ದಿಕ್ಕಿಗೆ ಬದಲಾಯಿಸುವ ಷರತ್ತಿಗೆ ಒಳಪಡಿಸಿದೆ.

2022–23ನೇ ಸಾಲಿನ ವಾರ್ಷಿಕ ಹರಾಜು

ಕ್ರ.ಸಂ	ಬಾಬ್ತುಗಳ ವಿವರ	ಅವಧಿ	ಹರಾಜು ನಡೆಯುವ ದಿನಾಂಕ ಮತ್ತು ಸ್ಥಳ	ಠೇವಣಿ ಮೊತ್ತ
1	ಸಂತೆ ಮಾಳದಲ್ಲಿರುವ ಮಾಂಸದ ಅಂಗಡಿಗಳ ವಿವರ 1 ರಿಂದ 10 ರವರೆಗೆ ಮಾಂಸದ ಅಂಗಡಿ ಪೈಕಿ 9ನೇ ಮಾಂಸದ ಅಂಗಡಿ (ನೂತನ ಕಟ್ಟಡದಲ್ಲಿ)	ಹರಾಜಾದ ದಿನದಿಂದ 31–03–2023 ರವರೆಗೆ	ನಗರಸಭಾ ಕಛೇರಿಯ ಸಭಾಂಗಣದಲ್ಲಿ ದಿನಾಂಕ 28.12. 2022 ಮುಂದುವರೆದ ಸಮಯ	30,000–00

ಷರತ್ತು ಮತ್ತು ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ನಗರಸಭೆಯ ಕಂದಾಯ ಶಾಖೆಯ ಅಧಿಕಾರಿ/ಸಿಬ್ಬಂಧಿಯವರಿಂದ ಮಾಹಿತಿ ಪಡೆಯಬಹುದಾಗಿರುತ್ತದೆ.

ಸಹಿ/– ಶ್ರೀಮತಿ ಗೀತಾ, ಅಧ್ಯಕ್ಷರು, ನಗರಸಭೆ ಹುಣಸೂರು

ಸಹಿ/– ಶ್ರೀಮತಿ ಹೆಚ್.ಡಿ. ಆಶಾ, ಉಪಾಧ್ಯಕ್ಷರು, ನಗರಸಭೆ ಹುಣಸೂರು

ಸಹಿ/– ಶ್ರೀಮತಿ ಶ್ವೇತಾ, ಸ್ಥಾಯಿ ಸಮಿತಿ ಅಧ್ಯಕ್ಷರು, ನಗರಸಭೆ ಹುಣಸೂರು

ಸಹಿ/– ಶ್ರೀಮತಿ ಮಾನಸ.ಎಂ (ಕೆ.ಎಂ.ಎ.ಎಸ್ ಶ್ರೇಣಿ–I) ಪೌರಾಯುಕ್ತರು, ನಗರಸಭೆ, ಹುಣಸೂರು